ಗೌರಿ ಲಂಕೇಶರ

ಲಂಕೇಶ್

ಜುಲೈ 12, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಶಬರಿಮಲೈನಲ್ಲಿ

- ಕೋಟ್ಯಂತರ ರೂ. ಗುಳುಂ
- ಹೆಂಡ-ಗಾಂಜಾ-ಏಡ್ಸ್

ಮುಚ್ಚಿಹಾಕಲು ಜಯಮಾಲಾ


ಬಲಿ!



ಶಾಸಕ ಬಾಲರಾಜ್: ರಾಸಲೀಲೆ, ಗುಂಡೇಟು!




ಹುಬ್ಬಳ್ಳಿ RTO ಕಮಾಯಿ : 1 ಕೋಟಿ ರೂಪಾಯಿ



ಪೊಲೀಸ್ ವರದಿ

ಡ್ರಗ್ಸ್ ದಂಧೆಯಲ್ಲಿ ಮಂತ್ರಿ ಮಕ್ಕಳು!

KAS ಪರೀಕ್ಷೆ-ಅರ್ಜೆಂಟ್ ಯಾಕೆ?



ಮೈಸೂರಿನ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಪ್ರಯೋಗಗೊಂಡ 'ಲಂಕೇಶರಿಗೆ ನಮಸ್ಕಾರ' ಇನ್ನೂ ಮನದಲ್ಲಿ ಹಚ್ಚ ಹಸಿರಾಗಿದೆ. ಶಿಬಿರಾರ್ಥಿಗಳು ಅಭಿನಯಿಸಿದ ನಾಟಕವೇ ಅಥವಾ ವೃತ್ತಿ ನಿರತರು ಅಭಿನಯಿಸಿದ ನಾಟಕವೇ ಎಂಬ ಅನುಮಾನ ಮೂಡುವಷ್ಟು ಪರಿಪಕ್ವ ಪ್ರಯೋಗ.


ಲಂಕೇಶರಿಗೆ ನಮಸ್ಕಾರ

ಈ ತಿಂಗಳ 23,24,25ನೆ ತಾರೀಖುಗಳಲ್ಲಿ ಮೈಸೂರಿನ ರಂಗಾಯಣದ ಭೂಮಿಗೀತ ರಂಗ ಮಂದಿರದಲ್ಲಿ ಪ್ರಯೋಗಗೊಂಡ 'ಲಂಕೇಶರಿಗೆ ನಮಸ್ಕಾರ' ಒಂದು ಅರ್ಥಪೂರ್ಣ ರಂಗಪ್ರಯೋಗ. ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ರಂಗಾಸಕ್ತ ಯುವಜನರಿಗೆ ಒಂದು ತಿಂಗಳ ವಸತಿಸಹಿತ 'ಯುವರಂಗ ಶಿಬಿರ' ನಡೆಸಿದ ರಂಗಾಯಣ ಆ ಶಿಭಿರಾರ್ಥಿಗಳಿಂದಲೇ 'ಲಂಕೇಶರಿಗೆ ನಮಸ್ಕಾರ'ವನ್ನು ಪ್ರಯೋಗಿಸಿತು. ಪ್ರಸಿದ್ಧ ರಂಗ ನಿರ್ದೇಶಕರಾದ ಸಿ. ಬಸವಲಿಂಗಯ್ಯ ಈ ನಾಟಕವನ್ನು ನಿರ್ದೇಶಿಸಿದ್ದರು.

ರಂಗಾಯಣ ನಮ್ಮ ರಾಜ್ಯವಷ್ಟೇ ಅಲ್ಲ, ಇಡೀ ದೇಶದಲ್ಲೇ ಕಳೆದ 18 ವರ್ಷಗಳಿಂದ ನಿರಂತರ ತರಬೇತಿಗಳ ಮೂಲಕ ರಂಗಭೂಮಿಯನ್ನು ಸಶಕ್ತಗೊಳಿಸಿದ ಒಂದು ರಂಗಕಾಶಿ. ಅದರೊಂದಿಗೆ 'ರಂಗಕಿಶೋರ' ಎಂಬ ಮತ್ತೊಂದು ರಂಗ ತಂಡವಿದೆ. ರಂಗಾಯಣ ಮತ್ತು ರಂಗಕಿಶೋರದ ನಾಟಕಗಳು ವಾರಾಂತ್ಯದಲ್ಲಿ ಮೈಸೂರನ್ನು ಕ್ರಿಯಾರಂಗಗೊಳಿಸಿರುತ್ತವೆ. ಕಳೆದ ಹತ್ತು ವರ್ಷಗಳಿಂದ ಮಕ್ಕಳಿಗಾಗಿ 'ಚಿಣ್ಣರ ಮೇಳ' ನಡೆಸುತ್ತಿರುವ ರಂಗಾಯಣ ಮಕ್ಕಳಿಗೆ ಪರ್ಯಾಯ ಶಿಕ್ಷಣ ನೀಡುತ್ತದೆ. ಇಂಥ ಹಲವು ಚಟುವಟಿಕೆಗಳ ನಡುವೆ ಆಗಾಗ ನಡೆಯುವ ತರಬೇತಿ ಶಿಬಿರಗಳೂ ಅಷ್ಟೇ ಮಹತ್ವದ್ದಾಗಿವೆ. ಬಿ.ವಿ. ಕಾರಂತ, ಸಿ. ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆಯಂಥ ರಂಗತಜ್ಞರ ನೇತೃತ್ವದಲ್ಲಿ ರಂಗಾಯಣ ಸಾಧಿಸಿರುವ ಯಶಸ್ಸು ನಾಡಿನ ಸಾಂಸ್ಕೃತಿಕ ಲೋಕಕ್ಕೆ ದೊರೆತ ಯಶಸ್ಸೇ ಆಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ರಂಗಾಯಣ ರಾಷ್ಟ್ರೀಯ ನಾಟಕ ಶಾಲೆಗೂ ಮೀರಿ ತನ್ನ ಪ್ರಯೋಗಗಳನ್ನು ಜನತೆಯ ಮುಂದಿಟ್ಟಿದೆ. ಪ್ರಯೋಗ, ಸಂವಾದ, ಶಿಬಿರ, ನಾಟಕೋತ್ಸವ, ಗ್ರಂಥಾಲಯ ಮುಂತಾದವುಗಳ ಮೂಲಕ ರಂಗಪ್ರಜ್ಞೆ ಹೆಚ್ಚಿಸಿರುವ ಈ ಸಂಸ್ಥೆಯ ಪ್ರಯೋಗಗಳನ್ನು ಹದಿನೆಂಟು ವರ್ಷಗಳಿಂದಲೂ ಕಂಡಿರುವ ನಾನು ಅದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

'ಲಂಕೇಶರಿಗೆ ನಮಸ್ಕಾರ' ಇನ್ನೂ ಮನದಲ್ಲಿ ಹಚ್ಚ ಹಸಿರಾಗಿದೆ. ಶಿಬಿರಾರ್ಥಿಗಳು ಅಭಿನಯಿಸಿದ ನಾಟಕವೇ ಅಥವಾ ವೃತ್ತಿ ನಿರತರು ಅಭಿನಯಿಸಿದ ನಾಟಕವೇ ಎಂಬ ಅನುಮಾನ ಮೂಡುವಷ್ಟು ಪರಿಪಕ್ವ ಪ್ರಯೋಗವಾಗಿತ್ತು. ಲಂಕೇಶ್ ಕನ್ನಡದ ಬಹಳ ದೊಡ್ಡ ಲೇಖಕ, ಕವಿ, ವಿಮರ್ಶಕ, ಕಾದಂಬರಿಕಾರ, ಕತೆಗಾರ, ನಾಟಕಕಾರ, ಪತ್ರಕರ್ತ ಹಾಗೂ ಸಂಸ್ಕೃತಿ ಚಿಂತಕ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೊದಲ ಹಂತದಲ್ಲಿ ಕುವೆಂಪು ಎದುರಿಸಿದ ಸಾಂಸ್ಕೃತಿಕ ಸವಾಲುಗಳನ್ನು ನವ್ಯ ಸಂದರ್ಭದಲ್ಲಿ ಲಂಕೇಶ್ ಎದುರಿಸಬೇಕಾಯಿತು. ಲಂಕೇಶರ ನಾಟಕಗಳು ರಚನೆಯಾದ ಕಾಲಕ್ಕಿಂತ ಆ ನಂತರದ ಕಾಲದಲ್ಲಿ ಹೆಚ್ಚು ಪ್ರಸ್ತುತವಾಗಿವೆ. ಅಸಂಗತತೆ, ಅಸ್ತಿತ್ವದ ನೆಲೆಗಳನ್ನು ತಮ್ಮ ಸರೀಕ ಬರಹಗಾರರಿಗಿಂತ ಭಿನ್ನ ನೆಲೆಯಿಂದ ಚಿಂತಿಸಿದವರು, ಬರೆದವರು ಲಂಕೇಶ್. ತಮ್ಮ ನೇರ ಮಾತುಗಳಿಂದ ಹಲವರಿಗೆ ಚುಚ್ಚಿದವರು ಮತ್ತು ಸಿಟ್ಟಿಗೆ ಗುರಿಯಾದವರು. ಸುತ್ತಿ ಬಳಸಿ ಕೂಡಿ ಕಳೆದು ಗುಣಿಸಿ ಏನೇ ಮಾಡಿದರೂ ಲಂಕೇಶರ ಬರಹದ ಖದರ್ರೇ ಬೇರೆ. ಉಳಿದ ನವ್ಯ ಬರಹಗಾರರು ಅವರ ಬರಹದ ಮುಂದೆ 'ಸ್ವಲ್ಪ ಉಪ್ಪು ಕಮ್ಮಿಯೆ'. ಈ ಮಾತನ್ನು ನಾನು ಸಾಹಿತ್ಯದ ವಿದ್ಯಾರ್ಥಿಯಾಗಿ ಗ್ರಹಿಸಿದಂತೆ, ಮೊನ್ನೆ ಬಸವಲಿಂಗಯ್ಯನವರ ರಂಗಪ್ರಯೋಗ ನೋಡಿದ ಮೇಲೆ ನನ್ನ ಅನಿಸಿಕೆ ಇನ್ನೂ ಹೆಚ್ಚು ಖಚಿತ ಎನಿಸಿದೆ. ಕನ್ನಡ ನವ್ಯ ಸಾಹಿತ್ಯದ ಕ್ರಿಯಾಶೀಲತೆ, ವಿಮರ್ಶೆ ಬಹುವಾಗಿ ಲಂಕೇಶರನ್ನು ಕಾರ್ನರ್ ಮಾಡಲಿಕ್ಕೆ ಬಳಕೆಯಾದದ್ದು ಚರಿತ್ರೆಯ ಸಂಗತಿ. ಕಾಲ ಸರಿದರೂ ಅವರ ಗಿಳಿಯು ಪಂಜರದೊಳಿಲ್ಲ, ತೆರೆಗಳು, ಸಂಕ್ರಾಂತಿ, ಗುಣಮುಖದಂಥ ನಾಟಕಗಳು ಇಂದಿಗೂ ಪ್ರಸ್ತುತ. ಅವು ಸಾವಿಲ್ಲದ ನಾಟಕಗಳು. ಗುಣಮುಖ ಬರೆದ ಕಾಲಕ್ಕೆ ಅದನ್ನು ಪ್ರಯೋಗಿಸಲಿಕ್ಕೂ ಹಿಂದು ಮುಂದೆ ನೋಡಿದ



ತಂಡಗಳು ಮುಂದೆ ಅದು ಎಂಥ ಮಹತ್ವ ನಾಟಕ ಎಂಬುದನ್ನು ಮನಗಂಡವು. ಒಬ್ಬ ಲೇಖಕ ಹೀಗೆ ಕಾಲದ ದೃಷ್ಟಿಯಲ್ಲಿ ಗೆದ್ದು ನಿಲ್ಲುವುದು ಅವನು ಜೀವನವನ್ನು ಕಂಡ ಬಗೆಯಿಂದ.

ಪ್ರಸ್ತುತ 'ಲಂಕೇಶರಿಗೆ ನಮಸ್ಕಾರ' ನಾಟಕ ಲಂಕೇಶರ 'ಹುಳಿಮಾವಿನ ಮರ', 'ಟೀಕೆ-ಟಿಪ್ಪಣಿ', 'ಗಿಳಿಯು ಪಂಜರದೊಳಿಲ್ಲ', 'ತೆರೆಗಳು' ಮುಂತಾದ ಕೃತಿಗಳ ಒಂದು ಸಮ್ಮಿಶ್ರ ರಂಗಪಠ್ಯ. ಬಸವಲಿಂಗಯ್ಯನವರ ರಂಗಪಠ್ಯ ಲಂಕೇಶರ ಕೃತಿಗಳ ಹೊಸಜೀವವನ್ನು ಅನಾವರಣಗೊಳಿಸಿದೆ. ಲೇಖಕ ಕೇಂದ್ರಿತ ಸಮ್ಮಿಶ್ರ ಪಠ್ಯ ಕಟ್ಟುವಲ್ಲಿ ನಿರ್ದೇಶಕರು ಕುಶಲಿಗಳು. ಹಿಂದೆ 'ದ್ಯಾವನೂರು' ನಾಟಕ (ನೀನಾಸಂ ತಿರುಗಾಟಕ್ಕೆ ನಿರ್ದೇಶಿಸಿದ್ದು) ಅಂಥ ಒಂದು ಉತ್ತಮ ಪ್ರಯೋಗ ವಾಗಿತ್ತು. ಬಸವಲಿಂಗಯ್ಯ ನಿರಂತರವಾಗಿ ಹೊಸ ಹೊಸ ರಂಗ ಸಾಧ್ಯತೆ ಮತ್ತು ಪ್ರಯೋಗಗಳನ್ನು ಅನ್ವೇಷಿಸುತ್ತಿರುವ ನಿರ್ದೇಶಕ. ಬಹಳ ಅಪರೂಪದ ಓದುಗ. ಸ್ವತಃ ಕತೆಗಾರ, ಕವಿ ಮತ್ತು ಅನುವಾದಕ. ಉತ್ತರ ಕರ್ನಾಟಕದ ಬಯಲಾಟದಿಂದ ಜಗತ್ತಿನ ಎಲ್ಲಾ ರಂಗಚಟುವಟಿಕೆಗಳನ್ನೂ ಬಲ್ಲ ವಾಗ್ಮಿ.

ಲಂಕೇಶರ ನಾಟಕಗಳ ಜೀವಂತಿಕೆ ಮತ್ತು ಪ್ರಸ್ತುತತೆಯ ಬಗ್ಗೆ ಅಪಾರ ಒಲವಿರುವ ಅವರು ಕಟ್ಟಿರುವ ಈ ರಂಗಪಠ್ಯ ಹೊಸ ಬಗೆಯದು. ಸದಾ ಜೀವಪರ ಆಲೋಚನೆಗೆ, ಸಮಕಾಲೀನ ಅಪಾಯಕಾರಿ ಜೀವನಕ್ಕೆ ಕನ್ನಡದ ಮನಸ್ಸು ಪ್ರತಿಕ್ರಿಯಿಸಿರುವ ಬಗ್ಗೆ ವಿಚಿತ್ರ ಕುತೂಹಲ ಮತ್ತು ಆತಂಕ ಹೊಂದಿರುವ ಬಸವಲಿಂಗಯ್ಯನವರಿಂದ ಮಾತ್ರ ಇಂಥ ಪ್ರಯೋಗಗಳು ಸಾಧ್ಯ. ಅವರ ಮಾದಾರಿ ಮಾದಯ್ಯ, ಸಂತ್ಯಾಗ ನಿಂತಾನ ಕಬೀರ, ಸಂಕ್ರಾಂತಿ, ಉಚಲ್ಯಾ, ಶೂದ್ರ ತಪಸ್ವಿ, ಕುಸುಮ ಬಾಲೆ, ಗಾಂಧಿ V/s ಗಾಂಧಿ, ಅಗ್ನಿ ಮತ್ತು ಮಳೆ, ಬೆರಳ್ಗೆ ಕೊರಳ್, ಕುಲಂ, ಆಕಾಶಬುಟ್ಟಿ, ಎಂಥ ಮೋಜಿನ ಕುದುರಿ-ಎಲ್ಲವೂ ಒಂದಕ್ಕಿಂತ ಒಂದು ಭಿನ್ನ ಕಥಾವಸ್ತು ಮತ್ತು ಸವಾಲೆನಿಸುವ ರಂಗ ಪ್ರಯೋಗಗಳು. ಇಂಥ ನಿರ್ದೇಶಕರಿಂದ ಕನ್ನಡ ರಂಗ ಜಗತ್ತು ವಿಸ್ತಾರಗೊಳ್ಳುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ.

ಶಿಬಿರಾರ್ಥಿಗಳ 'ಲಂಕೇಶರಿಗೆ ನಮಸ್ಕಾರ' ಕೂಡ ಒಂದು ಭಿನ್ನ ಅನುಭವ ನೀಡುತ್ತದೆ. ಲಂಕೇಶರು ಹುಳಿಮಾವಿನ ಮರದಲ್ಲಿ ತಮ್ಮ ಹಾಗೂ ತಮ್ಮ ಹಿಂದಿನ ತಲೆಮಾರುಗಳ ಬಗ್ಗೆ ಪರಿಚಯಿಸಿಕೊಳ್ಳುವುದರಿಂದ ಆರಂಭವಾಗಿ 'ಜೆರುಸಲೇಂ' ನಂಥ ಪದ್ಯದ ಮೂಲಕ, 'ಅವ್ವ' ಕವಿತೆಯ ವಾಚನದ ಮೂಲಕ, 'ಗಿಳಿಯು ಪಂಜರದೊಳಿಲ್ಲ'ದಲ್ಲಿ ಜೀವಂತವಿದ್ದೂ ಶವವಾದ ಮನುಷ್ಯ ಸಣ್ಣತನ ಅನಾವರಣವಾದಂತೆ, 'ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ' ಲೇಖನದ ಬಹು ಮುಖ್ಯ ಮಾತುಗಳು ಈ ದೇಶದ ಮತಾಂಧತೆಗೆ ನೀಡುವ ವ್ಯಾಖ್ಯಾನದಿಂದ, 'ತೆರೆಗಳು' ನಾಟಕದಲ್ಲಿ ಸಹಾಯ ಮಾಡಲು ಹೋದ ಪ್ರೊಫೆಸರ್ ಹೇಗೆ ತಾನೇ ಭಯೋತ್ಪಾದಕನಾಗುವ ಸ್ಥಿತಿ ತಲುಪುತ್ತಾನೆಂಬ ಆತಂಕ ಕಾರಿ ಕ್ಷಣಗಳನ್ನು ನಮ್ಮ ಮುಂದೆ ಮಂಡಿಸುತ್ತದೆ. ಲಂಕೇಶ್ ಅನಾವರಣ ಮಾಡುವ ಮಾನವಲೋಕ ಜಗತ್ತಿನ ಯಾವುದೇ ಶ್ರೇಷ್ಠ ಕತೆಗಾರ, ನಾಟಕಕಾರನಿಗಿಂತ ಕಡಿಮೆಯಾದುದಲ್ಲ ಎಂಬುದನ್ನು ಒಂದು ಗಟ್ಟಿ ಅನುಭವವಾಗಿಸುವತ್ತ ನಾಟಕ ತನ್ನ ಕೈ ಚಾಚಿ ಯಶಸ್ವಿಯಾಗಿದೆ.

ಇದಕ್ಕೆ ಪೂರಕವಾಗಿ ಕೇವಲ ಓದಬಹುದಾದ, ಹಾಡಲು ಸಾಧ್ಯವೇ ಇಲ್ಲ ಎನ್ನುವ ಸಾಲುಗಳಿಗೆ ಶ್ರೀನಿವಾಸ ಭಟ್ ಲವಲವಿಕೆಯ ಸಂಗೀತ ನೀಡಿ ಲಂಕೇಶರ ಗದ್ಯವೂ ಹಾಡಾಗಬಹುದಾದ ಸಾಧ್ಯತೆಯನ್ನು ಮಂಡಿಸುತ್ತದೆ. ಅವರ ಸಂಗೀತ ಆಗಾಗ ಮನದಲ್ಲಿ ಅನುಕರುಣಿಸುತ್ತಲೇ ಇರುತ್ತದೆ. ನಾಟಕಕ್ಕೆ ಮತ್ತೊಂದು ಬಗೆಯ ಮೆರುಗನ್ನು ಕೊಟ್ಟದ್ದು ಎಚ್.ಕೆ. ದ್ವಾರಕಾನಾಥ್ ಮಾಡಿರುವ ರಂಗವಿನ್ಯಾಸ. 'ಗಿಳಿಯು...' ಭಾಗಕ್ಕೆ ಜೀವಂತ ವಿದ್ದೂ ಶವವಾಗಿರುವ ಸ್ಥಿತಿಗೆ ಆಕಾಶವೇ ಪಂಜರವಾಗಿ ಮೇಲಿಂದ ಬೀಳುವ ಪರಿ ಇಡೀ ನಾಟಕಕ್ಕೆ ಹೊಸ ಅರ್ಥಗಳನ್ನು ನೀಡುವಷ್ಟು ಪರಿಣಾಮಕಾರಿಯಾಗಿದೆ. ನಾಟಕ ಓದಿದಾಗ ಆಗದ ಮತ್ತು ಇಲ್ಲದ ಅನುಭವಗಳನ್ನು ವಿಸ್ತರಿಸುವುದೇ ರಂಗಪಠ್ಯದ ಮುಖ್ಯ ಉದ್ದೇಶ. ಅದು ಪ್ರಯೋಗದ ಉದ್ದಕ್ಕೂ ಅಲ್ಲಲ್ಲಿ ಮಿಂಚುತ್ತದೆ.

'ಗಲಾಟೆ ಬೇಡ' ಎಂದು ಮಲೆಯಾಳಿ ಶೈಲಿಯಲ್ಲಿ ಮಾತಾಡುವ ಗೋಪಾಲಕೃಷ್ಣ 'ಅಪ್ಪ ಒಳಗಿದ್ದಾರೆ. ಯಾಕಪ್ಪಾ ಸುಳ್ಳೇಳಿದೆ' ಎನ್ನುವ ಭಾವನಾ ಘಂಟಿ, 'ನನ್ನಂಥ ಕಳ್ಳನಿಗಿರುವ ನಿಯತ್ತೂ ನಿನಿಗಿಲ್ಲವಲ್ಲಯ್ಯ' ಎನ್ನುವ ಶಿವಕುಮಾರ. FTVಯ ಫ್ಯಾಷನ್ ಷೋ, ಹೊಡಿಮಗ ಹೊಡಿಮಗ ಹಾಡು, ಲಂಕೇಶರ ಪಾತ್ರ ನೆನಪಿಸುವ ರಮೇಶ ಪಾಲಸಂದ್ರ ಮುಂತಾದವರು ನಟರಾಗಿ ನಮ್ಮ ಮನದಲ್ಲಿ ಅಚ್ಚಳಿಯದೆ ಉಳಿಯುತ್ತಾರೆ. 'ಲಂಕೇಶರಿಗೆ ನಮಸ್ಕಾರ' ಒಂದೆರಡು ಹನಿ ಕಣ್ಣೀರಿಂದಲೇ ಅಂತ್ಯವಾಗುತ್ತದೆ. ಬಸವಲಿಂಗಯ್ಯನವರಿಗೆ ಥ್ಯಾಂಕ್ಸ್. ಇಂಥ ಪ್ರಯೋಗ ಮಾಡಿಸಿದ ರಂಗಾಯಣಕ್ಕೂ ನಮಸ್ಕಾರ.


ಇಷ್ಟರ ನಡುವೆ ಬಾಕಿ ಉಳಿದ ಎರಡು ಮಾತುಗಳೆಂದರೆ ಒಂದು ಇಂಥ ನಾಟಕಗಳು ಶಿಬಿರದ ಮುಕ್ತಾಯ ಕಾರ್ಯಕ್ರಮವಷ್ಟೇ ಆಗದೆ ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಭಾಗದಲ್ಲಿ ಪ್ರಯೋಗಕ್ಕೆ ಅನುವು ಮಾಡಬೇಕು. 'ಲಂಕೇಶರಿಗೆ ನಮಸ್ಕಾರ' ಒಂದೇ ಪ್ರಯೋಗಕ್ಕೆ ಮುಗಿಸುವ ಕಾರ್ಯಕ್ರಮವಾಗಬಾರದು. ಏಕೆಂದರೆ ನಾಡಿನಾದ್ಯಂತ ಲಂಕೇಶರ ಅಭಿಮಾನಿ ಬಳಗ ಇದೆ; ಅವರು ಹಚ್ಚಿದ ಅದೆಷ್ಟೋ ಹಣತೆಗಳಿಗೆ ಇನ್ನೊಂದಷ್ಟು ಜೀವನೋತ್ಸಾಹದ ಎಣ್ಣೆ ದಕ್ಕುತ್ತದೆ.

– ಡಾ. ರಾಜಪ್ಪ ದಳವಾಯಿ

ಇತಿಹಾಸ

'ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು' ಎನ್ನುತ್ತಾರೆ ಅಂಬೇಡ್ಕರ್. ನಮ್ಮ ವರ್ತಮಾನದ ವರ್ತನೆಗಳು ಇತಿಹಾಸದಿಂದ ನಿರ್ದೇಶಿಸಲ್ಪಡುವಂತೆಯೇ 'ಗತ'ದ ಓರೆಕೋರೆಗಳನ್ನು ಇಂದಿನ ಪ್ರಜ್ಞೆಯಿಂದ ತಿದ್ದಲೂ ಬೇಕಾಗುತ್ತದೆ. ಆದರೆ ಅದು 'ತಿರುಚುವ' ಅರ್ಥ ಪಡೆಯಬಾರದು. ಈ ಸಲದ ಸೂಕ್ತಿಗಳು 'ಇತಿಹಾಸ' ಕುರಿತವು. ಇದನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲಿಕುಂಟೆಯ ಎಚ್.ಕೆ. ರಾಮಕೃಷ್ಣ ಸಂಗ್ರಹಿಸಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

– ಮೂರ್ತಿ



ಹರಿವ ಕೃಷ್ಣೆ ಮತ್ತು ವಿಭಾ

ಬಿಕ್ಕಳಿಸಬೇಡ ಕೃಷ್ಣೆ
ನಿನ್ನ ಮಗಳು
ಸತ್ತುಹೋದಳೆಂದು;
ಸಾವು ನಮ್ಮ ಹಿಂಬಾಲಿಸುವ ನೆರಳು

ಗೊತ್ತು ಕೃಷ್ಣೆ;
ನಿನ್ನ ಮಗಳು ನಿನ್ನ ಹಾಗೆಯೇ;
ನೋವು ಬವಣೆ ಬೆಂಕಿಗಳ ನುಂಗಿ
ಶಬ್ದಗಳಾಗಿ ಹರಿದಳು

ಆರ್ತತೆ ಅದು;
ಸಾವಿಲ್ಲದ ಕೇಡಿಲ್ಲದ ಹಾದಿ
ಅನೂಹ್ಯ, ಅನಂಗ, ನಿಸ್ಸಂಗನಿಗೊಲಿ
ಶಬ್ದಧ್ಯಾನ,
ಅಲ್ಲಮನ ಬಯಲ ಪಥ;
ಕವಿತೆಯ ಸಾಲು ಸಾಲಲ್ಲೂ
ಸೂಫಿ ಸಂತರ ನೆರಳು

ಅಳಬೇಡ ಕೃಷ್ಣೆ;
ನಿನ್ನ ಮಗಳು ಸತ್ತುಹೋದಳೆಂದು,
ಹರಿವ ನಿನ್ನ ಕಣ್ಣ ಮುಂದೆ
ಎಷ್ಟು ಜನ ಗೌಡಿಕೆ ಮಾಡಿದರು;
ಗಡಿಕಟ್ಟಿ ಆಳಿದರು,
ಗುಡಿಕಟ್ಟಿ ಆಳಿದರು,
ಯಾರು ಬದುಕಿದ್ದಾರೆ ಹೇಳು?
ಬದುಕುತ್ತದೆ ಬೆಳಕು
ನಿನ್ನ ಮಗಳು

ಕಣ್ಣೀರು ಒರೆಸಿಕೋ ಕೃಷ್ಣೆ
ಸಾವು ಯಾರ ಮನೆಯ
ಕದ ತಟ್ಟಿಲ್ಲ ಹೇಳು?
ಸತ್ತಿಲ್ಲ ನಿನ್ನ ಮಗಳು
ಸದಾ ಹಸಿರು;
ಕಬ್ಬಿನ ಪಡ
ಮಹಾಲಿಂಗಪುರದ ಅಚ್ಚಿನ ಬೆಲ್ಲ
ಕನ್ನಡದ ಮೂಲೆ ಮೂಲೆಗೆ
ಹಂಚಿದಳು ಇದ್ದಷ್ಟು ದಿನ

ಅಳಬೇಡ ಕೃಷ್ಣೆ
ಅದು ಸದಾ ಮಿಡಿವ
ಜೀವ ಮಿಡಿತದ ಸದ್ದು
ಸಾವಿಲ್ಲ ಅದಕ್ಕೆ.....

-ಬಸವರಾಜ ಹೂಗ



ಕನ್ನಡ ಸಾಹಿತ್ಯಲೋಕದ ಬಹು ದೊಡ್ಡ ಆಸ್ತಿಯಾಗಬಹುದಾಗಿದ್ದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದ ಕವಯತ್ರಿ ವಿಭಾ ಅಕಾಲಿಕ ಸಾವಿಗೆ ತುತ್ತಾದರು. ಅವರ ನೆನಪಿಗಾಗಿ ಈ ಕವಿತೆ.

ಇತಿಹಾಸವು ಬದಲಾಗದ ಗತಕಾಲದ ವೃತ್ತಾಂತವಾಗಿದೆ -ಅರಿಸ್ಟಾಟಲ್

ಕಲ್ಲಿಗಿಂತಲೂ ಕಡೆಯಾದೆಯಾ ಹೆಣ್ಣೇ?

ಎಂಜಲಿಲ್ಲದ ಜಾಗ, ಮುಟ್ಟಿಲ್ಲದ ಸ್ಥಳ ಈ ...ನಲ್ಲಿ ಎಲ್ಲೂ ಇಲ್ಲ. ಮೊದಲು ನಿನ್ನ ದೇಹಾನೇ ...ಟ್ಟು ಇನ್ನೊಬ್ಬರ್ನ ಮುಟ್ಟು ಅನ್ನಬೌದಾ ನಿನ್ನ ... ಹಾಳಾಗ...

...ತಾಯಿ ಹೊಟ್ಟೇಲಿ ಒಂಭತ್ತು ತಿಂಗಳಿದ್ದು ಅವಳ ...ಟ್ಟಿ ಹಾಳು ಮಾಡಿ ಬಂದಿದ್ದಕ್ಕೆ, ಎಲ್ಲರೂ ...ಟ್ಟ್ಯಾಳರೇ...'

...ಮಂಟೇಸ್ವಾಮಿ ಕಾವ್ಯದ ಸಾಲುಗಳಿವು. ಇದನ್ನು ...ಯಮಾಲಾ-ಅಯ್ಯಪ್ಪ ಪ್ರಕರಣದ ಹಿನ್ನೆಲೆಯಲ್ಲಿ ...ಡಬೇಕಿದೆ.



...ನಟಿ ಜಯಮಾಲಾರವರು ...ರಿಮಲೈನಲ್ಲಿರುವ ಅಯ್ಯಪ್ಪ ...ರ ವಿಗ್ರಹವನ್ನು ಮುಟ್ಟಿದ್ದರು ...ದರ ಸುತ್ತ ನಡೆಯುತ್ತಿರುವ ...ಯಲ್ಲಿ ನನಗೆ ಎದ್ದು ಕಾಣುತ್ತಿರು... ನಮ್ಮ ಸಮಾಜದಲ್ಲಿ ಮಹಿಳೆ...ಗೆ ನೀಡಿರುವ ಸ್ಥಾನ. ಮಹಿಳೆ... ಬ್ಬರು ಕಲ್ಲಿನ ವಿಗ್ರಹವನ್ನು ...ಟ್ಟಿದ್ದಕ್ಕೆ, ಅದಕ್ಕೆ ಕಳಂಕ ತಾಗಿತು ...ವ ಜನಕ್ಕೆ ತಲೆಯೂ ಇಲ್ಲ, ...ನವೀಯತೆಯೂ ಇಲ್ಲ. ಏಕೆಂದರೆ ...ಸಮಾಜದಲ್ಲಿ ಅಥವಾ ಧರ್ಮ... ಕನಸು, ಮನಸು, ಆಶಯ, ...ವನೆ, ರಕ್ತ, ಮಾಂಸ ಹೊಂದಿರುವ ...ನ್ನು ಇದ್ಯಾವುದನ್ನೂ ಹೊಂದಿರದ ...ಗಿಂತಲೂ ಕಡೆ ಎಂಬ ಮನೋ...ದ ಅಡಗಿರುವುದು ಸ್ಪಷ್ಟವಾಗಿದೆ. ...ನ್ನು 'ಧರ್ಮ' ಎಂದು ಕರೆಯುವು... ದರೂ ಹೇಗೆ?

...ಮರವೊಂದರ ಕಾಯಿ ಬೀಜ ಆಗುವುದಕ್ಕೂ, ...ಹಿಳೆ ಮುಟ್ಟಾಗುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ. ...ು ಪ್ರಕೃತಿ ಸಹಜ ಮಾತ್ರವಲ್ಲ, ಫಲಶಕ್ತಿ ಮತ್ತು ...ಯ ಪ್ರಕ್ರಿಯೆ. ಆದರೆ ಇದನ್ನು ಅರಿಯದ ಜನ ...ಹಿಳೆಯನ್ನು ಕೊಳಕು, ಕೀಳು ಎಂದು ಬಣ್ಣಿಸಿದ್ದಾರೆ. ...ರಂತವೆಂದರೆ ಅದನ್ನು ಹಲವು ಮಹಿಳೆಯರೂ ... ನಂಬಿದ್ದಾರೆ. ಫಲವತ್ತತೆ ಮತ್ತು ಸೃಷ್ಟಿಯ ಪ್ರಕ್ರಿಯೆ ...ಗೆ ಹೊಲಸಾಗುತ್ತದೆ? ಅದನ್ನು ಹೊಂದಿರುವ ಹೆಣ್ಣು ...ಗೆ ಕೀಳಾಗುತ್ತಾಳೆ? ಹಾಗೊಮ್ಮೆ ಹೆಣ್ಣನ್ನು ಕೊಳಕು, ...ು ಎನ್ನುವುದಾದರೆ ಈ ಭೂಮಿಯ ಪ್ರತಿ ಕಣವೂ ...ಳಕು; ಕೀಳು. ಅದರಿಂದ ಉತ್ಪತ್ತಿಯಾಗುವ ಎಲ್ಲ ...ಣ್ಣು ಹೂ ಫಸಲು ಅಸ್ಪೃಶ್ಯ.

ಆದರೆ ಮನುಷ್ಯ ಸೃಷ್ಟಿಸಿರುವ ಧರ್ಮಗಳಿಗೆ, ಅವುಗಳ ದೇವರಿಗೆ ಭೂಮಿಯ ಹಣ್ಣು, ಹೂ, ಫಸಲು ಬೇಕು; ಭೂಮಿಯಂತೆಯೇ ಸೃಷ್ಟಿಸುವ ಶಕ್ತಿ ಹೊಂದಿರುವ ಮಹಿಳೆಯ ಸ್ಪರ್ಶ ಅಪರಾಧ, ಅಸಹ್ಯ.

ಬಹುತೇಕ ಧರ್ಮಗಳು ಮಹಿಳಾ ವಿರೋಧಿಗಳೇ. ಆದರಲ್ಲೂ 'ಹಿಂದೂ ಧರ್ಮ'ದ್ದು ಎತ್ತಿದ ಕೈ! ಇದಕ್ಕೆ ಪ್ರಸ್ತುತ ಚರ್ಚೆಯಲ್ಲಿರುವ ಶಬರಿಮಲೈ ಉತ್ತಮ ಉದಾಹರಣೆ. ಈ 'ಪವಿತ್ರ ಕ್ಷೇತ್ರ' ದ ಹೆಮ್ಮೆಯ ವಿಷಯ ಯಾವುದೆಂದರೆ ಇಲ್ಲಿಗೆ 'ಹಿಂದೂ ಧರ್ಮ'ದ ಎಲ್ಲ ಜಾತಿಯ ಪುರುಷರೂ ಭಕ್ತಾದಿಗಳಾಗಿ ಬರುತ್ತಾರೆಂಬುದು. ಅಷ್ಟರಮಟ್ಟಿಗೆ ಇದೊಂದು 'ಜಾತ್ಯತೀತ' ಸ್ಥಳ. ಆದರೆ ಇಂತಹ 'ಜಾತ್ಯತೀತ' ಸ್ಥಳದಲ್ಲಿ ಎಲ್ಲ ಜಾತಿಯವರಿಗೆ ಪ್ರವೇಶ ವಿದ್ದರೂ ಮಹಳೆಯರಿಗೆ ಮಾತ್ರ ಪ್ರವೇಶವಿಲ್ಲ.

ಇದಕ್ಕೆ ಶಬರಿಮಲೈನ ಅಧಿಕಾರಿಗಳು ನೀಡುವ ಕಾರಣಗಳೇನು? ದೇವಸ್ಥಾನವನ್ನು ತಲಪಲು ಕಾಡು ದಾರಿಯಲ್ಲಿ ಎಂಟು ಕಿಲೋ ಮೀಟರ್ ನಡೆಯುವುದು ಮಹಿಳೆಯರಿಗೆ ಕಷ್ಟ; ಮಹಿಳೆಯರನ್ನು ನೋಡಿದರೆ ಅಯ್ಯಪ್ಪನ ಬ್ರಹ್ಮಚಾರಿತ್ಯ ಕಳಂಕಗೊಳ್ಳುತ್ತದೆ; ಶಬರಿಮಲೈಗೆ ತೀರ್ಥಯಾತ್ರೆ ಕೈಗೊಳ್ಳುವ ಮುನ್ನ ಆಚರಿಸ ಬೇಕಿರುವ 41 ದಿನಗಳ ವ್ರತವನ್ನು ಪಾಲಿಸುವುದು ಹೆಂಗಸರಿಗೆ ಕಷ್ಟ; ಮಹಿಳೆಯರು ಜೊತೆಗೆ ಬಂದರೆ ಪುರುಷರಲ್ಲಿ 'ಕೆಟ್ಟ ಆಲೋಚನೆಗಳು' ಮೂಡುತ್ತವೆ; ಮಹಿಳೆಯರಿಗೆ ಪ್ರವೇಶ ನೀಡಿದರೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಕಷ್ಟವಾಗುತ್ತದೆ; ಮುಟ್ಟಾಗಿರುವ ಮಹಿಳೆಯರು ಕಾಡಿನ ಪ್ರಾಣಿಗಳನ್ನು ಆಕರ್ಷಿಸಿ ಇತರೆ ಯಾತ್ರಾರ್ಥಿಗಳಿಗೆ ಅಪಾಯ ತರುತ್ತಾರೆ; ದೇವರಿಗೆ ಮುಟ್ಟಾಗಿರುವ ಮಹಿಳೆಯರನ್ನು ಕಂಡರೆ ಆಗುವುದಿಲ್ಲ.

ಇದೆಲ್ಲಾ ಎಷ್ಟು ಹಾಸ್ಯಾಸ್ಪದವಾಗಿದೆಯಲ್ಲವೆ?

ಬಚೇಂದ್ರಿ ಪಾಲ್‌ರಂತಹ ಮಹಿಳೆಯರು ಎವರೆಸ್ಟ್ ಶಿಖರವನ್ನೇ ಹತ್ತಿರುವಾಗ, ಹೆಂಗಸರು ವ್ರತಗಳಲ್ಲಿ ಅನುಭವ ಪಡೆದಿರುವಾಗ, ಮಹಿಳೆಯರೇ ಇವತ್ತು ಪೊಲೀಸ್ ಅಧಿಕಾರಿಗಳಾಗಿರುವಾಗ ಅವರಿಗೆ ಇದೆಲ್ಲ ಏನು ಮಹಾ? ಹಾಗೆಯೇ ಮಹಿಳೆಯರಿದ್ದರೆ, ದೇವರೂ ಮತ್ತು ಮಾನವರೂ ತಮ್ಮ ಬ್ರಹ್ಮಚಾರಿತ್ಯವನ್ನು ಕಾಪಾಡಿಕೊಳ್ಳುವುದು ಕಷ್ಟ ಎಂದರೆ ಅದು ಮಹಿಳೆಯರ ತಪ್ಪಲ್ಲ, ಬದಲಾಗಿ ತಮ್ಮ ಮೇಲೆಯೇ ಹಿಡಿತ ಹೊಂದಿರದ ಅಯ್ಯಪ್ಪ ಮತ್ತವನ ಭಕ್ತರ ವೈಫಲ್ಯತೆ ಅಷ್ಟೇ!

ಕಂಡಹಾಗೆ



ಈ ಅಯ್ಯಪ್ಪ, ಆತನ ದೇಗುಲದ ಪಾಲಕರು ಮತ್ತು ಭಕ್ತರು ಎಷ್ಟು ಅಮಾನವೀಯರು ಎಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ.

ಹಲವು ವರ್ಷಗಳ ಹಿಂದೆ ಮಹಿಳೆಯೊಬ್ಬಳು ತನ್ನ ಸಂಕಷ್ಟಗಳ ಬಗ್ಗೆ ಅಯ್ಯಪ್ಪನಿಗೆ ಹೇಳುವುದಾಗಿ ನಿರ್ಧರಿಸಿದಳು. ಏಕೆಂದರೆ ಅವಳ ಒಬ್ಬ ಮಗನಿಗೆ ಮೂತ್ರ ಪಿಂಡದ ಕಾಯಿಲೆ ಇತ್ತು. ಇನ್ನೊಬ್ಬ ಮಗ ಬುದ್ಧಿ ಮಾಂದ್ಯನಾಗಿದ್ದ. ಆದರೆ ಆಕೆಯ ದೇವರು ಮತ್ತು ಧರ್ಮಕ್ಕೆ ಅವಳ ಗೋಳನ್ನು ಕೇಳುವ ವ್ಯವಧಾನವಿರಲಿಲ್ಲ. ಆಕೆ ದೇವಸ್ಥಾನವನ್ನು ಸಮೀಪಿಸು ವುದಕ್ಕೆ ಮುನ್ನ ಪೊಲೀಸರು ಅವಳನ್ನು ಬಂಧಿಸಿದರು!

ಇದು ಬರೀ ಧರ್ಮ ಮತ್ತು ಪೊಲೀಸರು ಎಸಗುವ ಅನ್ಯಾಯವಲ್ಲ. ನಾಲ್ಕು ವರ್ಷಗಳ ಹಿಂದೆ ಹಲವು ಮಹಿಳೆಯರು ದೇವಸ್ಥಾನವನ್ನು ಪ್ರವೇಶಿಸಿದ್ದರೆಂದು ಸುದ್ದಿಯಾಗಿತ್ತು, ಆಗ ಕೇರಳದ ನ್ಯಾಯಾಲಯ "ಕೋರ್ಟ್ ಆದೇಶವನ್ನು ಮೀರಿ ಅದು ಹೇಗೆ ಮಹಿಳೆಯರು ದೇವಸ್ಥಾನವನ್ನು ಪ್ರವೇಶಿಸಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಬೇಕು" ಎಂದು ತೀರ್ಪು ನೀಡಿತ್ತು. ಇದರ ಬಗ್ಗೆ ರಾಜೀ ರಾಜಗೋಪಾಲನ್ ಎಂಬುವವರು 'ಕೌಂಟರ್ ಕರೆಂಟ್ಸ್' ಎಂಬ ಪತ್ರಿಕೆಯಲ್ಲಿ ಲೇಖನ ಬರೆದು ಈ ಪ್ರಶ್ನೆಗಳನ್ನು ಕೇಳುತ್ತಾರೆ: "ನ್ಯಾಯಾಲಯವು ಇಂತಹ ಭೇದಭಾವ ಮಾಡುವುದು ಎಷ್ಟು ಸರಿ? ದೇವರ ಹೆಸರಲ್ಲಿ, ಧರ್ಮದ ಹೆಸರಲ್ಲಿ ಮೂಲಭೂತವಾದಿಗಳು ಮಹಿಳಾ ವಿರೋಧಿ ನಿಲುವನ್ನು ತೆಗೆದುಕೊಂಡರೆ ಆಶ್ಚರ್ಯ ಆಗುವುದಿಲ್ಲ. ಏಕೆಂದರೆ ಅವರಿಗೆ ಸರಿಯಾಗಿ ಯೋಚಿಸುವ ಶಕ್ತಿ ಇಲ್ಲ. ಆದರೆ ಬುದ್ಧಿವಂತರು, ನ್ಯಾಯ ನೀಡುವವರು ಇರುವ ನ್ಯಾಯಾಲಯವೇ ಇಂತಹ ತಾರತಮ್ಯ ಏಕೆ ಮಾಡುತ್ತದೆ? 'ಜನರಿಂದ, ಜನರಿಗಾಗಿ, ಜನರಿಗೋಸ್ಕರ' ಇರುವ ಪ್ರಜಾಪ್ರಭುತ್ವದಲ್ಲಿ ಒಂದು ಸಮುದಾಯಕ್ಕೆ ಇಂತಹ ಘೋರ ಅನ್ಯಾಯವೇಕೆ?"

ಇದಕ್ಕೆ ಇನ್ನೂ ಹಲವು ಪ್ರಶ್ನೆಗಳನ್ನು ಸೇರಿಸ ಬಹುದು. ನಮ್ಮ ಸಂವಿಧಾನವೇ ಜಾತಿ, ಧರ್ಮ ಮತ್ತು ಲಿಂಗ ಆಧಾರದ ಮೇಲೆ ತಾರತಮ್ಯ ಮಾಡುವುದು ಅಕ್ಷಮ್ಯ ಎಂದಿರುವಾಗ ಶಬರಿಮಲೈನಂತಹ ಪ್ರಮುಖ ಕ್ಷೇತ್ರದಲ್ಲಿ ಸಂವಿಧಾನಕ್ಕೆ ವಿರುದ್ಧವಾದದ್ದೇ ನಡೆಯುತ್ತದೆ ಎಂದರೆ ಏನರ್ಥ?

ಅಂದಹಾಗೆ, ಸಂವಿಧಾನದ ಪ್ರಕಾರ ಶಬರಿಮಲೈ ದೇವಸ್ಥಾನಕ್ಕೆ ಕೇರಳ ರಾಜ್ಯದ ಸರ್ಕಾರ ಪ್ರತಿವರ್ಷ ಸುಮಾರು 5 ಕೋಟಿ ರೂಪಾಯಿ ದತ್ತಿಯನ್ನು ನೀಡುತ್ತದೆ. ಇದು ಬರೀ ಪುರುಷರಿಂದ ಸಂಗ್ರಹಿಸಿದ ಹಣವಲ್ಲ, ಬದಲಾಗಿ ಎಲ್ಲೋ ನರ್ಸ್ ಆಗಿ ದುಡಿಯುತ್ತಿರುವ, ಟೀ ತೋಟಗಳಲ್ಲಿ ಕೂಲಿಯಾಗಿರುವ, ಟೀಚರ್ ಆಗಿ ಕೆಲಸ ಮಾಡುತ್ತಿರುವ ಮಹಿಳೆಯರಿಂದಲೂ ಸರ್ಕಾರ ತೆರಿಗೆ ರೀತಿಯಲ್ಲಿ ಪಡೆದಿರುವ ಹಣ. ಅಂದರೆ ಇಷ್ಟೇ: ಮಹಿಳೆಯರ ಬೆವರಿನ ದುಡ್ಡು ಅಯ್ಯಪ್ಪನಿಗೆ ಬೇಕು, ಆದರೆ ಆ ಬೆವರಿನ ವಾಸನೆ ಮಾತ್ರ ತಾಗಕೂಡದು?

ನಾಸ್ತಿಕಳಾದ ನಾನು ಶಬರಿಮಲೈ ದೇವಸ್ಥಾನಕ್ಕೆ ಹೋಗುವ ಪ್ರಮೇಯ ಬರುವುದಿಲ್ಲ. ಆದರೆ ದೇವರು, ಧರ್ಮ, ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲೇಬೇಕಿದೆ. ಜಯಮಾಲರವರನ್ನು ಬೆಂಬಲಿಸಬೇಕಿದೆ. ಏಕೆಂದರೆ ಇದು ಜಯಮಾಲ ಅಯ್ಯಪ್ಪನನ್ನು ಸ್ಪರ್ಶಿಸಿದರು ಎಂಬ ಪ್ರಕರಣಕ್ಕಿಂತಲೂ ನಮ್ಮ ಸಮಾಜದಲ್ಲಿ, 'ಹಿಂದೂ ಧರ್ಮ'ದಲ್ಲಿ ಮಹಿಳೆಯರನ್ನು ಕೀಳಾಗಿ ಕಾಣುವ ಪ್ರವೃತ್ತಿಯ ಸಂಕೇತವಾಗಿದೆ; ಹೆಣ್ಣನ್ನು ಕಲ್ಲಿಗಿಂತಲೂ ಕೇಡಾಗಿ ನೋಡುವ ಅನ್ಯಾಯವೂ ಹೌದು.

ಮುಂದೊಂದು ದಿನ ಮಹಿಳೆಯರಿಗೆ ಶಬರಿಮಲೈ ದೇವಸ್ಥಾನವನ್ನು ಪ್ರವೇಶಿಸಲು ಅನುಮತಿ ನೀಡಿದರೆ, ಅದು ದೊಡ್ಡ ಕ್ರಾಂತಿ ಏನಾಗುವುದಿಲ್ಲ. 58 ವರ್ಷಗಳ ಹಿಂದೆಯೇ ದಲಿತರಿಗೆ ದೇಗುಲಗಳನ್ನು ಪ್ರವೇಶಿಸುವ ಹಕ್ಕು ನೀಡಿದ್ದರೂ ಅದರಿಂದ ಅವರ ಅಭಿವೃದ್ಧಿ ಏನಾಗಿಲ್ಲ. ಆದರೆ ಅದರಿಂದ ಹೇಗೆ ದಲಿತರಲ್ಲಿ ಅಡಗಿದ್ದ ಅಸ್ಪೃಶ್ಯ ಮನೋಭಾವ ಕಿಂಚಿತ್ತಾದರೂ ಕಡಿಮೆ ಆಯಿತೋ ಹಾಗೆಯೇ ಮಹಿಳೆಯರಲ್ಲೂ ಆಗಬಹುದೇನೋ ಎಂಬ ಆಶಯ ಅಷ್ಟೇ.

-ಗೌರಿ ಲಂಕೇಶ್

...ಇಮೇಲ್‌ನಲ್ಲೊಂದು ...ಇನ್‌ಲ್ಯಾಂಡ್ ಲೆಟರು!

ಪ್ರೀತಿಯ ರೋಹಿಣಿ ಅಕ್ಕ

ಹ್ಯಂಗದಿರಿ ನೀವು ಎಲ್ಲಾ ಅಲ್ಲಿ... ಮೊನ್ನೆ ಹಾದು ...ಹಗಲೇ ಜಾಹ್ನವಿ ನಿಲೇಕಣಿ ಅಂತಾ Mid-day ...ಪೇಪರ್‌ನ್ಯಾಗ ಓದಿ ಬಾಳ ಬ್ಯಾಸರ ಆತು ಅಕ್ಕವ್ವಾ... ...ನಮ್ಮ ನಿಲೇಕಣಿ ಫ್ಯಾಮಿಲಿ ಅಂದ್ರೇನು, ...ಕಾರವಾರ, ಧಾರವಾಡ ತುಂಬಾ ನಮ್ ...ಹೆಸ್ರು ಹೆಂಗೈತಿ ಅಂತಾ ಗೊತ್ತಿಲ್ಲದ ...ಬಾಡ್‌ಕೊಗಳು ಏನೇನರ ಬರೀ ...ತಾವ....



ಜಾಹ್ನವಿ ತಿಳಿಲಾರದ ಮಾಡಿದ ...ಸ್ ತಪ್ಪಿಗೆ ಅವ್ವನಾಗಿ ನೀನು sorry ...ಹೇಳೋದು ಅವಶ್ಯಾ ಇರ್ಲಿಲ್ಲ ಅಂತಾ ...ಅನಸತೈತಿ... ಅಲ್ಲಾ ನಮ್ಮ ಜಾನು ...ಏನ್ ದೊಡ್ ತಪ್ಪು ಮಾಡ್ಯಾಳ ...ಅಂತಿನಿ.... ಡ್ರೈವಿಂಗ್ ಲೈಸೆನ್ಸ್ ...ತೊಗೊಳಾಕ ಏಜಂಟ್‌ಗ ರೊಕ್ಕ ಕೊಡಾದು ತಪ್ಪನು? ...ಇನ್ನೂ 18 ವರ್ಷದ ಹುಡುಗಿ.... ಪಾಪ, ಎರಡು ...ಸಲ ಅಷ್ಟ ಡ್ರೈವಿಂಗ್ ಟೆಸ್ಟ್ ಫೇಲ್ ಆಗ್ಯಾಳ... ...ಟೆಸ್ಟ್ ಥ್ಯಾಂಕ್ಸ್ ಪಾಸ್ ಆಗತಾಳ.... ಆಕಿ ಏನ್ ...ಶಾಲ್ಯಾಗ ಒಮ್ಮೆನೂ ಫೇಲ್ ಆಗಿಲ್ಲಾ ಬಿಡು... ಆಕಿ ...ಮಾನಾಗ್ಲೂ ಫಸ್ಟ್ ರ್‍ಯಾಂಕೇ ಬರ್‍ತಾಳ... ಹಂಗ ...ಹೇಳಬೇಕಂದ್ರ, ನಮ್ ಮನಿತನದಾಗ ಎಲ್ಲಾರೂ ...ಫಸ್ಟ್ ರ್‍ಯಾಂಕೇ ಅಲ್ಲನು? ರೋಹಿಣ್ಯಕ್ಕ, ನೀ ಬಂತಿ ...ಮಾಡಿದ್ದನ್ನ ನೋಡು.... ನಂದನ್ ಮಾಮನ ಹೆಸರು ...ಎಲ್ಲಾಗ ಎಷ್ಟದ ತುಂಬಾ ಹರಡೈತಿ ನೋಡು...

ಆದಕ್ಕರss ಖುಷಿಯಾಗು....

ನಮ್ ಜಾನುಗೆ ಡ್ರೈವಿಂಗ್ ಲೈಸೆನ್ಸ್ ಕೊಡ್ಲಿಲ್ಲಂದ್ರ ಏನಾತು? ನಮ್ಮ ನಂದನ್ ಮಾಮ ಚಿಟಿಕೆ ಹೊಡದ್ರ ಸಾವಿರ ಸಾವಿರ ಎಕರೆ ಭೂಮಿ ಸರ್ಕಾರದವ್ರ ಕೊಡ್ತಾರ... ನಂದನ್ ಮಾಮ ಏನ್ ದಲ್ಲಾಳಿಗಳಿಗೆ ಲಂಚ ಕೊಡ್ತಾರೇನು? ಏನೂ ಇಲ್ಲ... ಎಸ್.ಎಂ. ಕೃಷ್ಣ ಧರ್ಮಸಿಂಗು, ಕುಮಾರ ಸ್ವಾಮಿ ಇವರೆಲ್ಲ ಪ್ರಾಮಾಣಿಕ ರಾಗಿದ್ದೇ ನಮ್ ನಂದನ್ ಮಾಮನಿಂದ... ನಂದನ್ ಮಾಮ ಲಂಚ ಕೊಡಂಗಿಲ್ಲ... ಅಂದ್ರ ಅರ್ಥ ಕುಮಾರಸ್ವಾಮಿ, ಕೃಷ್ಣ ಎಲ್ಲಾರೂ ಪ್ರಾಮಾಣಿಕರೇ. ಅವರ್‍ನ ಪರಿವರ್ತನಾ ಮಾಡಿದ್ದು ನಂದನ್ ಮಾಮಾನೇ. ನಾನು ಇನ್ನೊಮ್ಮೆ ಬೆಂಗ್ಳೂರಿಗೆ ಬರೋ ವೇಳ್ಯಾಕ ಜಾನು ಪುಟ್ಟಿಗೆ ಡ್ರೈವಿಂಗ್ ಲೈಸೆನ್ಸ್ ಸಿಗುತ್ತ ಬಿಡು...

ಬಕರಿ (ರೊಟ್ಟಿ) ತಿನ್ನಾಕಂತರ ಇಲ್ಲಿಗೆ ಬಾ ರೋಹಿಣ್ಯಕ್ಕ.....

ಇಲ್ಲಿ ಎಲ್ಲಾ ಚೊಲೊ ಐತಿ. ಯಾಕಂದ್ರ ಈ ವರ್ಷಾನೂ ಆ ಹಾಳು ಮಳೆ ಕಾಟ ಇಲ್ಲ!!!

ನಮಸ್ಕಾರಗಳೊಂದಿಗೆ

-ಮುನ್ನಿ (Zero hour)

ಧಾರವಾಡ

(ಅಕ್ಕ, ಇನ್ಫೋಸಿಸ್‌ನ ಇನ್ನೊಂದು ಬಿಟ್ ಐದನೇ ಪುಟದಲ್ಲಿದೆ)

ಪಿ.ಕೆ. ಮಲ್ಲನಗೌಡರ್

ಬಿಟ್ bit ಹಿಡಿ!

ಆಚರಣೆ ಮಾಡೋಕೆ ಕಾಸು ತಿನ್ನೋಕೆ...

1857 ರ ಸಿಪಾಯಿದಂಗೆಗೆ 150 ವರ್ಷ ತುಂಬುತ್ತಿದೆ. ಆ ಕ್ರಾಂತಿಯ 150 ನೇ ವರ್ಷಾಚರಣೆಗೆ ಕೇಂದ್ರ ಸರ್ಕಾರ ಸಜ್ಜಾಗಿದೆ.

2007 ರಿಂದ 2008 ರವರೆಗೂ ನಡೆಯಲಿರುವ ಈ ಆಚರಣೆಗೆ ಮೀಸಲಿರುವ ಬಜೆಟ್ ಕೇವಲ 150 ಕೋಟಿ ರೂ.ಗಳಂತೆ!



ಆಚರಣೆಯ ರೂಪು ರೇಷೆ ತಯಾರಿಸಲು ರಚಿಸಿರುವ ಕಮಿಟಿಯ ತುಂಬಾ ರಾಜಕಾರಣಿಗಳೇ ತುಂಬಿ, ನೆಪ ಮಾತ್ರಕ್ಕೆ ಇತಿಹಾಸಕಾರರನ್ನು ಸೇರಿಸಿಕೊಂಡಿದ್ದಾರೆ. ಅಂದರೆ ಅರ್ಥ ಆಯ್ತಲ್ಲ? ಸಿಪಾಯಿದಂಗೆಯ ಹೆಸರಲ್ಲಿ 150 ಕೋಟಿಯ ದರೋಡೆ!

ಇಂತಾದ್ದರಲ್ಲಿ ಬಿಜೆಪಿಯ ವೈಸ್ ಪ್ರೆಸಿಡೆಂಟ್ ಬಾಳ್ ಆಪ್ಟೆ ಒಂದು ತಗಾದೆ ತೆಗೆದಿದ್ದಾನೆ. ಸಾವರ್ಕರ್‌ಗೆ ಗೌರವ ಸಲ್ಲಿಸದೇ ಇಂತಹ ಆಚರಣೆ ನಡೆಸಬಾರದಂತೆ!

ಎಲ್ಲಿಯ ಸಿಪಾಯಿದಂಗೆ? ಅದೆಲ್ಲಿಯ ಹೇಡಿ ಸಾವರ್ಕರ್?

ಹಾಗೆಯೇ 2007 ನೇ ವರ್ಷದ ತುಂಬಾ ಆಚರಣೆಗಳೋ ಆಚರಣೆಗಳು! ಕೇಂದ್ರ ಸಂಸ್ಕೃತಿ ಇಲಾಖೆ 4 ಆಚರಣೆಗಳನ್ನು ರೆಡಿ ಮಾಡಿಕೊಂಡಿದೆಯಂತೆ!

ಭಾರತ ಸ್ವಾತಂತ್ರ್ಯದ 60 ನೇ ವಾರ್ಷಿಕೋತ್ಸವ, ಭಗತ್‌ಸಿಂಗ್‌ರ ಜನ್ಮ ದಿನಾಚರಣೆ (ವರ್ಷ ಪೂರ್ತಿ ಮಾಡ್ತಾರೇನೋ?), ಭಗತ್‌ಸಿಂಗ್ ಹುತಾತ್ಮರಾದ 75ನೇ ವರ್ಷದ ಆಚರಣೆ ಮತ್ತು ವಂದೇಮಾತರಂನ ನೂರು ವರ್ಷದ ಆಚರಣೆ....

ಏನು ಆಚರಿಸಿ ಫಲವೇನು? ಯಾರದೋ ಜೇಬಿಗೆ ಕಾಸು ಸೇರುತ್ತೆ ಅಷ್ಟೇ. ಆಚರಣೆ ಮಾಡೋಕೆ; ಕಾಸು ತಿನ್ನೋಕೆ....


ಭಗತ್‌ಸಿಂಗ್ ಇದ್ದಿದ್ದರೆ ಮತ್ತೊಂದು ಕ್ರಾಂತಿ ಮಾಡುತ್ತಿದ್ದರು- ಈ ಹೊಣೆಗೇಡಿ ಪ್ರಜಾಪ್ರಭುತ್ವದ ದಮನಕ್ಕಾಗಿ.....

ಒಂದು CDಗವನ


ತನ್ನವರೇಕೆ ಗನ್ನು,
ಹಿಡಿದರೆಂದು ತಿಳಿಯಲು
ಅಧ್ಯಯನಕ್ಕೆ ಹೋದ ಅಕ್ಕನ
ಕೈಲಿದ್ದುದು ಪೆನ್ನು

ಗುಂಡೊಂದು ಅಕ್ಕನ ದೇಹ
ಹೊಕ್ಕು
ಕೆಂಪು ರಕ್ತ ತೊಟ್ಟಿಕ್ಕಿತು
ಪೆನ್ನಿಂದ ಕೆಂಪು ಮಸಿ ಹರಿದಿತ್ತು...
ಆ ಖಾಕಿ ಗನ್ನಿಗೇನು ಗೊತ್ತು
ಅಕ್ಕ ಸಾವಿಲ್ಲದ ಅಮರಳೆಂದು

ಸಿ.ಇ.ಟಿ.: ಶಂಕರಮೂರ್ತಿ ಸೂತ್ರ ಶಾಮನೂರ್ ಶುಲ್ಕ!!



ಮಾತೆತ್ತಿದರೆ ಮುರಗೋಡ್ ಕಮಿಟಿ, ರಂಗವಿಠ್ಠಲಾಚಾರ ಕಮಿಟಿ ಇತ್ಯಾದಿಗಳ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕ ದರಗಳನ್ನು ಜಪಿಸುತ್ತಾ ಬಂದ ಶಂಕರಮೂರ್ತಿಗೆ ಕಡೆಗೂ ವಿದ್ಯಾರ್ಥಿಗಳ ಪ್ರತಿಭೆ ಆರ್ಥಿಕ ಸಾಮರ್ಥ್ಯಕ್ಕೆ ನ್ಯಾಯ ಒದಗಿಸಬಲ್ಲ ಹಾಗೂ ಮ್ಯಾನೇಜ್‌ಮೆಂಟ್‌ಗಳ ಜೋಳಿಗೆಯನ್ನೂ ತುಂಬಿಸಬಲ್ಲ 'ಪ್ರಾಕ್ಟಿಕಲ್ ಫಾರ್ಮುಲಾ'ದ ದರ್ಶನ ಮಾಡಿಸಿದ್ದು ದಾವಣಗೆರೆಯ ಕ್ಯಾಪಿಟೇಷನ್ ಮಂಡಿ ಮಾರು ಕಟ್ಟೆಯ ಯಜಮಾನ ಹಾಗೂ ಅಪ್ಪಟ ಕಾಂಗ್ರೆಸ್ ಕುಳ ಶಾಮನೂರು ಶಿವಶಂಕರಪ್ಪ.



ಶುಕ್ರವಾರ ಜೂನ್ 30 ರ ಸಂಜೆ ವಿಧಾನಮಂಡಲದಲ್ಲಿ ಸಿಇಟಿ ಮಸೂದೆ ಮಂಡನೆಯಾದಾಗ ಆಡಳಿತ ಪಕ್ಷದವರಿಗೆ ತರಾತುರಿಯಲ್ಲಿ ಬಿಲ್ ಪಾಸ್ ಮಾಡಿ ಕೈ ತೊಳೆದುಕೊಳ್ಳುವ ತವಕವಿತ್ತು, ವಿರೋಧ ಪಕ್ಷದವರಿಗೆ ತುರ್ತಾಗಿ ಮನೆಗೆ ಧಾವಿಸಿ ಫುಟ್‌ಬಾಲ್ ನೋಡುವ ಆತುರವಿತ್ತು. ಹಾಗಾಗಿ ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿ ಮತ್ತು ಕಾಮೆಡ್ ಕಿಂಗ್ ಶಾಮನೂರ್ ಶಿವಶಂಕರಪ್ಪನವರು ತೆರೆಮರೆಯಲ್ಲಿ ಕೂತು ಚರ್ಚಿಸಿ ಸಿದ್ಧಪಡಿಸಿದ ವೃತ್ತಿ ಶಿಕ್ಷಣದ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ತಿದ್ದುಪಡಿ ಮಸೂದೆಗೆ ಯಾವುದೇ ಚರ್ಚೆ, ಚಿಂತನೆ, ಸಂವಾದ, ಸದ್ದುಗದ್ದಲಗಳಿಲ್ಲದೇ ಅನುಮೋದನೆಯ ಮುದ್ರೆ ಒತ್ತಲಾಯಿತು.

ಯಥಾಪ್ರಕಾರ ಮತ್ತೊಮ್ಮೆ ಕರ್ನಾಟಕದ ಕ್ಯಾಪಿಟೇಷನ್ ಪಾಲಿಟಿಕ್ಸ್ ಎಂಬ ವಾರ್ಷಿಕ ಸಮಾರಾಧನೆ ಸುಪ್ರೀಂಕೋರ್ಟಿನ ಹಲವು ಹತ್ತು ಸುಪ್ರಸಿದ್ಧ ಜಡ್ಜ್‌ಮೆಂಟ್‌ಗಳ ನೀತಿ ನಿರ್ದೇಶನಗಳನ್ನು ಬದಿಗೊತ್ತಿ ಸರ್ಕಾರ ಮತ್ತು ಖಾಸಗಿ ಮ್ಯಾನೇಜ್‌ಮೆಂಟ್‌ಗಳ ರಾಜೀ ಕಬೂಲಿ ಸಂಧಾನದ ಮೂಲಕವೇ ಇತ್ಯರ್ಥವಾಯಿತು.


ಸಚಿವರಾಗಲಿ, ಅಧಿಕಾರಿಗಳಾಗಲಿ, ಕಾನೂನು ಪಂಡಿತರಾಗಲಿ ಅಥವಾ ಕಾಮೆಡ್ ಕುಳಗಳಾಗಲಿ ಯಾರೂ ಎಲ್ಲೂ ತಮ್ಮ ಅಚ್ಚುಮೆಚ್ಚಿನ ಸುಪ್ರೀಂಕೋರ್ಟ್ ಸಿದ್ಧಾಂತಗಳಾದ ಏಕರೂಪ ಶುಲ್ಕ, ಇನಾಮದಾರ್ ಜಡ್ಜ್‌ಮೆಂಟು ಇತ್ಯಾದಿ ಕ್ಲೀಷೆಗಳನ್ನು ಅಪ್ಪಿತಪ್ಪಿಯೂ ಉಲ್ಲೇಖಿಸುವ ಪ್ರಮಾದ ಮಾಡಲಿಲ್ಲ. ಅಂದರೆ ವೃತ್ತಿ ಶಿಕ್ಷಣದ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ವಿಚಾರದಲ್ಲಿ ದಶಕಗಳಿಂದ ನಡೆದ ಕೋರ್ಟು ಕಾಳಗಗಳಾಗಲಿ ಮತ್ತು ತತ್ಸಂಬಂಧಿ ಹೊರಬಿದ್ದ 'ಐತಿಹಾಸಿಕ' ತೀರ್ಪುಗಳಾಗಲಿ ಎಲ್ಲವೂ ನಿರರ್ಥಕ ಬೌದ್ಧಿಕ ಕಸರತ್ತುಗಳೆಂಬುದು ಮತ್ತೊಮ್ಮೆ ಸಾಬೀತಾಗಿಬಿಟ್ಟಿತು. ಒಟ್ಟಿನಲ್ಲಿ ಕಾನೂನು ಪಾಂಡಿತ್ಯಕ್ಕಿಂತ ವ್ಯವಹಾರಜ್ಞಾನ ಮತ್ತು ರಾಜಕೀಯ ಇಚ್ಛಾಶಕ್ತಿಗಳೇ ವೃತ್ತಿಶಿಕ್ಷಣದ ಜಂಜಾಟವನ್ನು ಸುಸೂತ್ರವಾಗಿ ಪರಿಹರಿಸಬಲ್ಲ ಸುಲಭ ಸಾಧನಗಳೆಂಬುದು ಮಗದೊಮ್ಮೆ ಸಾಬೀತಾಗಿದೆ. ಕೋರ್ಟು-ಕೇಸುಗಳಿಗಿಂತ ಔಟ್ ಆಫ್ ಕೋರ್ಟ್ ಸೆಟ್ಲ್‌ಮೆಂಟ್‌ಗಳೇ ನಮ್ಮ ಸಹಸ್ರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳಿಗೆ ಕೊಂಚ ಮಟ್ಟಿಗಾದರೂ ಭರವಸೆ ಮೂಡಿಸುವಂತಾಗಿದೆ.


ಇವತ್ತು ಸರ್ಕಾರಗಳು, ಶಿಕ್ಷಣ ತಜ್ಞರು ಮತ್ತು ಖಾಸಗಿ ಮ್ಯಾನೇಜ್‌ಮೆಂಟ್‌ಗಳು ಅನಿವಾರ್ಯವಾಗಿ ಒಪ್ಪಿಕೊಂಡಿರುವ ವಾಸ್ತವತೆ ಅಂದರೆ ಇಷ್ಟು: ಒಂದು ಖಾಸಗಿ ಅನುದಾನರಹಿತ ಮೆಡಿಕಲ್ ಅಥವಾ ಇಂಜನಿಯರಿಂಗ್ ಕಾಲೇಜಿನ ಯಶಸ್ಸಿಗೆ ಪ್ರತಿಭಾವಂತ ವಿದ್ಯಾರ್ಥಿಗಳೂ ಬೇಕು, ಹಣವಂತ ವಿದ್ಯಾರ್ಥಿಗಳೂ ಬೇಕು. ಕಾಲೇಜಿನ ಶೈಕ್ಷಣಿಕ ಗುಣಮಟ್ಟಕ್ಕೆ ಸರ್ಕಾರಿ ಕೋಟಾದ ಪ್ರತಿಭಾವಂತ ವಿದ್ಯಾರ್ಥಿಗಳು (ಮೆರಿಟ್ ಕಮ್ ಮೀಸಲಾತಿ) ಹಾಗೂ ಕಾಲೇಜು ನಡೆಸಲು ಬೇಕಾದ ಸಂಪನ್ಮೂಲಗಳಿಗಾಗಿ ಪೇಮೆಂಟ್ ಕೋಟಾದ ಶ್ರೀಮಂತ ವಿದ್ಯಾರ್ಥಿಗಳು ಸಮ ಸಮವಾಗಿಯೇ ಕೈಜೋಡಿಸಲೇಬೇಕಾದ ಅನಿವಾರ್ಯತೆ ಇಂದು ನಿಚ್ಚಳವಾಗುತ್ತಿದೆ. ಆದ್ದರಿಂದಲೇ ಮೆರಿಟ್ ಕೋಟಾ, ಪೇಮೆಂಟ್ ಕೋಟಾದ ಸಮತೋಲನ ಬಿಂಬಿಸುವ ವೃತ್ತಿ ಶಿಕ್ಷಣ ನೀತಿ ಇನ್ನು ಮುಂದೆಯಾದರೂ ಶಾಶ್ವತ ರೂಪ ತಾಳಬೇಕಾಗಿದೆ.

ಶಂಕರಮೂರ್ತಿ: ರಾಮನ ಲೆಕ್ಕ ಕೃಷ್ಣನ ಲೆಕ್ಕ

ಅವತ್ತು ಸಿ.ಇ.ಟಿ. ರ್‍ಯಾಂಕ್ ಪಟ್ಟಿ ಪ್ರಕಟಿಸಲು ಬೆಂಗಳೂರಿನ ಮಲ್ಲೇಶ್ವರದ ಸಿ.ಇ.ಟಿ. ಘಟಕದಲ್ಲಿ ಪ್ರತ್ಯಕ್ಷರಾದ ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿ ಮುಖದಲ್ಲಿ ಅರ್ಥಹೀನ ಸಂಭ್ರಮವಿತ್ತು "ಈ ವರ್ಷ ಸಿ.ಇ.ಟಿ. ಪಾಲಿಗೆ 368 ಮೆಡಿಕಲ್ ಸೀಟು, 4400 ಇಂಜಿನಿಯರಿಂಗ್ ಸೀಟುಗಳು ಮಾತ್ರ ದಕ್ಕಿರುವುದರಿಂದ ನಾವೇನೂ ಮಾಡಲಿಕ್ಕಾಗಲ್ಲ. ಸುಪ್ರೀಂಕೋರ್ಟ್ ತೀರ್ಪು, ಸಂಸತ್ತು ಪಾಸು ಮಾಡಿದ ತಿದ್ದುಪಡಿ ಮಸೂದೆ ಮತ್ತು ಸಂವಿಧಾನ ತಜ್ಞರ ಅಭಿಪ್ರಾಯಗಳು ನಮ್ಮ ಕೈ ಕಟ್ಟಿ ಹಾಕಿವೆ" ಎಂದು ಸರ್ಕಾರದ ಪರ ಪ್ರಚಂಡ ಪರಾಭವದ ಪರಾಕ್ರಮ ಪ್ರದರ್ಶಿಸಿದ್ದರು. ಮಾನ್ಯ ಸಚಿವರಿಗೆ ಆವತ್ತು ಪದವೀಧರ ಕ್ಷೇತ್ರದ ಚುನಾವಣೆ ಎದುರಿಸಬೇಕಾದ ಟೆನ್ಷನ್ ಬೇರೆ ಬಾಧಿಸುತ್ತಿತ್ತು, ಸಂಘ ಪರಿವಾರದ ವೈಶ್ಯಕುಲಶ್ರೇಷ್ಠ ಶಂಕರಮೂರ್ತಿಯವರಿಗೆ ಈ ಸುಪ್ರೀಂಕೋರ್ಟು, ಸಂವಿಧಾನ ಮತ್ತು ಪಾರ್ಲಿಮೆಂಟ್ ಶಾಸನ ಇತ್ಯಾದಿ ವೈಧಾನಿಕ ಸಂಕಷ್ಟಗಳ ಬಗ್ಗೆ ಅಂದು ತಲೆಕೆಡಿಸಿಕೊಳ್ಳುವಷ್ಟು ವ್ಯವಧಾನವೇ ಇರಲಿಲ್ಲ.

ಕಡೆಗೂ ಮಂತ್ರಿ ಪದವಿಯ ವರ್ಚಸ್ಸಿನಿಂದ ಚುನಾವಣೆ ಗೆದ್ದು ಬೆಂಗಳೂರಿಗೆ ಮರಳಿದ ಮೇಲೆಯೇ ಶಂಕರಮೂರ್ತಿಗಳಿಗೆ ಸಿಇಟಿ ಬಿಕ್ಕಟ್ಟಿಗೆ ಪರಿಹಾರ ಹುಡುಕಲೇಬೇಕೆಂಬ ವಿವೇಕೋದಯವಾಯಿತು. ಮೊದಲು ಮಾತೆತ್ತಿದರೆ ಮುರಗೋಡ್ ಕಮಿಟಿ, ರಂಗವಿಠ್ಠಲಾಚಾರ ಕಮಿಟಿ ಇತ್ಯಾದಿಗಳ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕ ದರಗಳನ್ನು ಜಪಿಸುತ್ತಾ ಬಂದ ಸಚಿವರಿಗೆ ಕಡೆಗೂ ವಿದ್ಯಾರ್ಥಿಗಳ ಪ್ರತಿಭೆ & ಆರ್ಥಿಕ ಸಾಮರ್ಥ್ಯಕ್ಕೆ ನ್ಯಾಯ ಒದಗಿಸಬಲ್ಲ ಹಾಗೂ ಮ್ಯಾನೇಜ್‌ಮೆಂಟ್‌ಗಳ ಜೋಳಿಗೆಯನ್ನೂ ತುಂಬಿಸಬಲ್ಲ 'ಪ್ರಾಕ್ಟಿಕಲ್ ಫಾರ್ಮುಲಾ'ದ ದರ್ಶನ ಮಾಡಿಸಿದ್ದು ದಾವಣಗೆರೆಯ ಕ್ಯಾಪಿಟೇಷನ್ ಮಂಡಿ ಮಾರುಕಟ್ಟೆಯ ಯಜಮಾನ ಹಾಗೂ ಅಪ್ಪಟ ಕಾಂಗ್ರೆಸ್ ಕುಳ ಶಾಮನೂರು ಶಿವಶಂಕರಪ್ಪ, ಕಳೆದ ಕಾಲು ಶತಮಾನದಲ್ಲಿ ಈ ಕುಮಾರಸ್ವಾಮಿ ಶಂಕರಮೂರ್ತಿಗಳಿಗಿಂತ ಹತ್ತಿಪ್ಪತ್ತು ಪಟ್ಟು ವರ್ಚಸ್ವಿಗಳಾಗಿದ್ದ ಹೆವಿವೇಟ್ ಮಂತ್ರಿ, ಮುಖ್ಯಮಂತ್ರಿಗಳನ್ನು ಲೀಲಾಜಾಲವಾಗಿ ವಶೀಕರಿಸಿಕೊಂಡ ಅನುಭವವಿದ್ದ ಶಾಮನೂರು ಶಂಕರಮೂರ್ತಿಗಳ ತಲೆಗೆ ತುಂಬಿದ್ದು ಅಪ್ಪಟ ವ್ಯಾಪಾರಿ ಸೂತ್ರ. ಇಲ್ಲಿ ಎಷ್ಟೇ ಅಲ್ಪ ಪ್ರಮಾಣವೆನಿಸಿದರೂ ಮೆರಿಟ್ಟಿಗೂ ಒಂಚೂರು ಪುರಸ್ಕಾರ, ಮೀಸಲಾತಿಗೂ ಒಂದಿಷ್ಟು ನೈವೇದ್ಯ, ಹಾಗೆಯೇ ಮ್ಯಾನೇಜ್‌ಮೆಂಟ್‌ಗಳ ಅಕ್ಷಯ ಪಾತ್ರೆಗೆ ಮೃಷ್ಟಾನ್ನ ಭೋಜನ ಹೀಗೆ ವೃತ್ತಿ ಶಿಕ್ಷಣದ ಪಾಲುದಾರರೆಲ್ಲರಿಗೂ (stake holders) ಸಹಪಂಕ್ತಿ ಭೋಜನದ ವ್ಯವಸ್ಥೆಯಿದು. ಶಂಕರಮೂರ್ತಿ ಮತ್ತು ಶಾಮನೂರು ರೂಪಿಸಿರುವ ಹೊಸ ಸೂತ್ರದ ಪ್ರಕಾರ ಖಾಸಗಿ ಮೆಡಿಕಲ್, ಡೆಂಟಲ್ ಕಾಲೇಜುಗಳಲ್ಲಿ ಶೇ. 35 ರಷ್ಟು ಅಗ್ಗದ ಶುಲ್ಕದ ಸರ್ಕಾರಿ ಅಥವಾ ಮೆರಿಟ್ ಕೋಟಾ ಮತ್ತು ಶೇ. 65 ರಷ್ಟು ದುಬಾರಿ ಶುಲ್ಕದ ಪೇಮೆಂಟ್ ಕೋಟಾ ಅಥವಾ ಮ್ಯಾನೇಜ್‌ಮೆಂಟ್ ಕೋಟಾ...





ಮೇಲ್ನೋಟಕ್ಕೆ ಇದನ್ನು ಫಿಫ್ಟಿ ಫಿಫ್ಟಿ ಸೀಟು ಹಂಚಿಕೆ ಎಂದು ಸಚಿವರು ಬಣ್ಣಿಸಿದ್ದರೂ ಸರ್ಕಾರದ ಪಾಲಿನ (ಮೆಡಿಕಲ್) 50 ಸೀಟುಗಳ ಪೈಕಿ ಮೊದಲ 35 ಕ್ಕೆ ಮಾತ್ರ 35 ಸಾವಿರ ಶುಲ್ಕ, ಇನ್ನುಳಿದ 15 ಸೀಟ್‌ಗಳಿಗೆ 2 ಲಕ್ಷ 90 ಸಾವಿರ ಎಂದು ನಿಗದಿಪಡಿಸಿರುವ ದುಬಾರಿ ಶುಲ್ಕ.

ಹಿಂದಿದ್ದ ಮುರಗೋಡ್, ರಂಗವಿಠಲಾಚಾರ್ ಸಮಿತಿಗಳು ಸಹ ಗರಿಷ್ಠ 1 ಲಕ್ಷ 65 ಸಾವಿರ ಅಥವಾ 1 ಲಕ್ಷ 72 ಸಾವಿರ ಎಂದು ನಿಗದಿಗೊಳಿಸಿದ್ದ ಶುಲ್ಕವನ್ನು ಅದ್ಯಾವುದೋ ಲೆಕ್ಕಾಚಾರ ಬಳಸಿ ಏಕಾಏಕಿ 2 ಲಕ್ಷ 90 ಸಾವಿರಕ್ಕೆ ಫಿಕ್ಸ್ ಮಾಡಿರುವ ಈ ಸೂತ್ರ ಖಂಡಿತವಾಗಿಯೂ ಕಾಮೆಡ್ ಕೆ ಕರಾಮತ್ತು ಮತ್ತು ಇಂದಿನ ಕೋ-ಜಾ ಸರ್ಕಾರದ ಶರಣಾಗತಿಯ ಸಂಕೇತದಂತಿದೆ.

ಇದುವರೆಗೂ ತಮಗೆ ಬೇಕು ಬೇಕಾದಂತೆ ಸುಪ್ರೀಂ ಕೋರ್ಟ್‌ನ ವಿವಿಧ ನ್ಯಾಯ ಪೀಠಗಳಿಂದ ಏಕರೂಪ ಶುಲ್ಕ ನೀತಿ ಎಂದು ತೀರ್ಪು ಬರೆಸಿಕೊಂಡು ಬರುತ್ತಿದ್ದ ಕಾಮೆಡ್-ಕೆ ಕುಬೇರರು ಇವತ್ತು ಸರ್ಕಾರಿ ಕೋಟಾದಲ್ಲೂ ಪೇಮೆಂಟ್ ಕೋಟಾ, ಮ್ಯಾನೇಜ್‌ಮೆಂಟ್ ಕೋಟಾದಲ್ಲೂ ಶೇ. 30 ರಷ್ಟು ಅಧಿಕೃತ ಪೇಮೆಂಟ್ ಕೋಟಾ, ಇನ್ನೈದು ಪರ್ಸೆಂಟು ವಿವೇಚನಾ ಕೋಟಾ (ಅನಧಿಕೃತ!) ಹಾಗು ಶೇ. 15 ರಷ್ಟು ಅನಿರ್ದಿಷ್ಟ ಶುಲ್ಕ ವಸೂಲಿಯ ಎನ್.ಆರ್.ಐ. ಕೋಟಾಗಳನ್ನು ವಿಧಿಸಿಕೊಂಡು ವಿಧಾನಮಂಡಲದ ಒಪ್ಪಿಗೆ ಪಡೆದುಕೊಂಡುಬಿಟ್ಟಿದ್ದಾರೆ.

ಶಾಮನೂರ್ ವ್ಯವಹಾರ ಜ್ಞಾನ!

1986-87 ರಷ್ಟು ಹಿಂದೆಯೇ ಅಂದಿನ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರವಿದ್ದಾಗಲೇ ತಮ್ಮ JMM ಮೆಡಿಕಲ್ ಕಾಲೇಜಿನ 100 ಸೀಟುಗಳ ಇನ್‌ಟೇಕ್ ಮಿತಿಯನ್ನು 240ಕ್ಕೇರಿಸಿಕೊಂಡ ಕುಶಾಗ್ರಮತಿ ಈ ಶಾಮನೂರು ಶಿವಶಂಕರಪ್ಪ, ಮೊದಲು 100 ಸೀಟುಗಳಿದ್ದ JMM ಕಾಲೇಜಿನ ಕಂಪೌಂಡಿನಲ್ಲಿಯೇ ಬಾಪೂಜಿ ಮೆಡಿಕಲ್ ಕಾಲೇಜ್ ಎಂಬ ಇನ್ನೊಂದು ಬೋರ್ಡ್ ಹಾಕಿ ಸುಮಾರು 150 ಹೆಚ್ಚುವರಿ ಕೋಟಾ ಮಂಜೂರು ಮಾಡಿಸಿಕೊಂಡಿದ್ದರು. ಅಂದು ಪ್ರದೇಶ ಕಾಂಗ್ರೆಸ್‌ನ ಖಾಯಂ ಖಜಾಂಚಿಯಾಗಿದ್ದ ಶಾಮನೂರ್ ಇವತ್ತು 2ನೇ ಅವಧಿಯ ಎಂಎಲ್‌ಎಗಿರಿಯಿಂದ[...] ತೃಪ್ತಿ ಪಡಬೇಕಾದ, ಒಮ್ಮೆಯ[...] ಮಂತ್ರಿಯಾಗಲಿಲ್ಲವೆಂಬ ವಿಷಾದ[...] ಲ್ಲಿಯೇ ಕೊರಗಿ ಹಣ್ಣಾಗಿರುವ ಪ್ರಬು[...] ಕಾಂಗ್ರೆಸ್ಸಿಗ! ಹಿಂದಿನ 2 ವರ[...] ಕಾಮೆಡ್-ಕೆ ಪ್ರಧಾನ ವಕ್ತಾರರಾಗಿ[...] ಆರ್.ಎಲ್. ಜಾಲಪ್ಪ ಎಂ[...] ನಿಷ್ಠುರವಾದಿ ತಮ್ಮದೇ ಸರ್ಕಾರ[...] ವಿರುದ್ಧ ಬಡಿದಾಡುವ ಜಗಳಗಂ[...] ನೆಂಬ ಬಿರುದು ಪಡೆದುಕೊಂಡಿದ್ದರ[...] ಆದರೆ ಈ ದಾವಣಗೆರೆಯ ಶಿ[...] ಶಂಕರಪ್ಪನವರಂತೂ "ಮಾ[...] ಬಲ್ಲವನಿಗೆ ಜಗಳವಿಲ್ಲ, ಊ[...] ಬಲ್ಲವನಿಗೆ ರೋಗವಿಲ್ಲ" ಎಂ[...] 'ಜಾಣ' ಮನೋಭಾವದವರ[...] ಹಾಗಾಗಿ ಹೆಚ್ಚಿನ ಮೀಡಿಯಾ[...] ಪ್ರಚಾರದ ಆರ್ಭಟವಿಲ್ಲದೇ [...] ಸಮ್ಮಿಶ್ರ ಸರ್ಕಾರದ ಅನನುಭವಿ ಮುಖ್ಯಮಂತ್ರಿ, [...] ಸಚಿವರನ್ನು ತಾವು ಸೂಚಿಸಿದ ಸೂತ್ರಕ್ಕೆ ಹೆಚ್ಚ[...] ತಗಾದೆಯಿಲ್ಲದೇ ಒಪ್ಪಿಸಿಬಿಟ್ಟಿದ್ದಾರೆ. ಭಾರಿ ಡಿಮ್ಯಾಂ[...] ಇರುವ ಆದರೆ ಕಾಲೇಜುಗಳ ಸಂಖ್ಯೆ ಕಮ್ಮಿ ಇರು[...] ಮೆಡಿಕಲ್ ಸೀಟುಗಳ ವಿಚಾರದಲ್ಲಿ ಮೇಲ್ನೋಟಕ್ಕೆ ಫಿ[...] ಫಿಫ್ಟಿ. ಆದರೆ ವಾಸ್ತವಿಕವಾಗಿ 65:35 ಎಂಬ ಜಿಪುಣತ[...] ತೋರಿಸುವ ಶಾಮನೂರರ ಕಾಮೆಡ್ ಲಾಬಿ ಹೆಚ್ಚ[...] ಡಿಮ್ಯಾಂಡ್ ಇಲ್ಲದೇ ಬಣಗುಡುತ್ತಿರುವ ಇಂಜಿನಿಯರಿಂ[...] ಕಾಲೇಜುಗಳ ವಿಚಾರದಲ್ಲಿ ಮಾತ್ರ ಎಂದಿಲ್ಲದ ಧಾರಾಳತ[...] ತೋರಿದ್ದಾರೆ. ಈ ಸರ್ಕಾರವೇ ಶೇ. 65 ರಷ್ಟು ಸೀಟ್‌ಗಳ[...] ಸಿಇಟಿ ಮೂಲಕವೇ ತುಂಬಿಸಿ ಕೊಡಲಿ ಎಂದ[...] ಅಂಗಲಾಚಿದ್ದಾರೆ. ಇಂದಿನ ಸರ್ಕಾರಗಳು ಆದರಲ[...] ವಿಶೇಷವಾಗಿ ಎಸ್.ಎಂ. ಕೃಷ್ಣರ ಸರ್ಕಾರ ಡಜನ್‌ಗಟ್ಟಲೆ[...] ಇಂಜಿನಿಯರಿಂಗ್ ಕಾಲೇಜುಗಳನ್ನು ಅನುಗ್ರಹಿಸಿ ಕ್ಯಾ[...] & ಕ್ಯಾರಿ ನೀತಿ ಅನುಸರಿಸಿದ್ದರಿಂದ 130 ರ ಸಂಖ್ಯೆಯನ[...] ದಾಟದ ಬಹುಪಾಲು ಇಂಜಿನಿಯರಿಂಗ್ ಕಾಲೇಜುಗಳಿ[...] ಸಾಕಷ್ಟು ಗಿರಾಕಿಗಳೂ ಇಲ್ಲ, ಅಗತ್ಯ ಸಂಪನ್ಮೂಲಗಳೂ[...] ಇಲ್ಲ, ಹಾಗಾಗಿ ಇಂಜಿನಿಯರಿಂಗ್ ಶಿಕ್ಷಣ ಇವತ್ತು[...] ಗ್ರಾಹಕರ ಮಾರುಕಟ್ಟೆ, ವೈದ್ಯಕೀಯ ಶಿಕ್ಷಣವಿನ್ನೂ ಸೀಟ[...] ಮಾರುವ ವ್ಯಾಪಾರಿಯ ದೌಲತ್ತು ಎಂಬಂತಾಗಿದೆ.

ದೈನೇಸಿ ರಾಜ್ಯ ಸರ್ಕಾರಗಳ ಕೈಗೆ ಒಬ್ಬನೇ ಚ[...] ಯೋಗ್ಯ ನ್ಯಾಯವಾದಿಯೂ ಸಿಗದಂತೆ ಸುಪ್ರೀಂಕೋಟ[...] ಗಣ್ಯಾತಿಗಣ್ಯ ವಕೀಲರೆಲ್ಲರನ್ನೂ ಬುಕ್ ಮಾಡಿಕೊಂ[...] ಕೇಸ್‌ಗಳನ್ನು ಗೆಲ್ಲುತ್ತಾ ಬಂದ ಕ್ಯಾಪಿಟೇಷನ್ ಲಾಬ[...] ಕಡೆಗೂ ವಿದ್ಯಾರ್ಥಿ ಸಮೂಹದ ಪ್ರತಿಭಟನೆ ಮತ್ತು ಜಾಗ[...] ಜನಾಭಿಪ್ರಾಯದ ಎದುರು ಸೋಲಬೇಕಾಗಿ ಬಂದಿದ[...] ಒಂದು ಆರೋಗ್ಯದಾಯಕ ಬೆಳವಣಿಗೆ. ಏಕರೂಪ ಶು[...] ನೀತಿ ಎಂದರೆ ದುಬಾರಿ ಶುಲ್ಕ ನೀತಿಯೆಂದ[...] ಪ್ರವೇಶಾತಿಯಲ್ಲಿ ಸ್ವಾಯತ್ತತೆ ಎಂದರೆ ಮೆರಿಟ್ಟು ಮ[...] ಮೀಸಲಾತಿಯನ್ನು ಧಿಕ್ಕರಿಸುವ ಸ್ವೇಚ್ಛಾಚಾರವೆಂದ[...] ಅರ್ಥೈಸುತ್ತಾ ಬಂದ ಖಾಸಗಿ ಆಡಳಿತ ಮಂಡಳಿಗಳ[...] ಈ ವರ್ಷದ ರಾಜೀಸೂತ್ರ ಕೊಂಚವಾದರೂ ಅವುಗ[...] ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಹೊಣೆಗಾ[...] ಬಗ್ಗೆ ಕಣ್ಣು ತೆರೆಸಬೇಕಾಗಿದೆ.

-ರವೀಂದ್ರ ರೇ[...]

ಮೆಡಿಕಲ್: ಬಹುತೇಕ ಮೆಡಿಕಲ್ ಕಾಲೇಜುಗಳಲ್ಲಿ ಇನ್‌ಟೇಕ್ 100 ಇರುವುದರಿಂದ, 100 ಸೀಟಿನ ಲೆಕ್ಕ ಇಲ್ಲಿ ಕೊಡಲಾಗಿದೆ.

ಸರ್ಕಾರಿ ಕೋಟಾ:

35 ಸೀಟುಗಳಿಗೆ 35 ಸಾವಿರ ವಾರ್ಷಿಕ ಫೀಜು

35 x 35,000 = 12 ಲಕ್ಷ 25 ಸಾವಿರ

15 ಸೀಟುಗಳಿಗೆ 2 ಲಕ್ಷ 90 ಸಾವಿರ ವಾರ್ಷಿಕ ಫೀಜು

15x2,90,000= 43 ಲಕ್ಷ 50 ಸಾವಿರ

ಮ್ಯಾನೇಜ್‌ಮೆಂಟ್ ಕೋಟಾ

35 ಸೀಟುಗಳಿಗೆ 2 ಲಕ್ಷ 90 ಸಾವಿರ ವಾರ್ಷಿಕ ಫೀಜು


35x2,90,000 = 1 ಕೋಟಿ 1 ಲಕ್ಷ 50 ಸಾವಿರ

ಎನ್.ಆರ್.ಐ. ಕೋಟಾ: 15 ಸೀಟುಗಳು.

ಫೀಜು: ಮನಬಂದಷ್ಟು!

30 ಲಕ್ಷ ಅಂತಿಟ್ಟುಕೊಂಡರೆ 15x30,00,000 =4.5 ಕೋಟಿ ರೂ!

ಎಲ್ಲಾ ಸೇರಿ 6 ಕೋಟಿ! ಇದು ಬರೀ ಫೀಜು... ಡೊನೇಷನ್ ಎಷ್ಟಿರಬಹುದು...?



ಮೆಡಿಕಲ್, ಇಂಜಿನಿಯರಿಂಗ್: ನೆಟ್ ಪ್ರಾಫಿಟ್ಟೆಷ್ಟು?

ಇಂಜಿನಿಯರಿಂಗ್: ಒಂದೊಂದು ಕಾಲೇಜಲ್ಲಿ ಸರಾಸರಿ 500 ರಿಂದ 600 ವಿದ್ಯಾರ್ಥಿಗಳು. 100 ವಿದ್ಯಾರ್ಥಿಗಳ ಫೀಜಿನ ಲೆಕ್ಕ ಇಲ್ಲಿದೆ.

ಸರ್ಕಾರಿ ಕೋಟಾ: 40 ಸೀಟುಗಳಿಗೆ 15 ಸಾವಿರ ವಾರ್ಷಿಕ ಫೀಜು

40x15,000=6 ಲಕ್ಷ

20 ಸೀಟುಗಳಿಗೆ 85 ಸಾವಿರ ವಾರ್ಷಿಕ ಫೀಜು

20x85,000=17 ಲಕ್ಷ

ಮ್ಯಾನೇಜ್‌ಮೆಂಟ್ ಕೋಟಾ: 25 ಸೀಟುಗಳಿಗೆ 85 ಸಾವಿರ ವಾರ್ಷಿಕ ಫೀಜು

25x85,000=21 ಲಕ್ಷ 25 ಸಾವಿರ

ಎನ್‌ಆರ್‌ಐ ಕೋಟಾ= 15 ಸೀಟುಗಳು. ಫೀಜು ಮನಬಂದಷ್ಟು.

5 ಲಕ್ಷ ಎಂದುಕೊಳ್ಳೋಣ.

15x5,00,000=75 ಲಕ್ಷ


ಕೇವಲ 100 ಸೀಟುಗಳಿಂದ 1 ಕೋಟಿ 19 ಲಕ್ಷ 25 ಸಾವಿರ. ಐದಾರು ನೂರು ಸೀಟುಗಳ ಲೆಕ್ಕ ಎಷ್ಟು? ಮತ್ತೆ ಡೊನೇಷನ್ ಲೆಕ್ಕ ಎಷ್ಟು?

ದುಡ್ಡೇ ದೊಡ್ಡಪ್ಪ... ವಿದ್ಯೆ ಎಲ್ಲೆಷ್ಟ?

ಮುಂದಿನ ಜಗತ್ತಿನ ಒಳಿತಿಗೆ ಹಿಂದಿನ ಇತಿಹಾಸ ದಾರಿ ದೀಪ -ಆಂಬ್ರೋಸ್ ಬೈರಸ್

'ರಕ್ಷಕ' ಶೂಟಿಂಗ್‌ನಲ್ಲಿ ಗುಂಡೇಟು

ಶಾಸಕ ಬಾಲರಾಜನ ರಾಸಲೀಲೆ!



ಕೊಳ್ಳೇಗಾಲದ ಶಾಸಕ ಬಾಲರಾಜ್ ಒಂದು ಯಡವಟ್ಟು ಕೆಲಸ ಮಾಡಿದ್ದಾನೆ. 'ರಕ್ಷಕ' ಎಂಬ ಸಿನಿಮಾದಲ್ಲಿ ಫಾರೆಸ್ಟ್ ರೇಂಜರ್ ಆಗಿ ನಟಿಸುತ್ತಿರುವ ಬಾಲರಾಜ್ ಪೊಲೀಸರ ಗನ್ ಕಿತ್ತುಕೊಂಡು ಗುಂಡು ಹಾರಿಸಿ ಇಬ್ಬರು ಸಹ ಕಲಾವಿದರಿಗೆ ಏಟು ಮಾಡಿದ್ದಾನೆ.


ಈ ಘಟನೆ ನಡೆದಿರುವುದು ಬಿಳಿಗಿರಿ ರಂಗನ ಬೆಟ್ಟದಲ್ಲಿ. ಮಂಡ್ಯ ನಾಗರಾಜ್ ನಿರ್ದೇಶಿಸುತ್ತಿರುವ 'ರಕ್ಷಕ' ಸಿನಿಮಾಗೆ ಅನಿಲ್‌ಕುಮಾರ್, ಭಾನು, ಮೋಹನ್ (ABM ಸಿನಿಮಾ) ನಿರ್ಮಾಪಕರು. ಬಿ.ಆರ್. ಹಿಲ್ಸ್‌ನ ದಟ್ಟ ಕಾಡಿನೊಳಗೆ ಮಂಗಳೂರಿನ ಹುಡುಗಿ ಸಂಜನಾ ಎಂಬುವಳನ್ನು ಕರೆದುಕೊಂಡು ಹೋಗಿ ತಿಂಗಳಾನುಗಟ್ಟಲೆ ಇರಿಸಿಕೊಂಡು 'ಶೂಟಿಂಗ್' ಎಂಬ ರೀಲು ಸುತ್ತುತ್ತಿದ್ದ ಈ ಸಿನಿಮಾ ಜನಕ್ಕೆ ಶಾಸಕ ಮಿಮಿಕ್ರಿ ಬಾಲರಾಜ್ ಹೇಗೆ ಗಂಟುಬಿದ್ದನೋ ಏನೋ. ಅಂತೂ ಸೆಕೆಂಡ್ ಹೀರೋ ಆಗಿ 'ರಕ್ಷಕ' ಸಿನಿಮಾಗೆ ಸೇರಿಕೊಂಡಿದ್ದ.

ಮೊನ್ನೆ ಜೂನ್ 22 ರಂದು ಶೂಟಿಂಗ್ ನಡೆಯುತ್ತಿರುವಾಗ ಬಾಲರಾಜನ ಬಾಡಿ ಗಾರ್ಡ್ ಪೊಲೀಸ್ ಶಿವಪ್ಪನ ರಿವಾಲ್ವಾರ್ ಬಾಲರಾಜ್‌ನ ಸೊಂಟದಲ್ಲಿತ್ತು. ಯಾವುದೋ ಫೈಟಿಂಗ್ ಸೀನ್‌ನ ಶೂಟಿಂಗ್ ನಡೆಯುತ್ತಿದ್ದಾಗ ಈ ಐಲುಪೈಲು ಗಿರಾಕಿ ಬಾಲರಾಜ್ ಸೊಂಟದಿಂದ ಗನ್ ಹೊರ ತೆಗೆಯುವ ದೃಶ್ಯವಿತ್ತು. ಡೈರೆಕ್ಟರು 'ಆಕ್ಷನ್' ಎಂದೇಟಿಗೆ ಈ ಬಾಲರಾಜ್ ಗನ್ ತೆಗೆದವನೇ ಟ್ರಿಗರ್ ಒತ್ತೇಬಿಟ್ಟಿದ್ದಾನೆ.... ಅದು ಲಾಕ್ ಆಗಿದೆ ಅಂದುಕೊಂಡಿದ್ದನೇನೊ. ಆದರೆ ಗುಂಡು ಹಾರಿ ಸಹಕಲಾವಿದ ದಿನೇಶ್‌ನ ಕಾಲಿಗೆ ಬಡಿದು, ಇನ್ನೊಬ್ಬ ಸ್ಥಳೀಯ ಟೀ ಅಂಗಡಿಯ ಈರಪ್ಪನನ್ನು ಸವರಿಕೊಂಡು ಪಾಸ್ ಆಗಿದೆ. ತಕ್ಷಣ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಸಾಗಿಸಿದ ಬಾಲರಾಜ್ ಈ ಬಗ್ಗೆ ವಿಚಾರಿಸುತ್ತಿರುವ ಹೊರಗಿನವರಿಗೆಲ್ಲಾ 'ಪಾಪ, ಮರದಿಂದ ಬಿದ್ದು ಏಟಾಗಿದೆ' ಎಂದು ಬೂಸಿ ಬಿಡುತ್ತಿದ್ದಾನೆ.

ಈ ಘಟನೆ ನಡೆದ ಬೆನ್ನಲ್ಲೇ ಬಿಳಿಗಿರಿರಂಗನ ಬೆಟ್ಟದ ಪಶ್ಚಿಮಕ್ಕೆ 10 ಮೈಲಿ ದೂರದ ಕೆ. ಗುಡಿ ಚಾಮರಾಜನಗರ ರಸ್ತೆ ಏರಿಯಾದಲ್ಲಿ ಗರ್ಭಿಣಿ ಹುಲಿಯೊಂದು ಸತ್ತಿದೆ. ಅದರ ಹೊಟ್ಟೆಯಲ್ಲಿ ಪೂರ್ತಿ ಬೆಳೆದಿದ್ದ ಆರು ಮರಿಗಳಿದ್ದವು. ಸತ್ತಿದ್ದ ಮರಿಯೊಂದನ್ನು ಪರಿಶೀಲಿಸಿದ ಪಶು ವೈದ್ಯಾಧಿಕಾರಿ 'ಸೋಂಕು ರೋಗ' ಎಂದು ಏಕಾಏಕಿ ಹೇಳಿಕೆ ನೀಡಿದ್ದಾರೆ. ಅದಿನ್ನೂ ದೃಢಪಟ್ಟಿಲ್ಲ, ಆದರೆ ಸ್ಥಳೀಯ ಜನ ಹೇಳುವುದೇ ಬೇರೆ ಕತೆ.

ಅದು ಈ 'ರಕ್ಷಕ' ಸಿನಿಮಾದ ಜನರ ವೆಹಿಕಲ್ ಒಂದು ಕಾಡಿನ ದಾರಿಯಲ್ಲಿ ಓಡಾಡುವಾಗ ಈ ಗರ್ಭಿಣಿ ಹುಲಿಗೆ ಗುದ್ದಿ ಆದರಿಂದಾಗಿ ಹುಲಿ ಸತ್ತಿದೆ ಎಂದು.

ಆದರೆ ಯಳಂದೂರು ಪೊಲೀಸ್ ಇನ್ಸ್‌ಪೆಕ್ಟರ್ ಮಲ್ಲಿಕ್ ಸ್ವಂತ ಬುದ್ಧಿ ಉಪಯೋಗಿಸುತ್ತಿಲ್ಲ. ಹಾಗಾಗಿ ಈ ಗುಂಡೇಟಿನ ಹಾಗೂ ಹುಲಿ ಆಕ್ಸಿಡೆಂಟಿನ ಕೇಸ್ ಹಳ್ಳ ಹತ್ತುವ ಸೂಚನೆ ಈಗಲೇ ಕಾಣುತ್ತಿದೆ.



ಭಾನು ಪ್ರಕಾಶ್



ಮಂಡ್ಯ ನಾಗರಾಜ್

'ರಕ್ಷಕ' ಸಿನಿಮಾ ಕತೆ!

'ನಮ್ಮೂರ ರಾಮಾಯಣ', 'ಮರ್ಡರ್', 'ತಾಯಿ ಋಣ' ಎಂಬಿತ್ಯಾದಿ ಮಹೋನ್ನತ ಸಿನಿಮಾ ತೆಗೆದಿರುವ ಮಂಡ್ಯ ನಾಗರಾಜ್ ಎಂಬುವರಿಗೆ ಒಂದು ದಿನ ಹಠಾತ್ತನೆ ಒಂದು ಕತೆ ಹೊಳೆಯಿತಂತೆ.

ಅರಣ್ಯ ಮಂತ್ರಿ, ಅವನಿಗೊಬ್ಬ ಮಗ, ಬಿ.ಆರ್. ಹಿಲ್ಸ್‌ಗೆ ಪಿಕ್‌ನಿಕ್, ಮಗ ಕಿಡ್ನಾಪ್, ಕಳ್ಳರಿಂದ 20 ಕೋಟಿಗೆ ಡಿಮ್ಯಾಂಡ್, ಹೀರೋ ಆಗಮನ, ಫಾರೆಸ್ಟ್ ಆಫೀಸರ್ ನೆರವು, ಕೊನೆಗೆ ಫೈಟು, ಅಪಹೃತ ಮಂತ್ರಿ ಮಗನ ಬಿಡುಗಡೆ....

ಇದು 'ರಕ್ಷಕ' ಸಿನಿಮಾ ಕತೆ.

ಇಂತಾ ಅಮೋಘ ಕತೆ ಕೇಳಿದೇಟಿಗೆ ಅನಿಲ್‌ಕುಮಾರ್, ಭಾನು, ಮೋಹನ್ ಎಂಬ ಬಿಲ್ಡರ್‌ಗಳು ಥ್ರಿಲ್ಲಾಗಿ ಕೂಡಲೇ ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ. ಶಾಸಕ ಬಾಲರಾಜನಿಗೂ ಮೈಕ್ ಸಿಕ್ಕಿದೇಟಿಗೆ ಹಾಡು ಹೇಳುವ, ಮಿಮಿಕ್ರಿ ಮಾಡುವ ಚಟವೂ ಇರುವುದರಿಂದ ಅವನೂ ಹಣ ಹಾಕಿ ನಟ ಭಯಂಕರ ಸಾಯಿಕುಮಾರ್‌ನನ್ನು ಹೀರೋ ಆಗಿ ಆರಿಸಿಕೊಂಡಿದ್ದಾರೆ. 'ಮೊಂಡ', 'ಬೆಂಗಳೂರು ಬಂದ್' ಎಂಬಿತ್ಯಾದಿ ಸಿನಿಮಾ ತೆಗೆದಿದ್ದ ಕೆಲವರೂ 'ರಕ್ಷಕ'ದಲ್ಲಿ ಸೇರಿಕೊಂಡಿದ್ದಾರೆ.



ಎನ್. ಮಹೇಶ್

ಇಷ್ಟೆಲ್ಲಾ ಆದ ಮೇಲೆ ಹೀರೋಯಿನ್ ಬೇಡವೇ? ಸರಿ ಮಂಗಳೂರಿನ ಸಂಜನಾ ಎಂಬ ಪ್ರತಿಭೆಯನ್ನು ಹುಡುಕಿ ಕರೆತಂದಿದ್ದಾರೆ. ಈ ಹುಡುಗಿ ತಾನು 'ಪ್ಲೀಸ್ ಲವ್ ಮಿ' ಎಂಬ ಕನ್ನಡ ಪಿಕ್ಚರಿನ ನಾಯಕಿಯೆಂದು ಹೇಳಿಕೊಳ್ಳುತ್ತಿದ್ದಾಳೆ. ಬಹುಶಃ 'ರಕ್ಷಕ' ನಿರ್ದೇಶಕ-ನಿರ್ಮಾಪಕರು ಹಾಗೂ ಬಾಲರಾಜ್ ಈ ಸಂಜನಾಳ ಮೊದಲ ಸಿನಿಮಾದ ಟೈಟಲ್ ನೋಡಿ ಅಪಾರ್ಥ ಮಾಡಿಕೊಂಡರೇನೊ. ಅಂತೂ ಸಂಜನಾ 'ರಕ್ಷಕ' ಹೀರೋಯಿನ್ ಆಗಿ ಕಾಡು ಸೇರಿಕೊಂಡಿದ್ದಾಳೆ.

ಈ ಸಿನಿಮಾದಲ್ಲಿ ಸಿಬಿಐ ಆಫೀಸರ್ ಅಂತೆ ಅವಳು. ಇನ್ನೇನು ಶೂಟಿಂಗ್ ಮುಗಿಯಬೇಕು ಎನ್ನುವಾಗಲೇ ನಿರ್ಮಾಪಕರು "ಎಲ್ಲಾ ಸರಿ, ಆದ್ರೆ ಒಂದು ಐಟಂ ಸಾಂಗೂ ಬರಿ" ಎಂದು ನಿರ್ದೇಶಕ ಮಂಡ್ಯ ನಾಗರಾಜ್‌ಗೆ ಗಂಟುಬಿದ್ದಿದ್ದಾರೆ. ಆದರೆ ಡ್ಯಾನ್ಸ್ ಮಾಡೋರ್‍ಯಾರು ಅಂತಾ ಪ್ರಶ್ನೆ ಬಂದಾಗ ಅದಕ್ಯಾಕೆ ದುಡ್ಡು ವೇಸ್ಟ್ ಮಾಡಬೇಕು ಅಂತಾ ಹಿರೋಯಿನ್ ಕಂ ಸಿಬಿಐ ಆಫೀಸರ್ ಸಂಜನಾಳಿಗೆ 'ಕುಣಿ ಐಟಂ ಸಾಂಗ್' ಎಂದು ಕುಣಿಸಿಬಿಟ್ಟಿದ್ದಾರೆ.

ಸಿಬಿಐ ಆಫೀಸರ್ ಆಗಿದ್ದರೂ ಐಟಂ ಸಾಂಗ್‌ಗೆ ಕ್ಯಾಬರೆ ಡ್ಯಾನ್ಸ್ ಮಾಡಿ ಕಳ್ಳರನ್ನು ಹಿಡಿಯುತ್ತಾಳೆ ನಮ್ಮ ಹೀರೋಯಿನ್ ಎಂಬುದು ಅವರ ವಿವರಣೆ!



ಇಡೀ ಕನ್ನಡ ಸಿನಿಮಾ ಇತಿಹಾಸದಲ್ಲೇ ಇದುವರೆಗೂ ಯಾರೂ ಕೇಳಿರದ, ನೋಡೂ ಇರದ ಸಿನಿಮಾ ಈ 'ರಕ್ಷಕ' ಅಂತಾ ಹೇಳಿಕೊಂಡು ತಿರುಗುತ್ತಿದ್ದಾರೆ ನಿರ್ಮಾಪಕ-ನಿರ್ದೇಶಕರು. ಕೊಳ್ಳೇಗಾಲ ಶಾಸಕ ಬಾಲರಾಜ್ ಇಂತಾ ಮಹೋನ್ನತ ಸಿನಿಮಾದಲ್ಲಿ ಫಾರೆಸ್ಟ್ ಆಫೀಸರ್ ಆಗಿ ನಟಿಸಲು ಹೋಗಿ ಈಗ ಒರಿಜಿನಲ್ ರಿವಾಲ್ವಾರಿನಿಂದ ಗುಂಡು ಹಾರಿಸಿ ಯಡವಟ್ಟು ಮಾಡಿಕೊಂಡಿದ್ದಾನೆ.

ಸಿನಿಮಾ ಸಹ ಕಲಾವಿದರ ಪಾಡು

'ಟಿಕೆಟ್, ಟಿಕೆಟ್' ಸಿನಿಮಾದ ಬಾಂಬ್ ಸ್ಫೋಟಕ್ಕೆ ನಾಲ್ಕು ಜನ ಸತ್ತಿದ್ದರು. ಮತ್ತೊಂದು ಚಿತ್ರದಲ್ಲಿ ಕಾರ್ ಆಕ್ಸಿಡೆಂಟ್ ಮಾಡಿಸಿ ಇನ್ನೊಬ್ಬನನ್ನು ಸಾವಿಗೆ ದೂಡಲಾಗಿತ್ತು. ಈಗ 'ರಕ್ಷಕ' ಚಿತ್ರದ ನಟನೇ ಸಹ ಕಲಾವಿದರಿಗೆ ಗುಂಡು ಹಾರಿಸಿದ್ದಾನೆ. ಸಹ ಕಲಾವಿದ ದಿನೇಶ್‌ಗೆ ಏಟು ಬಿದ್ದಿದೆ. ಪೊಲೀಸ್ ಕೇಸ್ ಆಗಿದೆ. ಇಷ್ಟಾದರೂ ಈ ಚಿಕ್ಕ ಕಲಾವಿದರ ಪರವಾಗಿ, ಆಗಿರುವ ಅನ್ಯಾಯದ ಬಗ್ಗೆ ಮಾತಾಡಲು ಯಾರೂ ದಿಕ್ಕಿಲ್ಲ.

ಕಲಾವಿದನ ಮೇಲೆ ಫೈರ್ ಮಾಡಿರುವ ಶಾಸಕ ಬಾಲರಾಜ ಆರಾಮಾಗಿ ಓಡಾಡಿಕೊಂಡಿದ್ದಾನೆ.

ಕ್ರಿಮಿನಲ್ ಬಾಲರಾಜ

ಶಾಸಕ ಬಾಲರಾಜನಿಗೆ ಕೆಟ್ಟದಾಗಿ ಹಾಡುವ, ಮಿಮಿಕ್ರಿ ಮಾಡುವ ಚಟಗಳಿವೆ. ಇವನು ವಿಧಾನಸೌಧಕ್ಕೆ ಹೋದರೆ ಈ ಹುಚ್ಚಾಟ ಬಿಡಬಹುದೆಂದು ಭಾವಿಸಿದ ಕೊಳ್ಳೆಗಾಲದ ಜನ ಜನಪರ ಕಾಳಜಿಯ ಬಿಎಸ್‌ಪಿಯ ಎನ್. ಮಹೇಶ್‌ರಂಥವರನ್ನು ಬಿಟ್ಟು ಬಾಲರಾಜ್‌ಗೆ ಓಟು ಹಾಕಿ ಗೆಲ್ಲಿಸಿದ್ದರು. ಆದರೆ ನಾಯಿ ಬಾಲ ಯಾವತ್ತಿದ್ದರೂ ಡೊಂಕೇ ತಾನೆ?

ಶಾಸಕನಾಗಿ ಗೆದ್ದ ಬಾಲರಾಜನಿಗೆ ಹಾಡುವ-ಮಿಮಿಕ್ರಿ ಮಾಡುವ ತೆವಲು ಬಿಟ್ಟು ಹೋಗುವುದಿರಲಿ, ಸಿನಿಮಾ

ಬಿಳಿದಾಳೆ ಈಶ

ಎಂಬ ಹೊಸ ಚಟವೂ ಅಂಟಿಕೊಳ್ಳಬೇಕೆ? ಈ ಅವಿವೇಕಿ ಮೈಸೂರು ದಸರಾದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ದಲ್ಲಿ ಸಂದರ್ಭ ಮರೆತು 'ನಾಯಿ ಮರಿ... ನಾಯಿ ಮರಿ ತಿಂಡಿ ಬೇಕೆ' ಎಂದು ಹಾಡಿ ಅಪಹಾಸ್ಯಕ್ಕೀಡಾಗಿದ್ದ. ತಾಲ್ಲೂಕಿಗೆ ನೀರಾವರಿ ಮಾಡಿಸ್ತೀನಿ, ಸಕ್ಕರೆ ಕಾರ್ಖಾನೆ ಶುರು ಮಾಡಿಸ್ತೀನಿ ಎಂದೆಲ್ಲಾ ಭರವಸೆ ಕೊಟ್ಟು ಗೆದ್ದಿದ್ದ ಬಾಲರಾಜ್ ಈಗ ನಾಪತ್ತೆಯಾಗಿದ್ದಾನೆ.

ಅವನ ಗೈರು ಹಾಜರಿಯಲ್ಲಿ ಕೊಳ್ಳೇಗಾಲ ಕ್ಷೇತ್ರದ ಉಸ್ತುವಾರಿಗೆ ಬಾಲರಾಜನ ಖಾಸಗಿ ಬಂಟರಾದ ಡಿ.ಎನ್. ಪರಮೇಶ್, ಜೇ ಬಜಾರ್ ಮಾದೇವಪ್ಪ, ದಿನೇಶ್ ಗುಪ್ತ ಮತ್ತು K2 ಬಸವರಾಜ್ ಎಂಬ ಪುಂಡರಿದ್ದಾರೆ. ಈ ಪರಮೇಶ್ ಏವನ್ ಅಕ್ಕಿ ಕಳ್ಳ, ಜೇ ಬಜಾರ್ ಬಸವ ರಾಜ್ ಹಾಗೂ ಶೆಟ್ಟಿ ದಿನೇಶ್ ಗುಪ್ತ ವರ್ಗಾವಣೆ, ಶಾಸಕ ಕದ್ದ ಹಣವನ್ನು ಲಾಭ ಬರುವ ಕಡೆ ಹೂಡುವ ಮ್ಯಾನೇಜರ್‌ಗಳಾಗಿದ್ದಾರೆ. ಇನ್ನು ಈ ಕೇಟು ಬಸವರಾಜ್ ಶಾಸಕನ ಪರವಾಗಿ ಮಂತ್ಲಿ ವಸೂಲಿ ಮುಂತಾದ ಸಮಾಜ



ಸೇವೆ ಮಾಡಿಕೊಂಡಿದ್ದಾನೆ. ಈ ಖದೀಮರ ಗುಂಪು ಇಡೀ ಕೊಳ್ಳೇಗಾಲಕ್ಕೆ ಅಂಟಿರುವ ಶಾಪ ಎಂದರೂ ತಪ್ಪಿಲ್ಲ. ಮತ್ತೊಂದೆಡೆ ಎಲೆಕ್ಷನ್ ಸೋತಿದ್ದರೂ ಬಿಎಸ್‌ಪಿಯ ಎನ್. ಮಹೇಶ್ ಕ್ಷೇತ್ರದಲ್ಲೇ ನಿಂತು ಜನರ ಕೆಲಸ ಮಾಡುತ್ತಿದ್ದಾರೆ. ಶಾಸಕ ಎನಿಸಿಕೊಂಡಿರುವ ಬಾಲರಾಜ್ 'ಪ್ಲೀಸ್ ಲವ್ ಮಿ' ನಟಿ ಸಂಜನಾ ಜೊತೆ ಬಿ.ಆರ್. ಹಿಲ್ಸ್‌ನಲ್ಲಿ ಕಣ್ಮರೆಯಾಗಿದ್ದಾನೆ.

ಯಳಂದೂರು ಪೊಲೀಸರು ಈಗಾಗಲೇ ಶಸ್ತ್ರಾಸ್ತ್ರ ಕಾಯಿದೆ 27 ಹಾಗೂ ಐಪಿಸಿ 324 ರಡಿ ಒಂದು ಕೇಸ್ ಬುಕ್ ಮಾಡಿಕೊಂಡು ತನಿಖೆ ಶುರು ಮಾಡಿದ್ದಾರೆ.

ಶಾಸಕ ಬಾಲರಾಜನ ಗನ್‌ಮ್ಯಾನ್ ಶಿವಪ್ಪನ ವಿಚಾರಣೆಯೂ ನಡೆದಿದೆ. ಶಿವಪ್ಪನ ರಿವಾಲ್ವಾರ್ ಸೀಜ್ ಮಾಡಿ ಫೊರೆನ್ಸಿಕ್ ಲ್ಯಾಬಿಗೆ ಕಳಿಸಿ ವರದಿಗೆ ಕಾಯುತ್ತಿದ್ದಾರೆ ಪೊಲೀಸರು. ಬಾಲರಾಜು ಮಾತ್ರ ಈಗಲೂ 'ಮರದಿಂದ ಬಿದ್ದವರ' ಮಂತ್ರವನ್ನೇ ಒದರುತ್ತಿದ್ದಾನೆ.

ಕೊಳ್ಳೇಗಾಲದ ಜನ ಇನ್ನಾದರೂ ಬಾಲರಾಜನ ಮಂತ್ರವಿದ್ಯೆಗೆ ಮರುಳಾಗದಿದ್ದರೆ ಕ್ಷೇಮ. ■

25ರ 'ಸುಂದರಿ' ಇನ್ಫೋಸಿಸ್‌ನ 'ಲ್ಯಾಂಡ್' ಮಾರ್ಕ್ಸ್!

ಇನ್ಫೋಸಿಸ್ ಎಂಬ 'ಸಾಫ್ಟ್‌ವೇರ್ ಸುಂದರಿ'ಗೆ 25 ತುಂಬಿದ್ದಕ್ಕೆ ನಮ್ಮ ಹಾರ್ಡ್‌ಕೋರ್ ವ್ಯಾಪಾರಿ ಇಂಗ್ಲಿಷ್ ಮೀಡಿಯಾಗಳಿಗೆ ಫುಲ್ ಖುಷಿ ಆಗಿದೆ. ಪಕ್ಕದ ಮನೆ ಹುಡುಗಿ ನೆರೆತಾಗ ಪೋಲಿಗಳಿಗಾಗುವ ಖುಷಿಯಂತೆ....



ಇನ್ಫಿಯ ಲ್ಯಾಂಡ್‌ಮಾರ್ಕ್‌ಗಳನ್ನು ಹೈಲೈಟ್ ಮಾಡುತ್ತಿವೆ ಇಂಗ್ಲಿಷ್ ಮಾಧ್ಯಮಗಳು. ಆದರೆ ಇನ್ಫಿಯ 'ಲ್ಯಾಂಡ್' ಮಾರ್ಕ್‌ಗಳ ಕುರಿತು ಯಾರೂ ತುಟಿ ಬಿಚ್ಚಿಲ್ಲ. ಏಕೆಂದರೆ ಈ ಸಾಫ್ಟ್‌ವೇರ್ ಸುಂದರಿಯ ಲಿಪ್‌ಲಾಕ್‌ನಲ್ಲಿ ಸಿಕ್ಕಿರುವವರಿಗೆ ತುಟಿ ಬಿಚ್ಚಲಾದೀತೆ?

ನಾವೊಂದಿಷ್ಟು ಇನ್ಫಿಯ 'ಲ್ಯಾಂಡ್' ಮಾರ್ಕ್‌ಗಳನ್ನು ಇಲ್ಲಿ ಪಟ್ಟಿ ಮಾಡಿದ್ದೇವೆ.

● 1981 ರಲ್ಲಿ ಶುರುವಾದ ಇನ್ಫಿ 1991 ರವರೆಗೂ ನೊಣ ಹೊಡೆಯುತ್ತ ಬಿದ್ದಿತ್ತು. ಮುಂದೆ ಬಂತಲ್ಲ ಮುಕ್ತ ಮಾರುಕಟ್ಟೆ, ಜಾಗತೀಕರಣ? ಶುರುವಾಯ್ತು ಇನ್ಫಿಯ ಡಾಲರ್ ಓಟ.... ಥ್ಯಾಂಕ್ಸ್ ಟು ಪಿ.ವಿ. ನರಸಿಂಹರಾವ್, ಮನಮೋಹನ್‌ಸಿಂಗ್!

● ಸದ್ಯ 2.5 ಬಿಲಿಯನ್ ಡಾಲರ್ ಕಂಪನಿ ಎಂಬ ಹೆಗ್ಗಳಿಕೆ ಹೊತ್ತಿರುವ ಇನ್ಫಿಗೆ ಪುಕ್ಕಟೆ ಲ್ಯಾಂಡು, ರಿಯಾಯಿತಿ ದರದ ವಿದ್ಯುತ್, ಶೇ. 100 ರ ತೆರಿಗೆ ವಿನಾಯ್ತಿಗಳನ್ನು ಪಡೆದುಕೊಳ್ಳುವಾಗ ನಾಚಿಕೆಯೇ ಆಗುವುದಿಲ್ಲ.

● ಅಮೆರಿಕ, ಯುರೋಪ್‌ಗಳ ತಲೆ ಮೇಲೆ 'CAP' ಹಾಕಿಯೇ ಇನ್ಫಿ ದುಡ್ಡು ಮಾಡುತ್ತಿದೆ. ಅಂದರೆ cut and paste (CAP) ಸಾಫ್ಟ್‌ವೇರ್ ಸರ್ವಿಸ್ ಕೆಲಸಗಳಿಂದಲೇ ಇನ್ಫಿಗೆ ಶೇ. 70 ರಷ್ಟು ಆದಾಯ ಬರುತ್ತಿದೆ.

● ಸ್ವಇಚ್ಛಾಪೂರ್ವಕವಾಗಿ ಮೀಸಲಾತಿಗೆ ಬೈ ಹೇಳಿ ಸಂವಿಧಾನ ವಿರೋಧಿಸಿದ ಮೊದಲ ಕಂಪನಿ ಇನ್ಫಿ.

● ವಿಂಡೋಸ್, ಟ್ಯಾಲಿ ಇಂತಹ ಒಂದಾದರೂ ಪ್ರಾಡಕ್ಟ್ ಇನ್ಫಿಯಿಂದ ಬಂತಾ?

ನೊ, ನೆವರ್!

● 80 ರ ದಶಕದಲ್ಲಿ ಕೆನರಾ ಬ್ಯಾಂಕಿನ ಹಿರಿಯ ಬ್ರಾಹ್ಮಣ ಅಧಿಕಾರಿಗಳನ್ನೆಲ್ಲ ತನ್ನ ತೆಕ್ಕೆಗೆ ತೆಗೆದುಕೊಂಡ ಇನ್ಫಿ ಬ್ಯಾಂಕಿಂಗ್ ಸಾಫ್ಟ್‌ವೇರ್ ಒಂದನ್ನು ತಯಾರಿಸಲು ಶುರು ಮಾಡಿತು. ಅದು ಸರಿಯಾಗಿ ಎದ್ದೇಳಲೇ ಇಲ್ಲ! ಈಗ 25 ವರ್ಷಗಳ 'ಸಾಹಸ'ದ ನಂತರ 'ಫಿನಾಕಲ್' ಎಂಬ ಇನ್ಫಿಯ ಪ್ರಾಡಕ್ಟ್ ಕುಂಟುತ್ತಾ ಎಡವುತ್ತಾ ಸಾಗಿದೆ!


● ದಶಕದ ಹಿಂದೆ ಅಮೆರಿಕದಲ್ಲಿ ಇನ್ಫಿ ಸ್ಥಾಪಿಸಿದ 'ಯಂತ್ರಾ ಕಾರ್ಪೋರೇಷನ್ ಇಂಕ್' ಹುಟ್ಟುಟ್ಟುತ್ತಲೇ ಬಕ್ಕಬಾರಲು ಬಿತ್ತು...

ಸದ್ಯ ಸಾಕುಬಿಡಿ... ನಮ್ಮ ಕನ್ನಡ ಪತ್ರಿಕೆಗಳೂ 'ಇನ್ಫಿ 25' ಎಂದು ಗುಣಗಾನ ಮಾಡಿದ ಮೇಲೆ ಇನ್ನೊಂದಿಷ್ಟು ಬರೆಯೋಣವಂತೆ! ■

ಇತಿಹಾಸವು ಗತಕಾಲದ ಘಟನೆಗಳ ಮಹತ್ವ ಪೂರ್ಣ ದಾಖಲೆಯಾಗಿದೆ -ಟ್ಯಾಗೋರ್

ಕಾಸಿಲ್ಲದ ಸಿದ್ರಾಮಯ್ಯ ಕಾಂಗ್ರೆಸ್ಸಿಗೋಗದೆ ವಳ್ಳೇದು ಕಂದ್ರ

ಮೋಡಕವಿದ ವಾತಾವರಣದ ಜೊತೆಗೆ ಗಾಳಿಯೂ ಬೀಸತೊಡಗಿತ್ತು. ಹೆಗಲ ಮೇಲಿದ್ದ ದುಪಟಗಳು, ಶರೀರವನ್ನು ಸುತ್ತಿದ್ದವು. ಬೀಡಿ ಹಚ್ಚಿದ ಸೀರಣ್ಣ ಅದು ಮೂರೆ ದಮ್ಮಿಗೆ ಗೆದ್ದೆಯುವ ರೇಗೂ ಬಂದಿದ್ದಕ್ಕೆ ಸಿಟ್ಟುಗೊಂಡು ಎಸೆದು, ಇನ್ನೊಂದನ್ನ ಬಾಯಿಗೆ ಸಿಗಿಸಿಕೊಂಡು.



"ಸಿದರಾಮಯ್ಯ ಕಾಂಗ್ರೆಸ್ಸಿಗೋಯ್ತನಂತೆ?" ಎಂದ.

"ಅಂಗರೆ ದ್ಯಾವೇಗೌಡ ಆಗ್ಲೆ ಹೇಳಿದ್ದು ನಿಜಾಯ್ತು?" ಎಂದ ಕಾಳಮಾವ.

"ದ್ಯಾವೇಗೌಡ ಹೇಳದೇನು. ಅವುನಿಗೂ ಅದೇ ಬೇಕಾಗಿತ್ತಲವೆ ಮಾವ?" ಎಂದ ಉಗ್ರಿ.

"ದ್ಯಾವೇಗೌಡನವುತಾರ ನೋಡಿದ್ರೆ ಅಂಗೆ ಕಾಣ್ತದೆ" ಎಂದಳು ಜುಮ್ಮಿ.

"ಅವುತಾರ ಏನಾದಕ್ಕೋಗಿದ್ದನ್ಲೆ ಅವುನು?"

"ಅವುಂದು ಯಾವಾಗ್ಲು ಅವುತಾರವೆ ಅಲವೆ ಮಾವ. ಅವುನವುತಾರದ ದ್ಯಸಿಂದ ಪಟೇಲ್ರು ಮಗ ಕೂಡಲ ಸಂಗಮಕ್ಕೋಗಿ ಯಾರ ಕೈಲೂ ಮಾತಾಡದಂಗೆ ಕುಂತಿದ್ದನಂತೆ!"

"ಕೂಡ್ಲು ಸಂಗಮ ಅಂದ್ರೆ ಅದೆಲ್ಲದ್ದ?" ಎಂದಳು ಜುಮ್ಮಿ.

"ಕೂಡಲ ಸಂಗಮ ಬಸವಣ್ಣೋರು ಐಕ್ಯಾದ ಜಾಗವಂತೆ ಕಣೆ, ಅವುನ್ಯಾವಾಗ ಬ್ರಾಂಬ್ರುಡುಗಿನು ಹರಿಜನ್ರುಡುಗುನ್ನು ಮದವೆ ಮಾಡಿಸಿದ್ರೊ. ಆಗ್ಲೆ ಜನ ದಂಗೆ ಎದ್ದು ಬಸವಣ್ಣನ್ನ ಸಾಯಿಸಬೇಕು ಅಂತ ಹುಡುಕಿದರಂತೆ. ಆಗ ಬಸವಣ್ಣರು ಯಾರಿಗೂ ಹೇಳದಂಗೋಗಿ ಕೂಡಲ ಸಂಗಮದಲ್ಲಿ ಐಕ್ಯಾದರಂತೆ."

"ಅಂಗರೆ ಪಟೇಲ್ರ ಮಗನ್ನ ಉಷಾರಾಗಿ ನೋಡಿ ಕಬೇಕು ಕಂದ್ಯ."

"ನೋಡಿಕತ್ತರೆ ಬುಡು, ಅದಕ್ಕಲ್ಲ ಜನವುರೆ. ಮಸಿಜನ ಚನ್ನಗಿರಿಯಿಂದ್ಲೆ ಹೋಗಿ ಅವುನ್ನ ಕಾಯ್ತಾಯಿದ್ದರಂತೆ."

"ಅಲ್ಲಾ, ಪಟೇಲ್ರ ಮಗ ಬಸವಣ್ಣ ತೀರೋದ ಜಾಗಕ್ಕೆ ಹೋಗಿ ಕುಂತವುನೆ ಅಂದ್ರೆ, ಅವುನ ಮನಸಿಗೆ ಇನ್ನಂತ ಗಾಸಿಯಾಗಿರಬವುದು ಲ್ಯಕ್ಕ ಹಾಕು" ಎಂದ ಸೀರ.

"ಆದ್ರೆ ಅವುನ್ನ ಆ ದಾರಿಗೆ ನೂಕಿದೋರಿಗೆ ಏನೂ ಅನ್ನಿಸಿಲ್ಲ ಅನ್ನದಾದ್ರೆ ಅವುನು ಅಂಗೋಗದು ತೆಪ್ಪಲವೆ?"

"ತಪ್ಪೆಯ ಕಂದ್ಯ, ಆದ್ರು ಮನಸಿಗಾದ ಬೇಜಾರ ಹೇಳಬೇಕಲವೆ?"

"ಹೇಳಬೇಕು ಅಂದ್ರೆ ಸಿದರಾಮಯ್ಯನಂಗೆ ಪಾರ್ಟಿನೆ ಬುಟ್ಟು ಹ್ವರಡಬೇಕು. ಯಾಕೆ ಅಂದ್ರೆ, ಯಾವತ್ತಿಗೂ ವಡದೋದ ಹಾಲು ವಡದೋದ ಮನ್ಸು ಮದ್ಲಿನಂಗಿರ ದಿಲವಂತೆ. ಅಂಗೆ ಈ ಪಟೇಲ್ರ ಮಗ, ಮತ್ತೆ ಗೌಡನ ಪ್ಯಾಮಿಲಿ ಮದ್ಲಿನಂಗಿರಕ್ಯಾಗದಿಲ್ಲ."

"ಅಂತೂ ದ್ಯಾವೇಗೌಡನ ದ್ಯಸಿಂದ ಯಾರ್‍ಯಾರೊ ಏನೇನೊ ಆಗ್ಯೋದ್ರು ಕಂದ್ಯ" ಎಂದ ಸೀರ.

"ಊ ಕಣೊ. ಆ ಸಿಂಧ್ಯಾ ಸೌಂಡಲೆಸ್ಸಾದ, ಪಟೇಲ್ರ ಮಗ ಕೂಡಲ ಸಂಗಮಕೋದ, ಈಗ ಸಿದರಾಮಯ್ಯ ಕಾಂಗ್ರೆಸ್ಸಿಗ್ವಂಟವುನೆ. ಇನ್ನು ಯಾರ್‍ಯಾರ ಕತೆ ಏನೇನಾಯ್ತದೊ ಹೇಳಕೆ ಬರದಿಲ್ಲ."


"ಎಜ್ಯಾಟ್ಲಿ ಕರಟ್ ಕಣೊ ಉಗ್ರಿ, ನಮ್ಮ ದ್ಯಾವೇಗೌಡ್ರು ಯಾವುದ್ಕೂ ಉತ್ತರ ಕೊಡದಂಗೆ ಸುಮ್ಮನಿರದ್ರಿಂದ ಇನ್ನು ಏನೇನೊ ಇನ್ಸಿಡೆಂಟಾಯ್ತವೆ ಅಂತ ನನಿಗಂತೂ ಅನ್ನುಸ್ತಾ ಅದೆ" ಎಂದ ವಾಟಿಸ್ಸೆ.

"ಇದನ್ನೆಲ್ಲ ನೋಡಿದ್ರೆ, ಯಗಡೆ ಹೇಳಿದ್ದ ಮಾತೆ ಇವತ್ತಿಗೂ ನಿಜ ಅನ್ನುಸ್ತಾ ಅದೆ ಕಣೊ."

"ಅವುನೇನಂದಿದ್ದಾ?"

"ದ್ಯಾವೇಗೌಡ್ನು ಹ್ಯಗಡೆನೂ ತಿರಗ ಒಂದಾಗಕ್ಕೆ ಅಂತ ಮಾತು ಕತೆ ನ್ಯಡದಾಗ, ಹ್ಯಗಡೆ ದ್ಯಾವೇಗೌಡ್ರು ಮಕ್ಕಳು ಮರಿ ಬುಟ್ಟು ಬರದಾದ್ರೆ ಒಂದಾಗನ ಅಂದಿದ್ದ. ಅವನ ಮಾತೆ ನಿಜಾಯ್ತು ನೋಡು."

"ದ್ಯಾವೇಗೌಡುನ್ನ ಪೂರ್ತಿ ಅಂಡರ್‌ಸ್ಟ್ಯಾಂಡ್ ಮಾಡಿಕಂಡಿರದ್ರಿಂದ್ಲೆ ಕಣೊ ಸಿದರಾಮಯ್ಯ ಸೋನಿಯಾ ಗಾಂಧಿ ಕರುದ್ಲು ಅಂತ ಕಾಂಗ್ರೆಸ್ಸಿಗೊಂಟಿರದು."



"ಕಾಂಗ್ರೆಸ್ನು ಅವುನಿಗೆ ಹೇಳಿ ಮಾಡಿಸಿದ ಜಾಗಲ್ಲ ಬುಡು."

"ಅದ್ಯಾಕ್ಲ ಅಂಗಂತಿ. ನಾವ್ಯಲ್ಲ ಅಲ್ಲಿರಲಿಲ್ಲವೆ?" ಎಂದಳು.

"ನೀನೇನು ಸ್ಟೇಟ್ ಲೀಡ್ರಾಗಿದ್ದೇನಕ್ಕ ಆಪ್ಟರಾಲ್ ಮಂಡ್ಲು ಪಂಚಾತಿ ಮೆಂಬ್ರಾಗಿದ್ದೆ. ಬಾಟಂ ಲ್ಯವೆಲ್ಲಲ್ಲಿ ಪಾರ್ಟಿ ಕೌಂಟಗೆ ಬರದಿಲ್ಲ."

"ಬಾಟುಂ ಲ್ಯವೆಲ್ಲು ಅಂದ್ರೆ?"

"ಮಂಡ್ಲು ಪಂಚಾತಿ ಮೆಂಬ್ರು ಪ್ಲೇಸ್ ಅಂತ. ಟಾಪ ಲೆವೆಲ್ಲು ಅಂದ್ರೆ ಎಂ.ಪಿ. ಪ್ಲೇಸು ಅಂತ ಕಣಕ್ಕ."

"ಯಂತೆದೊ ನಮ್ಮಾಳತಕ್ಕೆ ನಾವಿದ್ವೊ."

"ಅದೇ ತರ ಇರಬೇಕಾಯ್ತದೆ ಸಿದರಾಮಯ್ಯ. ಆ ಕಾಂಗ್ರೆಸ್ನು ಯಂತ ಪಾರ್ಟಿಯಂದ್ರೆ, ಅದ್ಯಾವತ್ತು ವಿರೋಧಿಗಳೆದ್ರಿಗೆ ಹೋರಾಡಿದ್ದೆ ಇಲ್ಲ, ಪರೆಗ್‌ಜಾಂಪಲ್, ಕನಕಪುರದಲ್ಲಿ ನನ್ನ ಕ್ಲೋಸ್ ಫ್ರೆಂಡ್ ತೇಜಸ್ವಿನಿ ಎದುರಿಗೆ ಲಿಂಗಪ್ಪನ ಟೀಮು ಹೋರಾಡ್ತ ಅದೆ. ಮಂಡ್ಯದಲ್ಲಿ ಡಿ.ಸಿ. ತಮ್ಮಣ್ಣನೆದ್ರಿಗೆ ಅದೇ ಪಾರ್ಟಿ ಹೋರಾಡ್ತಯಿದೆ. ಹಾಸನದಲ್ಲಿ ಶಿವರಾಂನೆದ್ರಿಗೆ ಈ ಮುದಿ ಎತ್ತುಗಳು ಮುಲುಕ್ತಾ ಅವೆ. ಅದೇ ಶಿವಮೊಗ್ಗದಲ್ಲಿ ಕಾಗೋಡ ತಿಮ್ಮಪ್ಪನೆದ್ರಿಗೆ ಕುಮಾರ್ ಬಂಗಾರಿ ಕೂಗ್ತ ಅವುನೆ. ಅಂಥ ಪಾರ್ಟಿಗೆ ಈ ಸಿದರಾಮಯ್ಯ ಹೋದ್ರೆ ಐಡೆಂಟಿಫಿಕೇಷನ್ನೇ ವಂಟೋಯ್ತದೆ."

"ಅಂಗರೆ ದ್ಯಾವೇಗೌಡ ಮಾಡದನ್ನೆಲ್ಲ ನೋಡಿಕಂಡು ಇಲ್ಲೇ ಇರು ಅಂತಿಯೇನೋ."

"ಇರಬೇಕಾಗಿತ್ತು ಕಣೊ, ಇವರ ಅಧಿಕಾರ ಮುಗದ ಮ್ಯಾಲೆ ಸಿಂಧ್ಯಾ ಪ್ರಕಾಶ, ಸಿದರಾಮಯ್ಯ ಯಲ್ಲ ಒಂದು ಜಾಗಕ್ಕೆ ಸೇರಿಕಂಡು ಅಪ್ಪ ಮಕ್ಕಳ ಮೂಟೆ ಕಟ್ಟಿಯಸಿಬವುದಿತ್ತು."

"ಅದು ನೀನೇಳೊವಷ್ಟು ಸುಲಬಲ್ಲ. ದ್ಯಾವೇಗೌಡ ಅಂಗೈಲಿ ಇಡೀ ಕರ್ನಾಟಕದ ರಾಜಕಾರಣ ಮಡಿಕಂಡು ಚೌಕಾಬರ ಆಡ್ತ ಕುಂತವುನೆ."

"ಎಷ್ಟು ದಿನ ಚೌಕಾಬರ ಆಡ್ತನ?"

"ಕುಮಾರಸ್ವಾಮಿ, ರೇವಣ್ಣನಿಗೆ ಈ ರಾಜ್ಯದಲ್ಲಿ ಯಾರೂ ಎದುರಾಳಿಗಳಿರಬಾರ್ದು ಅಂಗೆ ಮಾ... ಹೋಗವರಿಗೂ ಆಡ್ತನೆ. ಅದೇ ಪಾರ್ಟಿಲಿದ್ರೆ ಅದನ... ನೋಡ್ತ ಕುಂತಿರಬೇಕಾಯ್ತದೆ. ಅದ್ಕೆ ಸಿದರಾಮ... ಹೋಗದೆ ವಳ್ಳೆದು."

"ಮಿಸ್ಟರ್ ಉಗ್ರಿ ಕಾಂಗ್ರೆಸ್ಸಿಗೆ ಸಿದರಾಮಯ್ಯ ಹೋ... ಮದ್ಲಿನಂಗೆ ಕಮಾಂಡಿಂಗ್ ವಾಯಿಸಲ್ಲಿ ಮಾತಾಡ... ಗದಿಲ್ಲ ಕಣೊ."

"ಯಾವ ಪಾರ್ಟಿಲು ಆಗದಿಲ್ಲ ಕಣೊ, ಇ... ಕುಮಾರಸ್ವಾಮಿ ಏನೇ ಕೇಳಿದ್ರು ಯಾವುದ್ಕು ಎಡೂರ... ಜೊತೆ ಮಾತಾಡಿ ಒಂದು ತೀರ್ಮಾನಕ್ಕೆ ಬಂ... ಯೇಳ್ತೀನಿ ಅಂತನೆ. ಯಲ್ಲಾತ್ಕು ಎಡೂರಪ್ಪನ್ನೆ ಕೇಳದ... ಇವುನೇನು ಅಂತ."

"ಅದೇ ನನಿಗೂ ಆಶ್ಚರ್ಯ, ಹಿಂದಿನ ಸರ್ಕಾರದ... ಧರಮಸಿಂಗ ಅಂತ ಮಾತನೇ ಹೇಳಿರಲಿಲ್ಲ ಅಲ... ಈ ಕುಮಾರಸ್ವಾಮಿ ಯಾಕಿಂಗೇ?"

"ಅವುನೇನೊ ಸಿಂಗಪೂರಿಗೋದ್ನಂತೆ?" ಎಂ... ಸೀರ.

"ಸಿಂಗಪೂರಿಗಾರ ಹೋಗ್ಲಿ ಶಿಕಾರಿ ಪುರಕ... ಹೋಗ್ಲಿ ಈ ಸಿದರಾಮಯ್ಯನ ಎಬಿಪಿಜ... ಕತೆ ಹೇಳು ಚಿಗಪ್ಪಾ."

"ಸಿದರಾಮಯ್ಯನ ಪಾರ್ಟಿ ಮೇಂಟೇ... ಮಾಡಕ್ಯಾಗದಿಲ್ಲ ಕಣೊ."

"ಯಾಕೊ ಉಗ್ರಿ?"

"ಮುಂದೆ ಚುನಾವಣೆ ಬಂದಾಗ ದೇ... ಗೌಡ್ರು ಕ್ಯಾಂಡೇಟುಗಳು ಹತ್ತತ್ತ ಕೋ... ಕೈಲಿಡಕಂಡು ಬತ್ತರೆ. ಅದೂ ಬಳ್ಳಾರಿ ಮೈ... ದುಡ್ಡದು. ಈ ಸಿದರಾಮಯ್ಯ ಅವುರೆದ... ಕ್ಯಾಂಡೇಟಾಕಿ ಕನಿಷ್ಠ ಐದು ಲಕ್ಷ ಕೊಡ... ಸಗತಿನೂ ಇಲ್ಲ."

"ಅದಂತೂ ಒಪ್ಪಿಗಳೊ ಮಾತೆಯ..."

"ಇನ್ನ ಕುಮಾರಣ್ಣನ ಕ್ಯಾಂಡೇಟ್‌ಗ... ಯಲ್ಲಾ ಕಾರ್ಯಕರ್ತರಿಗೂ ಮೊಬೈ... ಕೊಡುಸ್ತರೆ. ಟಾಟಾ ಸುಮೋ ಕೊಡುಸ... ಮಟನ್ನೂಟ ಡ್ರಿಂಕ್ಸ್ ಅಂತೂ ಕುಮಾರಣ... ತಿರಗ ಸಿ.ಎಂ. ಮಾಡಕ್ಕೆ ಅಂತ ನ್ಯಡಿಯೆ... ಕುರುಕ್ಷೇತ್ರ ನ್ಯಸಿಸಿಗಂಡ್ರೇ ಕಾಸಿಲ್ಲದ ಸಿದಾರಾಮ... ಕಾಂಗ್ರೆಸ್ಸಿಗೋಗದೆ ವಳ್ಳೆದಲವೆ?"

"ಎಜ್ಯಾಟ್ಲಿ ಕರಟ್, ಅವುನೇನೊ ಕಾಂಗ್ರೆಸ್ಸಿಗೋ... ಅನ್ನು ಈ ಸಿಂಧ್ಯಾನಕತೆ ಏನೋ ಆ ಮಹಿಮನ... ಏನೋ ಅಲ್ಲಂಗೂರು ಜಿ.ಟಿ. ದ್ಯಾವ ಇವುರ ... ಹೇಳೊ?"

"ಅವುರಕತೆ ಏನೂ ಇಲ್ಲ, ಕಡಿಗಾಲಗಂಟ ದ್ಯಾ... ಗೌಡ್ರ ಕಾಲ ಒತ್ತಿಗಂಡು ಕಾಲ ಮಾಡದೆಯ?"

-ಬಿ. ಚಂದ್ರೇಗೌ...


Zero Hour ಮುನ್ನಿ

1. 'ಕೋ-ಜಾ ಸರ್ಕಾರ'-ಈ ಪದದ ವಿರುದ್ಧಾರ್ಥಕ ಪದ ಬರೆಯಿರಿ
   - a) ಕಾಂಗ್ರೆ
   - b) ಷೇಣಿ
   - c) ದೇವೇಗೌಡ
   - d) ಸಿದ್ದು

2. 'ಮೊಬಲೈಸ್' ಮಾಡಿ (ಹೊಂದಿಸಿ ಬರೆಯಿರಿ)

a) ಅಂಬರೀಷ್	1. ಸ್ವಿಚ್ಡ್ ಆಫ್
b) ವಿಷ್ಣುವರ್ಧನ್	2. ಔಟ್ ಆಫ್ ಕವರೇಜ್ ಏರಿಯಾ
c) ರಾಘವೇಂದ್ರ ರಾಜ್‌ಕುಮಾರ್	3. ನಾಟ್ ರೀಚಬಲ್
d) ರಕ್ಷಿತಾ	4. line busy
e) ರಮೇಶ್	5. ಬ್ಯಾಟರಿ ಡೌನ್
f) ಯೋಗಿಶ್ವರ್	6. ಡಿಸ್‌ಕನೆಕ್ಟೆಡ್
g) ಶಶಿಕುಮಾರ್	7. ಪರ್ಮನೆಂಟ್ಲಿ ಔಟ್ ಆಫ್ ಆರ್ಡರ್
h) ಕಾಶಿನಾಥ್	8. ಟೆಂಪರರಿ ಔಟ್ ಆಫ್ ಆರ್ಡರ್


3. ಈ ವಾರ ಚನ್ನಿಗಪ್ಪ ಎತ್ತಿದ ಲಂಚದ ಮೂರರಷ್ಟನ್ನು ಚಲುವರಾಯಸ್ವಾಮಿ ಎತ್ತಿದ್ದಾನೆ. ಅವರಿಬ್ಬರು ಎತ್ತಿದ ಒಟ್ಟು ಲಂಚ 8 ಕೋಟಿ ರೂ. ಹಾಗಾದರೆ ಚನ್ನಿಗ, ಚಲುವರ ಎಷ್ಟು ಎತ್ತಿದರು?



3. ಈ ಪದ್ಯಕ್ಕೊಂದು ಟೈಟಲ್ ಆರಿಸಿ:

ಒಂದು ಎರಡು
ಈ ಸರ್ಕಾರ ಬರಡು
ಮೂರು ನಾಕು
ನುಂಗೋದ್ ಸಾಕು
ಐದು ಆರು
ಷೇಣಿ ಯಾರು
ಏಳು ಎಂಟು
ಯಾರಿಗೆ ಗಂಟು
ಒಂಭತ್ತು ಹತ್ತು
ಬೀಗ ಬತ್ತು
ಒಂದರಿಂದ ಹತ್ತು ಹೀಗಿತ್ತು
ಕೋ-ಜಾ ಸರ್ಕಾರ ಸೆಟೆದಿತ್ತು

- a) ಕೋ-ಜಾ: ಬ್ಯಾಂಡ್‌ಬಾಜಾ
- b) ನಂಬರ್ ಗೇಮ್: ಸರ್ಕಾರ ಖತಂ
- c) ಅಂಕಿಯ ಆಟ: ಅಂಕೆಯೇ ಇಲ್ಲದ ಓಟ
- d) ಜೆಡಿ(ಎಸ್)-ಬಿಜೆಪಿ: ಸಾಡೆಸಾತ್-ಚಾರ್‌ಸೋಬಿಸ್
- d) ಮೇಲಿನೆಲ್ಲವೂ ಓಕೆ




ಉತ್ತರಗಳು

1. c
2. ಹೇಗೇ ಹೊಂದಿಸಿದರೂ ಮಾರ್ಕ್ಸ್ ಗ್ಯಾರಂಟಿ
3. ಚನ್ನಿಗನ ಲಂಚ= x ರೂ
   So, ಚೆಲುವನ ಲಂಚ= 3xರೂ.
   ಒಟ್ಟು ಲಂಚ= x+3x=8ಕೋಟಿ
   4x=8 ಕೋಟಿ
   x=2 ಕೋಟಿ
   so ಚನ್ನಿಗನ ಲಂಚ = 2 ಕೋಟಿ
   ಚೆಲುವನ ಲಂಚ (ಚನ್ನಿಗನ ಮೂರರಷ್ಟು) = 2X3=6 ಕೋಟಿ
4. e

ಒಂದು ಯುಗದ ದಾಖಲೆಗಳನ್ನು ಇನ್ನೊಂದು ಯುಗಕ್ಕೆ ತಿಳಿಸುವುದು ಇತಿಹಾಸ -ಬುರ್ಕ್ ಹಾರ್ಡ್

ತಲ್ಲಣಿಸುವ ಮಾನವ




ಮನುಷ್ಯನ ಮನವೆಂಬ ಮರ್ಕಟ... ಸುಖಕ್ಕಾಗಿ ಹಂಬಲಿಸುತ್ತಾರೆ, ಸುಖವೆಂದರೆ ಏನೆಂಬ ಕಲ್ಪನೆ ಬಹಳ ಕಮ್ಮಿ ಜನಕ್ಕೆ ಇರುತ್ತದೆ. ಉಂಡು, ಉಟ್ಟು, ಪ್ರೀತಿ ಪಡೆದು, ಪ್ರೀತಿ ನೀಡಿ, ಕೈತುಂಬ ಹಣ ಪಡೆದು, ಅಂದರೆ ಅದರಿಂದ ಬರುವ ಸ್ವಾತಂತ್ರ್ಯ ಅಥವಾ ಬಂಧನವನ್ನು ಹೊಂದಿ ನೆಮ್ಮದಿಯಾಗಿರಬೇಕೆಂದು ಬಯಸುತ್ತಾರೆ. ಅದೆಲ್ಲ ದೊರತರೆ ಆಕಳಿಕೆ ಶುರುವಾಗುತ್ತದೆ. ತೊಂದರೆ, ನೋವು, ನಿಟ್ಟುಸಿರು ಮನುಷ್ಯನ ಬದುಕಿಗೆ ಬೇಕಾಗುತ್ತದೆ. ಸಾಹಸ, ರಿಸ್ಕ್ ಕೂಡ.

ಇದನ್ನು ಮೋಜಿನಿಂದ ವಿವರಿಸಬಹುದು. ಸದಾ ಗೆಲ್ಲುತ್ತ ಹೋದರೆ ಅದು ಜೂಜಾಗುವುದಿಲ್ಲ; ಸದಾ ಸೋತರೂ ಥ್ರಿಲ್ ದೊರೆಯುವುದಿಲ್ಲ, ಗೆಲ್ಲುವ ಆಶೆ, ಸೋಲುವ ಸಂಭವ ಮಾತ್ರ ಜೂಜನ್ನು ರಂಜನೆಯ ಕ್ರಿಯೆಯನ್ನಾಗಿ ಮಾಡುತ್ತದೆ. ಒಂದು ಕುದುರೆಯ ಮೇಲೆ ಹತ್ತು ರೂ. ಕಟ್ಟಿದವನು ಹತ್ತು ಸಾವಿರದವರೆಗೆ ಹೋಗುತ್ತಾನೆ; ಸೋಲು, ಗೆಲುವಿನ ಉಯ್ಯಾಲೆ ಜೂಜು; ಹಾಗೇ ಬದುಕು.

ಒಂದು ಕತೆ ಇದೆ. ಒಬ್ಬ ಯಾವ ಕೆಲಸ, ಉದ್ಯಮ, ಸಾಹಸ ಕೈಗೊಂಡರೂ ಯಶಸ್ವಿಯಾಗುತ್ತಿದ್ದ. ಸೋಲು ಅವನಿಗೆ ಗೊತ್ತೇ ಇರಲಿಲ್ಲ, ಇದರಿಂದ ಅವನ ಬದುಕು ಸಪ್ಪೆಯಾಗಿತ್ತು, ಅವನು ಬೇಸರಗೊಂಡಿದ್ದ. ಈ ವಿಚಾರವನ್ನು ಅವನು ತನ್ನ ಗೆಳೆಯನಿಗೆ ಹೇಳಿದ. ಗೆಳೆಯ ಸೂಚಿಸಿದ, "ನಿನ್ನ ಅರ್ಧ ಆಸ್ತಿಯ ಬೆಲೆಯುಳ್ಳ ನಿನ್ನ ವಜ್ರದುಂಗುರವನ್ನು ...ುದ್ರಕ್ಕೆ ಎಸೆದುಬಿಡು. ನಿನಗೆ ನಷ್ಟ ಎಂದರೆ ಏನೆಂದು ಗೊತ್ತಾಗುತ್ತೆ." ಆತ ಹಾಗೇ ಮಾಡಿದ.

... ಒಂದು ದಿನ ಊಟ ಮಾಡುತ್ತ ತನ್ನ ವಜ್ರದುಂಗರದ ನಷ್ಟದ ಬಗ್ಗೆ ಯೋಚಿಸುತ್ತಿದ್ದ. ಆಗ ಅಡಿಗೆಮನೆಯಿಂದ ...ನ ನಿಯತ್ತಿನ ಬಾಣಸಿಗ ಓಡಿ ಬಂದು, "ಸ್ವಾಮಿ, ನೋಡಿ! ಇದು ಮೀನಿನಲ್ಲಿತ್ತು" ಎಂದು ಮೀನಿನ ...ಟ್ಟೆಯಲ್ಲಿ ಬಂದಿದ್ದ ವಜ್ರದುಂಗರವನ್ನು ಅವನಿಗೆ ಹಿಂದಿರುಗಿಸಿದ.

... ಅದೃಷ್ಟವಂತನ ಬದುಕು ಸಪ್ಪೆಯಾಗಿಯೇ ಸಾಗತೊಡಗಿತು...



ಮೇ 8, 1988

ನಾಯಕ



ಕತೆ ಹೇಳುವಾಗ ಇನ್ನೊಂದು ಕತೆ. ರಾಜಕಾರಣಿಯೊಬ್ಬ ಮೊನ್ನೆ ಹೇಳಿದ್ದು. ಒಂದಾನೊಂದು ಕಾಲದಲ್ಲಿ ಮುಸ್ಲಿಂ ರಾಷ್ಟ್ರವೊಂದರಲ್ಲಿ ಸಿಂಹಾಸನ ತೆರವಾಯಿತು. ರಾಜವಂಶದಲ್ಲಿ ವಾರಸುದಾರರು ಯಾರೂ ಇರಲಿಲ್ಲ, ದೇಶದ ಜನಗಳು ಸೇರಿ ಒಳ್ಳೆಯ ಮನುಷ್ಯನೊಬ್ಬನನ್ನು ನಾಯಕನನ್ನಾಗಿ ಆರಿಸಿದರು. ಆತ ವ್ಯಾಪಾರಿ; ನಾಯಕತ್ವದ ಸ್ಥಾನದಲ್ಲಿ ಕೂತ ಆತ ವ್ಯಾಪಾರಿಯಾಗಿ ಅಂಗಡಿಯಲ್ಲಿ ಕೂತು ವ್ಯಾಪಾರ ಮಾಡುತ್ತಿದ್ದ. ತಮ್ಮ ನೆಚ್ಚಿನ ನಾಯಕ ವ್ಯಾಪಾರಿಯಾಗಿರುವುದು ಜನಕ್ಕೆ ಇಷ್ಟವಾಗಲಿಲ್ಲ. ಅದನ್ನು ನಾಯಕನಿಗೆ ತಿಳಿಸಿದರು. "ಹಾಗಾದರೆ ನಾನು ಜೀವನ ಹೇಗೆ ಸಾಗಿಸುವುದು? ಊಟ ಬಟ್ಟೆಗೆ ಏನು ಮಾಡಲಿ?" ಅಂದ ನಾಯಕ. "ನಾವು ತಮ್ಮ ಊಟ ಬಟ್ಟೆಗಾಗಿ ಬೇಕಾಗುವ ಹಣ ನೀಡುತ್ತೇವೆ, ನೀವು ನಾಯಕತ್ವದಲ್ಲಿ ಮಾತ್ರ ತೊಡಗಿ" ಅಂದರು.

ಸರಳವಾಗಿದ್ದ ಆತನಿಗೆ ಊಟ, ಬಟ್ಟೆ, ಪ್ರಯಾಣಕ್ಕೆ ಸಾಕಾಗುವಷ್ಟು ಸಣ್ಣ ಮೊತ್ತವೊಂದನ್ನು ಜನ ನೀಡತೊಡಗಿದರು. ಆಡಳಿತ ಚೆನ್ನಾಗಿತ್ತು, ಜನ ನೆಮ್ಮದಿಯಾಗಿದ್ದರು. ಒಂದು ದಿನ ನಾಯಕನ ಹೆಂಡತಿ, "ನಾವು ಸರಿಯಾಗಿ ಊಟ ಮಾಡಿ ಎಷ್ಟೋ ಕಾಲವಾಯಿತು. ನಾಳೆ ವಿಶೇಷ ಭಕ್ಷ್ಯಗಳನ್ನು ತಯಾರಿಸುತ್ತೇನೆ" ಅಂದಳು.

"ಅದಕ್ಕೆ ಹಣವೆಲ್ಲಿದೆ? ನಾವು ಊಟ, ಬಟ್ಟೆ, ಪ್ರಯಾಣಕ್ಕೆ ಬೇಕಾಗುವಷ್ಟು ಹಣವನ್ನು ಮಾತ್ರ ಪಡೆಯುತ್ತಿದ್ದೇವೆ" ಅಂದ ನಾಯಕ.

"ಹಾಗೇನಿಲ್ಲ, ಅವರು ನೀಡಿದ ಸಣ್ಣ ಮೊತ್ತದಲ್ಲೇ ಸ್ವಲ್ಪ ಹಣ ಉಳಿಸಿದ್ದೇನೆ, ಅದರಲ್ಲಿ ಮಾಡುತ್ತೇನೆ" ಅಂದಳು.

ನಾಯಕ ಕೋಪಗೊಂಡ. ತನ್ನ ಕಣ್ಣು ತಪ್ಪಿಸಿ ಆಗುತ್ತಿದ್ದ ಭ್ರಷ್ಟತೆಗೆ ವ್ಯಗ್ರನಾದ. ತನ್ನನ್ನು ಆರಿಸಿದ ಜನರನ್ನು ಕರೆದು ವಿಷಯವನ್ನು ವಿವರಿಸಿ ತನ್ನ ಹೆಂಡತಿ ಉಳಿಸಿದ್ದ ಹಣವನ್ನು ಅವರಿಗೆ ನೀಡಿ ಕ್ಷಮೆ ಕೇಳಿದ.

ಸದ್ದೇ ಆಗದ ಸುದ್ದಿ ಯಾವುದು?

...ನ್ಯಷ್ಮ ಮ.ಅಮ್ಮಣಗಿ. ಹಿಂದಲಗಾ
...ಪ್ಪ-ಮಗ ಕೃಪಾಪೋಷಿತ ಕೋ-ಜಾ ನಾಟಕ ...ಂಡಳಿಯು ಯಾವುದರಲ್ಲಿ ವಿಭಿನ್ನ?
* ಈ ನಾಟಕ ನೋಡಲು ಟಿಕೆಟ್ಟೇ ಇಲ್ಲ.

...ಹಾಲಸ್ವಾಮಿ. ಬೆಂಗಳೂರು
...ಕ್ಷತ್ಯಾಗವನ್ನಷ್ಟೇ ಮಾಡುತ್ತಿದ್ದ ವಿಜಯ ಸಂಕೇಶ್ವರರು ...ತ್ರಿಕಾ ತ್ಯಾಗವನ್ನು ಮಾಡಲು ಕಾರಣ?
* ಲಾಭ ನಷ್ಟದ ವ್ಯವಹಾರ.

...ವಿ.ಶಿವಕುಮಾರ್. ಕಾಳೀಹುಂಡಿ
...ನರಿಂದ ನಾನೂ ಮೇಲೆ ಬಂದೆ' ಎಂದು ...ಮಾರಣ್ಣ ಹಾಡ್ತಾ ಇದ್ದಾರಂತೆ?
* ಸದ್ಯದಲ್ಲೇ ತನ್ನಪ್ಪನಿಂದ ಅದೂ ಸುಳ್ಳು ...ನ್ನಲಿದ್ದಾರಂತೆ.

...ವಿ. ಸುಗುಣ. ಮೈಸೂರು
...ನ್ನ 'ಕಳ್ಳ-ಮಳ್ಳ' ಚಿತ್ರಕ್ಕೆ ಗೌಡ್ರು ಮತ್ತು ...ಮಾರಸ್ವಾಮಿ ಹೀರೋಗಳಾದರೆ 100 ದಿನ ...ರಂಟಿನಾ?
* ಚೆನ್ನಾಂಬಿಕಾ ಕಂಬೈನ್ಸ್ ಜೊತೆ ಸೇರಿದರೆ 20 ...ಂಗಳು ಗ್ಯಾರಂಟಿ.

...ವಿ.ರಾಘವೇಂದ್ರ. ಮೈಸೂರು
...ಡರ ಮಕ್ಕಳು ಮೇಲೋ ಅಥವಾ ಯಡ್ಡಿಯ ...ಕ್ಕಳು ಮೇಲೋ?
* ಸದ್ಯಕ್ಕೆ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳಂತಿವೆ.

ಶರತ್‌ಚಂದ್ರ. ಹರಪನಹಳ್ಳಿ
ಸರ್ಕಾರಿ ನೌಕರರೇಕೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವುದಿಲ್ಲ?
* ಸರಕಾರಿ ಸಂಬಳವನ್ನು ಸರಕಾರಕ್ಕೆ ಕೊಡಲಾರದ ಕಳ್ಳರು.

ಪಾರ್ವತಿ ಎಂ.ಎಸ್., ಕುಮಟಾ
ಬಡ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಮರೀಚಿಕೆಯೇ?
* ಶೆಟ್ಟಿ ಅವತಾರ ನೋಡಿದರೆ ಹಾಗೇ ಅನ್ನಿಸುತ್ತೆ.

ಬಸವರಾಜ್ ಬೆಸ್ತರ್. ಹರಪನಹಳ್ಳಿ
ಪೋಲಿ ಹುಡುಗಿಗೂ ಛೀ ತುಂಟಿಗೂ ಇರುವ ವ್ಯತ್ಯಾಸ?
* ಅಂತಹ ವ್ಯತ್ಯಾಸ ಇಲ್ಲ, ಪೋಲಿ ಕೆಲಸ ಮಾಡಿ ಛೀ ತುಂಟಿ ಅನ್ನಿಸಿಕೊಳ್ಳುತ್ತಾಳೆ.

ಬಿ.ಚಂದ್ರೇಗೌಡ. ಬೆಂಗಳೂರು
ಒಳ್ಳೆಯ ಹೆಂಡತಿ ಹೇಗಿರುತ್ತಾಳೆ?
* ಗಂಡನಿಗೆ ಗೊತ್ತಾಗದಂತೆ ಮೂಗುದಾರ ಹಾಕಿರುತ್ತಾಳೆ.

ಮಂಚಾಲಿ ಗುರುರಾಜಚಾರು. ಬಳ್ಳಾರಿ
ಕುಡಿಯುವ ಬಾರ್‌ನಲ್ಲಿ dim light ಇರುತ್ತದೆ ಏತಕ್ಕಾಗಿ?
* ಕುಡುಕರಿಗೆ ಬಿಲ್ಲಿನ ಲೆಕ್ಕ ಗೊತ್ತಾಗದಿರಲೆಂದು.

ನಾರಾಯಣ ಬಾಮರಾವ್ ಜನವಾಡೆ. ಬೆನಾಡಿ
ಮಕ್ಕಳಿಗೆ ತಾಯಿ ಹಾಲು ಶ್ರೇಷ್ಠವೋ? ಬಾಟಲಿ ಹಾಲು ಶ್ರೇಷ್ಠವೋ?
* ಬಾಟಲಿ ಹಾಲು ಕ್ರಮೇಣ ಬಾಟಲಿ ಹುಡುಕುವಂತೆ ಮಾಡಿಬಿಡುತ್ತೆ.




ಎಚ್.ಸಿ. ಭಾಗ್ಯಕುಮಾರ್. ಬೆಂಗಳೂರು
ಕಾಮ ಉತ್ಕಟತೆಯಲ್ಲಿದ್ದಾಗ ರೂಪ ಗೌಣ ಏಕೆ?
* ಅದಕ್ಕೇ ಕಾಮಕ್ಕೆ ಕಣ್ಣಿಲ್ಲ ಎಂದಿರುವುದು.

ಜೆ.ಎ. ಖಲಂದರ್ ಅಜೀಜ್. ಜಾವಗಲ್
ಮಿಡ್‌ನೈಟ್‌ನಲ್ಲಿ ನೈಂಟಿ ಹಾಕ್ಕೊಂಡು ಹಾಫ್ ನೈಟಿ ಎದುರಿಗೆ ಬಂದರೆ ಸ್ವಾಮೀಜಿಗಳ ಪರಿಸ್ಥಿತಿ?
* ಫಾರಿನ್ ಟೂರ್.


ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
ಬಸುರಿ ಹೆಂಡತಿಯ ಜೊತೆ ಹೋಗುವಾಗ ಗಂಡ ನಾಚಿಕೊಳ್ಳುವುದೇಕೆ?
* ಮಾಲು ಸಮೇತ ಸಿಕ್ಕಿದ ಕಳ್ಳನೂ ನಾಚಿಕೊಳ್ಳುತ್ತಾನೆ.

ಛೀ ತುಂಟಿ!



ಅಕ್ಕ ಪಕ್ಕದ ಮನೆಯ ಹೆಂಗಸರಿಬ್ಬರು ತುಂಬಾ ಸ್ನೇಹಿತೆಯರು. ಮಾತಿಗೆ ಕೂತರೆಂದರೆ ಅವರ ಬಾಯಿಯಲ್ಲಿ ಬರದ ವಿಷಯವಿಲ್ಲ. ಅದರಲ್ಲಿ ಒಬ್ಬಾಕೆಯದು ಮೇಲುಗೈ. ಅಷ್ಟೇ ಅಲ್ಲ ಆಕೆಯ ಮುದ್ದಿನ ನಾಯಿಯ ಕೆಲಸಗಳೂ ಮೇಲುಗೈ!

ಸ್ನೇಹಿತೆ ಬಂದಾಕ್ಷಣ ತನ್ನ ನಾಯಿಯ ಆಟ, ಊಟ, ಓಡಾಟ, ಕೆಲಸ ಕಾರ್ಯಗಳ ಬಗ್ಗೆ ಮಾತಿಗಾರಂಭಿಸಿದಳು. ನನ್ನ ಸ್ವೀಟ್ ಪಪ್ಪಿ ಏನು ಕೆಲಸ ಮಾಡಿಕೊಡುತ್ತೆ ಗೊತ್ತಾ, ಅಂಗಡಿಗೆ ಹೋಗುತ್ತೆ, ತರಕಾರಿ ತರುತ್ತೆ, ಬ್ರೆಡ್ ತರುತ್ತೆ... ಎಲ್ಲಾ ನನ್ನಂಗೆ, ನಾನು ಮಾಡೋದೆಲ್ಲ ಮಾಡುತ್ತೆ. ಬಾಳ ಚುರುಕು ಎಂದು ಹೊಗಳಲಾರಂಭಿಸಿದಳು. ಎಲ್ಲವನ್ನು ಸಾವಧಾನವಾಗಿಯೇ ಆಲಿಸಿದ ಗೆಳತಿ ಹೋಗುವಾಗ ಎಲ್ಲಿ ನಿಮ್ಮ ಸ್ವೀಟ್ ಪಪ್ಪಿ ಎಂದು ಹುಡುಕತೊಡಗಿದಾಗ, ಅದು ಬೀದಿ ನಾಯಿಯ ಜೊತೆ ಉತ್ತರ ದಕ್ಷಿಣಾಭಿಮುಖವಾಗಿ ಒದ್ದಾಡುತ್ತಿತ್ತು. ಗೆಳತಿ ಎಲ್ಲಾ ನನ್ನಂಗೆ ಅಂದಿದ್ದು ಜ್ಞಾಪಕವಾಗಿ ಗೆಳತಿಯನ್ನೊಮ್ಮೆ ಪ್ರಶ್ನಾರ್ಥಕವಾಗಿ ನೋಡಿದಳು.



...ಬಸವರಾಜ ಹೂಗಾರ್. ಸವದತ್ತಿ
ಸದ್ದೇ ಆಗದ ಸುದ್ದಿ ಯಾವುದು?
* ಸ್ವಾಮೀಜಿಗಳ ಸ್ವಪ್ನಸ್ಖಲನ.

ಬಹುಮಾನಿತ ಪ್ರಶ್ನೆ

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ

ಅಧಿವೇಶನ ನಡೆಯುವಾಗ ಕುಮಾರಸ್ವಾಮಿಗೆ ಸಿಂಗಪುರದಲ್ಲೇನು ಕೆಲಸ?

ಕಳೆದ ವಾರದ ಪ್ರಶ್ನೆ: ಕುಮಾರಸ್ವಾಮಿ ಮಂತ್ರಿಮಂಡಲ ಸೇರಲು ಬೇಕಾದ ಅರ್ಹತೆಗಳೇನು?
ಉತ್ತರ: ಎಂ.ಪಿ. ಪ್ರಕಾಶರ *'Intellectual Impoverishment'* ನೋಡಿದ ಮೇಲೆ ಯಾವ ಅರ್ಹತೆಯೂ ಬೇಕೆನಿಸುವುದಿಲ್ಲ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ವೆಂಕಟರಮಣಶೆಟ್ಟಿ, ವಿದ್ಯಾರಣ್ಯಪುರ, ಮೈಸೂರು

ಪತ್ರಿಕೆಯ ಈ ಮೂರು ಜಾಣರು ಉತ್ತಮವಾಗಿ ಉತ್ತರಿಸಿರುವುದರಿಂದ ಅವರ ಉತ್ತರಗಳನ್ನೂ ಇಲ್ಲಿ ಪ್ರಕಟಿಸುತ್ತಿದ್ದೇವೆ:


* ದೇವೇಗೌಡರ *Acting Skill*, ಕುಮಾರಸ್ವಾಮಿಯ *Instant luck*, ಎಂ.ಪಿ. ಪ್ರಕಾಶ್‌ರ *Over Patience* ಈ 3 ಮುಖ್ಯ ಅರ್ಹತೆಗಳು ಇರಬೇಕು.
  -ಕೆ. ಶ್ರೀನಿವಾಸ್, ಮಂಡ್ಯ

* ಗುಲಾಮಗಿರಿತನ, ಹಾಗೂ ಗೌಡರ ಕೃಪಾಕಟಾಕ್ಷ
  -ಎಚ್.ಸಿ. ಭಾಗ್ಯಕುಮಾರ್, ಜಯನಗರ, ಬೆಂಗಳೂರು.

* ಸೆಕ್ಯುಲರ್ ಪದದ ಅರ್ಥ ಗೊತ್ತಿರಬಾರದು; ತಂದೆ-ಮಕ್ಕಳಿಗೆ ಬಹುಪರಾಕ್ ಹೇಳುವುದು ಗೊತ್ತಿರಬೇಕು.
  -ಪೂರ್ಣಿಮಾ, ಹಗರಿಬೊಮ್ಮನಹಳ್ಳಿ

KAS ಪರೀಕ್ಷೆ-ಅರ್ಜೆಂಟ್ ಯಾಕೆ?

ಕರ್ನಾಟಕ ಲೋಕಸೇವಾ ಆಯೋಗ ತರಾತುರಿಯಲ್ಲಿ 101 ಕೆಎಎಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಜುಲೈ 2 ರ ಭಾನುವಾರದ ದಿನಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟಣೆ ನೀಡಿರುವ ಕೆಪಿಎಸ್‌ಸಿ ಜುಲೈ 6 ರಿಂದ ಅರ್ಜಿ ವಿತರಿಸಿ, ಜುಲೈ 31 ರೊಳಗೆ ಅರ್ಜಿ ಸ್ವೀಕರಿಸಿ, ಸೆಪ್ಟೆಂಬರ್‌ನಲ್ಲಿ ಪೂರ್ವಭಾವಿ ಪರೀಕ್ಷೆ ನಡೆಸಿ ಅಕ್ಟೋಬರ್‌ನಲ್ಲೇ ರಿಸಲ್ಟ್ ನೀಡಿ ನವೆಂಬರ್‌ನಲ್ಲೇ ಮೈನ್ ಎಕ್ಸಾಮ್ ನಡೆಸಿ, ಡಿಸೆಂಬರ್‌ನಲ್ಲಿ ರಿಸಲ್ಟ್ ಪ್ರಕಟಿಸಿ... ತಿರುಗಾ ಅದೇ ಡಿಸೆಂಬರ್‌ನಲ್ಲೇ ಅರ್ಹ ಅಭ್ಯರ್ಥಿಗಳ ಇಂಟರ್‌ವ್ಯೂ ಮಾಡಿ.... ಒಟ್ಟಿನಲ್ಲಿ ಜನವರಿ ಕೊನೆಯೊಳಗಾಗಿ ಆಯ್ಕೆ ಪ್ರಕ್ರಿಯೆ ಮುಗಿಸಿಬಿಡುವ ಉದ್ದೇಶ ಹೊಂದಿದೆ. ಬಹುಶಃ ಇಂತಾ ಖಡಕ್ ಟೈಂ ಟೇಬಲ್ ಅನ್ನು KPSC ಅದರ ಇತಿಹಾಸದಲ್ಲೇ ಪ್ರಕಟಿಸಿರಲಿಲ್ಲವೆಂದು ಕಾಣುತ್ತದೆ. ಹೀಗಿರುವಾಗ ಇವತ್ತು ಇಷ್ಟು ಅರ್ಜೆಂಟಾಗಿ ಕೆಎಎಸ್ ಪರೀಕ್ಷೆಗಳನ್ನು ನಡೆಸಲು ಹೊರಟಿರುವ ಉದ್ದೇಶ ಏನು ಎಂದು ಪ್ರಶ್ನೆ ಹಾಕಿಕೊಂಡು ಹೊರಟರೆ ಬಹು ಆಯ್ಕೆಯ ಉತ್ತರಗಳೇನೂ ಸಿಗುವುದಿಲ್ಲ. ಎಲ್ಲರಿಗೂ ಗೊತ್ತಾಗಬೇಕಾದ ಒಂದೇ ಉತ್ತರ ಚೇರ್ಮನ್ ಡಾ. ಎಚ್.ಸಿ. ಕೃಷ್ಣ 2007 ರ ಜನವರಿಗೆ ನಿವೃತ್ತಿಯಾಗುತ್ತಿದ್ದಾರೆ! ಅಷ್ಟರೊಳಗೆ ಇನ್ನೊಂದು ಬ್ಯಾಚ್ ಕೆಎಎಸ್ ಅಧಿಕಾರಿಗಳನ್ನು ಆಯ್ಕೆ ಮಾಡಿ ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳಲು ಡಾ. ಕೃಷ್ಣ ಬಯಸಿದ್ದಾರೆ.



ಕರ್ನಾಟಕದಲ್ಲಿ ಗಜೆಟೆಡ್ ಆಫೀಸರ್‌ಗಳ ನೇಮಕಾತಿ ಹೇಗೆ ನಡೆಯುತ್ತದೆಂದು ಗೊತ್ತಿರುವವರಿಗೆ ಇದರಿಂದೇನೂ ಆಶ್ಚರ್ಯವಾಗುವುದಿಲ್ಲ. ಈಗ ಕೆಪಿಎಸ್‌ಸಿ ನೇಮಕಾತಿ ಮಾಡಿಕೊಳ್ಳಲು ಹೊರಟಿರುವುದು 101 ಕ್ಲಾಸ್ I ಹಾಗೂ II ಅಧಿಕಾರಿಗಳನ್ನು. ಈ ಪರೀಕ್ಷೆಗಳಲ್ಲಿ ಜಾಣರು ಕಷ್ಟಪಟ್ಟು ಓದಿ ಒಳ್ಳೇ ಮಾರ್ಕ್ಸ್ ತೆಗೆದರೂ ದುಡ್ಡು ಕೊಡಬೇಕು, ದಡ್ಡರು ಓದದೆ ಚೆನ್ನಾಗಿ ಮಾರ್ಕ್ಸ್ ತೆಗೆಯದಿದ್ದರೂ ಕಾಸು ಕೊಟ್ಟು ಹುದ್ದೆ ಗಿಟ್ಟಿಸಬಹುದೆಂಬ ಸಿಂಗಲ್ ಫಾರ್ಮುಲಾ ಕೆಪಿಎಸ್‌ಸಿಯಲ್ಲಿದೆ. ಆ ಲೆಕ್ಕಾಚಾರದಲ್ಲಿ ಹೇಳಬೇಕೆಂದರೆ ಈ ಬಾರಿ ಕನಿಷ್ಠ 5 ಕೋಟಿ ರೂಪಾಯಿ ಆದಾಯ ಕೆಪಿಎಸ್‌ಸಿಗೆ ಬರುವ ನಿರೀಕ್ಷೆಯಿದೆ. ದಯವಿಟ್ಟು ತಪ್ಪು ತಿಳಿಯಬೇಡಿ. ಈ ಹಣ ಅರ್ಜಿ ಶುಲ್ಕದ್ದಲ್ಲ... ರೋಲ್‌ಕಾಲಿನದು.

ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ ..... ಚಿಂತೆ

ಯಾವುದೇ ಒಂದು ಬ್ಯಾಚಿನ ಕೆಎಎಸ್ ನೇಮಕಾತಿಗಳು ಕೇವಲ 6 ತಿಂಗಳಲ್ಲಿ ಮುಗಿದಿರುವ ಉದಾಹರಣೆ ಕರ್ನಾಟಕದಲ್ಲಿಲ್ಲ. 1998 ಹಾಗೂ 1999 ರ ನೇಮಕಾತಿಗಳು ಭ್ರಷ್ಟಾಚಾರ, ಅಕ್ರಮಗಳಿಂದಾಗಿ ಕೇಸುಗಳಾಗಿ ಕೊನೆಗೆ ಬಗೆಹರಿದದ್ದು ಏಳು ವರ್ಷಗಳ ನಂತರ. 2005 ರ ನೇಮಕಾತಿಗೆ ಪ್ರಕ್ರಿಯೆ ಸಹ ಪೂರ್ಣಗೊಳ್ಳಲು ಒಂದೂವರೆ ವರ್ಷ ತೆಗೆದುಕೊಂಡಿದೆ. ಅಂದರೆ 2004 ರ ನವೆಂಬರ್‌ನಲ್ಲಿ ಅರ್ಜಿ ಕರೆದು, 2005 ರ ಫೆಬ್ರವರಿಯಲ್ಲಿ ಅಂದರೆ 4 ತಿಂಗಳ ನಂತರ ಪ್ರಿಲಿಮಿನರಿ ಪರೀಕ್ಷೆ ನಡೆಸಿ, ಮಾರ್ಚ್‌ನಲ್ಲಿ ಫಲಿತಾಂಶ ಪ್ರಕಟಿಸ ಲಾಗಿತ್ತು. ಪ್ರಿಲಿಮ್ಸ್ ನಡೆದ ಐದು ತಿಂಗಳ ನಂತರ 2005 ರ ಜುಲೈ-ಆಗಸ್ಟ್‌ನಲ್ಲಿ ಮೈನ್ಸ್ ಎಕ್ಸಾಮ್ ನಡೆದು ಮೂರು ತಿಂಗಳ ನಂತರ ರಿಸಲ್ಟ್ ಪ್ರಕಟಿಸ ಲಾಗಿತ್ತು. ಅರ್ಹ ಅಭ್ಯರ್ಥಿಗಳನ್ನು ಸಂದರ್ಶನ 2006 ರ ಏಪ್ರಿಲ್-ಮೇನವರೆಗೂ ನಡೆದಿದ್ದವು. ಅಂದರೆ ಯಾವುದೇ ತಂಟೆ ತಕರಾರುಗಳಿರದಿದ್ದಾಗಲೂ 2005 ರ ಕೆಎಎಸ್ ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಳ್ಳಲು ಒಂದೂವರೆ ವರ್ಷ ಬೇಕಾಗಿತ್ತು. ಒಂದು ಐಎಎಸ್ ಬ್ಯಾಚ್ ಪರೀಕ್ಷೆಗಳಂತೂ ಒಮ್ಮೆ ಶುರುವಾಗಿ ಪೂರ್ಣಗೊಳ್ಳಲು ಹದಿನೈದು ತಿಂಗಳಿಗಿಂತಾ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ವಸ್ತುಸ್ಥಿತಿ ಹೀಗಿರುವಾಗ 2006 ರ ಈಗಿನ ಕೆಎಎಸ್ ಪರೀಕ್ಷೆಗಳ ಟೈಂ ಟೇಬಲ್ ಅನ್ನು ಇಷ್ಟು ತರಾತುರಿಯಿಂದ ನಡೆಸುತ್ತಿರುವುದು ಚೇರ್ಮನ್ ಕೃಷ್ಣರಿಗೋಸ್ಕರ ಎಂಬುದೇ ಜಿಗುಪ್ಸೆ ಹುಟ್ಟಿಸುವಂತಿದೆ. ಡಾ. ಕೃಷ್ಣ ರಿಟೈರ್ ಆಗಿ ಹೋದರೆ ಏನು ಕೆಪಿಎಸ್‌ಸಿ ಮುಚ್ಚಿ ಹೋಗುತ್ತದಾ ಅಥವಾ ಆನಂತರ ಯಾವ ನೇಮಕಾತಿಗಳೂ ನಡೆಯುವುದೇ ಇಲ್ಲವಾ?

ಈಗಿನ ನಿಯಮಗಳ ಪ್ರಕಾರ ಡಾ. ಕೃಷ್ಣರ ಅವಧಿ 2007 ರ ಜನವರಿ 17 ಕ್ಕೆ ಮುಗಿಯುತ್ತದೆ. ಅಷ್ಟರೊಳಗೆ ಇನ್ನೊಂದು ಬ್ಯಾಚ್ ನೇಮಕಾತಿ ಮಾಡಿ ಸಿಕ್ಕಷ್ಟು ಗಂಟು ಮಾಡಿಕೊಂಡು ಹೋಗುವ ಉದ್ದೇಶ ಬಿಟ್ಟರೆ ಈ ಕೆಪಿಎಸ್‌ಸಿಯವರಿಗೆ ಬೇರೆ ಯೋಚನೆ ಇದ್ದಂತಿಲ್ಲ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ 1997 ರಲ್ಲಿ ಕೆಪಿಎಸ್‌ಸಿ ಮೆಂಬರ್ ಆಗಿ ಉದ್ಯೋಗ ಸೌಧಕ್ಕೆ ಕಾಲಿಟ್ಟ ಕೃಷ್ಣ ನಾಲ್ಕು ವರ್ಷ ಲೋಕಸೇವಾ ನಿರತರಾಗಿದ್ದು ಎಸ್.ಎಂ. ಕೃಷ್ಣರ ಕೃಪಾಕಟಾಕ್ಷದಿಂದ 2001 ರಲ್ಲಿ ಕೆಪಿಎಸ್‌ಸಿ ಚೇರ್ಮನ್ ಆದರು. ಅವರು ಚೇರ್ಮನ್ ಆದ ಮೇಲೆ ನಡೆದದ್ದು 2005 ರ ಕೆಎಎಸ್ ನೇಮಕಾತಿ ಒಂದೆ. ಅಲ್ಲೂ ಸಹ ಅಭ್ಯರ್ಥಿಗಳ ಪ್ರತಿಭೆಗಿಂತಾ ಹೆಚ್ಚಾಗಿ ದುಡ್ಡು, ಜಾತಿ, ತಾಳೀಭಾಗ್ಯ ಯೋಜನೆಗಳೇ ಮಾನದಂಡಗಳಾಗಿ ಸಾವಿರಾರು ಅರ್ಹರ ಕನಸುಗಳಿಗೆ ಕೊಳ್ಳಿ ಇಡಲಾಗಿತ್ತು.


ಈಗ 2007 ರ ಜನವರಿಯೊಳಗೆ ನೇಮಕಾತಿ ಪ್ರಕ್ರಿಯೆ ಮುಗಿಸಿಬಿಡಲು ಕೆಪಿಎಸ್‌ಸಿ ತರಾತುರಿಯಿಂದ ಹೊರಟಿದೆ.

ಅಭ್ಯರ್ಥಿಗಳಿಗೆ ಓದಿ ತಯಾರಿ ಮಾಡಿಕೊಳ್ಳಲು ಅವಕಾಶವಿರದಂತೆ ನಡೆಸಲಾಗುತ್ತಿರುವ ಈ ಪರೀಕ್ಷೆಯನ್ನು 'ಕೃಷ್ಣ ಲೀಲೆ' ಎನ್ನಬಹುದು.

–ಈಶ

ಮುಂದಿನ ಚೇರ್ಮನ್
ಗೌಡರ ಮಗನೇ

ಡಾ. ಎಚ್.ಸಿ. ಕೃಷ್ಣನವರ ನಿವೃತ್ತಿಯ
ಕೆಪಿಎಸ್‌ಸಿಯ ಮುಂದಿನ ಚೇರ್ಮನ್ ಆಗ
ಈಗಾಗಲೇ ಪೈಪೋಟಿ ಶುರುವಾಗಿದೆ. ಪಿಡಬ್ಲ್ಯೂಡಿ ಇಲಾಖೆಯ ಚೀಫ್ ಇಂಜಿನಿಯರ್ ವೀರಭದ್ರೇಗೌಡ, ಈ ಹಿಂದೆ ಸಚಿವ ಎಚ್.ಕೆ. ರೇವಣ್ಣನಿಗೆ ಪಿ.ಎಸ್ ಆಗಿದ್ದ ತಿಪ್ಪೇಸ್ವಾಮಿ (ಕುರುಬ ಜಾತಿ)



ಈಗಾಗಲೇ ಓಡಾಡಲು ಶುರು ಮಾಡಿ
ಕೆಪಿಎಸ್‌ಸಿ ಚೇರ್ಮನ್ ಆಯ್ಕೆಗೆ ದುಡ್ಡೇ
ಯಾಗಿರುವು ದರಿಂದ, ವೀರಭದ್ರೇಗೌಡ ಅಷ
ಕದ್ದು ಮಡಗಿರುವುದರಿಂದ ಆತನಿಗೇ ಛಾನ್ಸ
ರೂಮರ್‌ಗಳಿವೆ.

ಆದರೆ ಇದು ದೇವೇಗೌಡರ ಕೈಲಿದೆ:
ದೇವೇಗೌಡರು ತಮ್ಮ ಒಬ್ಬ ಮ
ಮುಖ್ಯಮಂತ್ರಿ ಮಾಡಿ, ಇನ್ನೊಬ್ಬನನ್ನು ಕ
ಮಿನಿಸ್ಟರ್ ಮಾಡಿದ್ದರು ಅವರ ಪಕ್ಕದಲ್ಲೇ
ನಿರುದ್ಯೋಗಿ ಪುತ್ರನಿದ್ದಾನೆ.

ಅದು ಎಚ್.ಡಿ. ಬಾಲಕೃಷ್ಣೇಗೌಡ!

ಕೆಪಿಎಸ್‌ಸಿಗೆ 2007 ರಲ್ಲಿ ಬಾಲಕೃಷ್ಣ
ಚೇರ್ಮನ್ ಆಗಿ ಬಂದು ಕುಳಿತರೆ ಏನೂ
ವಿಲ್ಲ.

ಅಷ್ಟೇ ಅಲ್ಲ ಕೆಪಿಎಸ್‌ಸಿಯಲ್ಲಿ ಈಗ ಪ
ಅಂತ ಇರುವುದೇ ಇಬ್ಬರು: ವೆಂಕಟಸ್ವಾಮಿ
ದಾಸಯ್ಯ. ಇನ್ನೂ ಮೂವರಾದ ಜೀವಿಯ
ಎಚ್.ಎಸ್. ಪಾಟೀಲ್ ಹಾಗೂ ಮಹಮದ
ಖಾನ್ ಈಗಾಗಲೇ ನಿವೃತ್ತರಾಗಿದ್ದಾರೆ. ಈಗ
ಯಿರುವ ಈ ಮೂರು ಮೆಂಬರ್ ಸ್ಥಾನ
ದುಡ್ಡಿರುವ ಕುಳಗಳು ಲಾಬಿ ನಡೆಸುತ್ತಿವೆ.

ಯಾರಬ್‌ನಗರದ ರೌಡಿ ಮುನ್ನಾಖಾನ್ ಯಾ
ಹಡ್ಸನ್ ಸರ್ಕಲ್ ಮಾರಾಮಾರಿಯ
ಹಿಂದೆ ದಿವಾನಾ ಆಲಿಗೆ ಯಾರ ಸ್ಕೆಚ್



ಮಟ ಮಟ ಮಧ್ಯಾಹ್ನ, ಅದೂ ಬೆಂಗಳೂರಿನ ಅತ್ಯಂತ ಸಂಚಾರದಟ್ಟಣೆಯ ಹಡ್ಸನ್ ಸರ್ಕಲ್ಲಿನ ನಟ್ಟ ನಡುವೆ ನಡೆದ ಆ ಭೀಕರ ಮಾರಾಮಾರಿಯನ್ನು ಪೊಲೀಸರು ಕಣ್ಣಾರೆ ಕಂಡಿದ್ದರು. ಸಿಟಿ ಕೋರ್ಟಿನಿಂದ ಹೊರಬಿದ್ದ ಟಾಟಾ ಸುಮೋ ಒಂದನ್ನು ಸದ್ದಿಲ್ಲದೇ ಹಿಂಬಾಲಿಸಿದ ಮಾರುತಿ ವ್ಯಾನ್ ಒಂದು ನಟ್ಟನಡು ಸರ್ಕಲ್ಲಿನಲ್ಲಿ ಅಡ್ಡ ಹಾಕುತ್ತದೆ. ಮತ್ತೊಂದು ಟಾಟಾ ಸುಮೋ ಅದರ ಹಿಂದೆಯೇ ಬರುತ್ತದೆ. ಮುಂದೆ-ಹಿಂದೆ ಎರಡೂ ಗಾಡಿಗಳಿಂದ ತಲವಾರು ಹಿಡಿದ ರೌಡಿಗಳ ಹಿಂಡು ನಡುವೆ ಸಿಕ್ಕಿ ಬಿದ್ದ ಟಾಟಾ ಸುಮೋ ಅನ್ನು ಚಿಂದಿ ಮಾಡುತ್ತದೆ. ಅದರ ಒಳಗಿದ್ದವರನ್ನು ಕತ್ತರಿಸುತ್ತದೆ. ಇಡೀ ಸರ್ಕಲ್ಲಿನ ಟ್ರಾಫಿಕ್ ಜಾಮ್ ಆಗುವುದಕ್ಕೂ ಪಕ್ಕದಲ್ಲೇ ದಿನಗೂಲಿಗಳ ಪ್ರತಿಭಟನೆಯ ಬಂದೋಬಸ್ತಿಗೆ ಬಂದಿದ್ದ ಪೊಲೀಸರು ಬರುವುದಕ್ಕೂ ಒಂದೇ ಆಗಿ ರೌಡಿಗಳು ಎದ್ದೂಬಿದ್ದು ಪರಾರಿಯಾದರೆ; ರಕ್ತದ ಓಕುಳಿಯಲ್ಲಿ ಬಿದ್ದವರನ್ನು ಪೊಲೀಸರೇ ನಿಂತು ಆಸ್ಪತ್ರೆಗೆ ಸಾಗಿಸುತ್ತಾರೆ.

ಇದು ಜೂನ್ ಇಪ್ಪತ್ತೇಳರ ಮಧ್ಯಾಹ್ನ ಹಡ್ಸನ್ ಸರ್ಕಲ್ಲಿನಲ್ಲಿ ನಡೆದ ಘಟನೆ. ಸದ್ಯ ಮಚ್ಚಿನೇಟು ತಿಂದು ಆಸ್ಪತ್ರೆಯಲ್ಲಿ ನರಳುತ್ತಿರುವ ಮುನ್ನಾಖಾನ್ ಬನಶಂಕರಿಯ ಹಳೇ ರೌಡಿ. ಆತನ ಜೊತೆಗೇ ಮಚ್ಚಿನೇಟು ತಿಂದೂ ಬಚಾವಾದವನು ಆತನ ಅಣ್ಣ ದೌಲತ್‌ಖಾನ್. ಹೆಚ್ಚೂಕಮ್ಮಿ ಇಲ್ಲಿಗೆ ಎರಡು ವರ್ಷದ ಹಿಂದೆ ಅಂದರೆ 2004 ಸೆಪ್ಟೆಂಬರ್ ಹದಿನೇಳರಂದು ಇದೇ ದೌಲತ್-ಮುನ್ನಾರ ಅಣ್ಣ ಆದಿಲ್ ಖಾನ್ ಯಾರಬ್‌ನಗರದ ನಡುರಸ್ತೆಯಲ್ಲಿ ಕೊಲೆಯಾದ. ಇದಕ್ಕೂ ಏಳು ವರ್ಷದ ಮುನ್ನ ಇವರೆಲ್ಲರ ತಂದೆ ಚೊಂಚಾ ಇಸ್ಮಾಯಿಲ್ ಕೂಡ ಹತನಾಗಿದ್ದ. ಮೊದಲು ತಂದೆಯ ಕೊಲೆ, ಆನಂತರ ಮಗನ ಕೊಲೆ, ಈಗ ಉಳಿದಿಬ್ಬರು ಮಕ್ಕಳ ಹತ್ಯಾ ಯತ್ನ!

ಎರಡು ಕುಟುಂಬಗಳ ರಕ್ತಗಾಥೆ

ಅದನ್ನು ಯಾರಬ್‌ನಗರದ ದುರಂತವೆನ್ನಿ. ಇಸ್ಮಾಯಿಲ್ ಕುಟುಂಬದ ದೌರ್ಭಾಗ್ಯವೆನ್ನಿ ಅಥವಾ ದಿವಾನಾ ಆಲಿ ಎಂಬ ಅರೆ ರೌಡಿ ಕಂ ಅರೆ ರಾಜಕಾರಣಿಯ ಕರ್ಮವೆನ್ನಿ. ಅದು ಎರಡು ಮುಸ್ಲಿಂ ಕುಟುಂಬಗಳ ರಕ್ಕಸ ರಕ್ತಗಾಥೆಯ ಕತೆಯಾಗುತ್ತದೆ.

Of course 27 ರ ನಡುರಸ್ತೆ ಮಾರಾಮಾರಿಗೂ ಮುಸ್ಲಿಂ ಭೂಗತದ ವಿಲಕ್ಷಣ ಪಾತಕಿ ದಿವಾನಾ ಆಲಿಗೂ ಡೈರೆಕ್ಟ್ ಸಂಬಂಧವಿರಲಿಲ್ಲ, ಹಾಗೇ ಹಡ್ಸನ್ ಸರ್ಕಲ್ಲಿನ ನಟ್ಟನಡುವೆ ಕೆಡವಲಾಗುತ್ತಿದ್ದ ಟಾಟಾ ಸುಮೋ ಅನ್ನು ಅಡ್ಡಗಟ್ಟಿ ದಾಳಿ ನಡೆಸಿದ್ದು ಯಾರಬ್‌ನಗರದ ಮತ್ತೊಬ್ಬ ಪುಡಿ ರೌಡಿ ಇಲಿಯಾಸ್ ಎಂಬಾತನ ಕೃತ್ಯವಾಗಿತ್ತು. ತನ್ನ ತಂಗಿಯ ಮನೆಗೆ ನುಗ್ಗಿ ಆಕೆಯ ಮೇಲೆ ಹೀನಾಮಾನ ಕೈ ಮಾಡಿದ ದೌಲತ್-ಮುನ್ನಾರನ್ನು ಮುಗಿಸುವುದು ಆತನ ಉದ್ದೇಶವಾಗಿತ್ತು. ಬಹುಶಃ ಪೆಟ್ಟು ತಿಂದವರಿಗೂ ಅದು ಗೊತ್ತಿತ್ತು?

ಹಾಗಿದ್ದೂ ದಿವಾನಾ ಆಲಿಯನ್ನೂ ಆತನ ತಮ್ಮಂದಿರನ್ನೂ ಕೇಸಿಗೆ ಸಿಕ್ಕಿಸಲು ಅಚ್ಚುಕಟ್ಟಾದ ಸುಳ್ಳೊಂದನ್ನು ಹೇಳಿಬಿಟ್ಟರು. ಅದನ್ನೇ ನಂಬಿದ ಅಲಸೂರು ಗೇಟ್ ಪೊಲೀಸರು ದಿವಾನಾ ಆಲಿಯ ತಮ್ಮಂದಿರನ್ನೂ ಅವರ ಸಹಚರರನ್ನೂ ಕೇಸಿಗೆ ಸಿಲುಕಿಸಿದ ತಪ್ಪಿಗೆ ಈಗ ತಲೆತಲೆ ಚಚ್ಚಿಕೊಳ್ಳುತ್ತಿದ್ದಾರೆ. ಯಾರೆಲ್ಲ ತಮ್ಮನ್ನು ಅಡ್ಡಗಟ್ಟಿ ಕತ್ತರಿಸಿದರೆಂದು ಮುನ್ನಾ-ದೌಲತ್ ಪೊಲೀಸರಿಗೆ ದೂರು ಕೊಟ್ಟಿದ್ದರೋ ಅದೇ ಹೊತ್ತಿಗೆ ಅವರೆಲ್ಲರೂ ಜೈಲಲ್ಲಿದ್ದರು!



ಇನ್ಯಾವುದೋ ಕಾರಣಕ್ಕೆ ಇನ್ಯಾರೋ ಅಟ್ಯಾಕ್ ಮಾಡಿದರೂ ಅದನ್ನು ತಮ್ಮ ಹಳೇ ದುಷ್ಮನ್ನೇ ಮಾಡಿಸಿದ್ದಾನೆಂದು ಪೊಲೀಸರನ್ನು ದಿಕ್ಕುತಪ್ಪಿಸುವುದು ಬೆಂಗಳೂರಿನ ರೌಡಿಗಳ ಹಳೇ ಚಾಳಿ. ಮಂಡ್ಯ ಕೃಷ್ಣನ ಕೊಲೆಗೆ ಸಂಬಂಧವೇ ಇಲ್ಲದ ಕೊರಂಗು ತಲೆಗೆ ಕೇಸು ಬತ್ತು. ಮುಚ್ಚನ ಕೊಲೆಯಲ್ಲಿ ಜೇಡರಹಳ್ಳಿ ಕೃಷ್ಣಪ್ಪನನ್ನು ಸಿಲುಕಿಸಲಾಯ್ತು. ಅದೀಗ ದಿವಾನಾ ಆಲಿಯ ತಮ್ಮಂದಿರ ಹೆಗಲೇರಿದೆ.

ಚೊಂಚಾ ಇಸ್ಮಾಯಿಲ್ ಎಂಬ ರಕ್ಕಸ

ಅಷ್ಟಕ್ಕೂ ದಿವಾನಾ ಆಲಿಯನ್ನು ಪಾತಕಕ್ಕೆಳೆದು ತಂದಿದ್ದೇ ಯಾರಬ್‌ನಗರದ ರೌಡಿ ಚೊಂಚಾ ಇಸ್ಮಾಯಿಲ್. ಆತ ಕಣ್ಣುಬಿಡುವ ಹೊತ್ತಿಗೆ ಯಾರಬ್ ನಗರದಲ್ಲಿ ಇಸ್ಮಾಯಿಲ್ ಮತ್ತು ಆತನ ಮಕ್ಕಳ ಅಟ್ಟಹಾಸ ಮುಗಿಲು ಮುಟ್ಟಿತ್ತು. ಮೂಲತಃ ಚನ್ನಪಟ್ಟಣದ ಹೊಂಗನೂರಿನ ಇಸ್ಮಾಯಿಲ್ ಅಲ್ಲಿನ ಕೋಮು ಗಲಭೆಯಲ್ಲಿ ರೈತರ ಮೇಲೆ ಬಾಂಬ್ ಹಾಕಲು ಹೋಗಿ ತನ್ನ ಕೈ ಕಳಕೊಂಡ. ಬಾಂಬ್ ಕೈಯಲ್ಲೇ ಸಿಡಿದಿತ್ತು. ಕೈ ಶಾಶ್ವತವಾಗಿ ಐಬಾಯಿತು. ಬೆಂಗಳೂರಿಗೆ ಬಂದು ಯಾರಬ್ ನಗರದಲ್ಲಿ ತನ್ನ ದರ್ಬಾರ್ ಶುರು ಹಚ್ಚಿಕೊಂಡ ಇಸ್ಮಾಯಿಲ್ ಪ್ರಾರಂಭದಲ್ಲಿ ತಂದೆಯೊಬ್ಬನ ಎದುರಲ್ಲೇ ಆತನ ಮಗನನ್ನು ಕತ್ತರಿಸಿ ಕೊಂದ. ಈ ಕೇಸಲ್ಲಿ ಇಸ್ಮಾಯಿಲ್, ಆತನ ತಮ್ಮ ಅನ್ವರ್, ಅಕ್ಕನ ಮಗ ಜಾಸ್ಮಿನ್ ಮುಂತಾದವರಿಗೆ ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿತಾದರೂ ಹೈಕೋರ್ಟಿನಲ್ಲಿ ಕೇಸು ಬಿದ್ದು ಹೋಯಿತು.


ಹಾಗೆಂದು ಇಸ್ಮಾಯಿಲ್ ತನ್ನ ರಕ್ಕಸತನ ಬಿಡಲಿಲ್ಲ. ಬಾಬ್ರಿ ಮಸೀದಿ ಗಲಾಟೆಯಲ್ಲಿ ಅದೇ ಯಾರಬ್‌ನಗರದ ಕಾಂಗ್ರೆಸ್ ಮುಖಂಡ ಕೆಂಪೇಗೌಡನ ಮನೆಗೆ ನುಗ್ಗಿ ಆತನ ಮಗನನ್ನೂ ಸೇರಿಸಿ ಕತ್ತರಿಸಿದ. ಬನಶಂಕರಿ ಪೊಲೀಸ್ ಠಾಣೆಗೇ ನುಗ್ಗಿ ದಾಳಿ ನಡೆಸಿದ. ಅದೇ ಹೊತ್ತಿಗೆ ದಿವಾನಾ ಆಲಿಯನ್ನೂ ನಡುರಸ್ತೆಯಲ್ಲಿ ಹಿಡಿದು ಬಡಿದ. ಪಾಪದ ಕೊಡ ತುಂಬಿತ್ತೇನೋ! ಆಲಿಯ ತಮ್ಮ ಅಸ್ಗರ್, ಮತ್ತೊಬ್ಬ ರೌಡಿ ಅತ್ತೂಫ್, ಕಾಲು ಜಹೀರ್, ಜಬಿ, ಸಲೀಂ ಮುಂತಾದವರೆಲ್ಲ ಸೇರಿ ಇಸ್ಮಾಯಿಲ್‌ನನ್ನು ಕತ್ತರಿಸಿ ಕೊಂದರು. ಕ್ರಮೇಣ ಕೊಲೆ ಕೇಸು ಬಿದ್ದು ಹೋಗಿ ಆಲಿ ಕಾರ್ಪೊರೇಷನ್ ಚುನಾವಣೆಗೆ ನಿಂತ. ಬಿಜೆಪಿಯ ಕೌನ್ಸಿಲರ್ ಬಸವರಾಜು ವಿರುದ್ಧ ನಾಲ್ಕೂವರೆ ಸಾವಿರದಷ್ಟು ಓಟು ಗಿಟ್ಟಿಸಿದ. ಆನಂತರ ಜೆಡಿ(ಎಸ್) ಸೇರಿಕೊಂಡ. ಚಾಮರಾಜಪೇಟೆ ಶಾಸಕ ಜಮೀರ್ ಜೊತೆ ಸೇರಿ ಕುಮಾರಸ್ವಾಮಿಗೂ ಆತ್ಮೀಯನಾದ.

ಈ ಮಧ್ಯೆಯೇ ಹತ ಇಸ್ಮಾಯಿಲ್‌ನ ಮಗ
ಆದಿಲ್‌ಖಾನ್ ಕೊಲೆಯಾಗಿ ಹೋದ.
ಕೊಂದಿದ್ದು ಕನಕನಗರದ ಬಿಜೆಪಿ ಕಾರ್ಯ
ಮಧು, ಕೃಷ್ಣ ದಾಸ ಮತ್ತು ರಮೇಶ್.
ಬಿಜೆಪಿ ಶಾಸಕ ಆರ್. ಅಶೋಕ್ ಶಿಷ್ಯರು
ಅಣ್ಣಮ್ಮ-ಗಣೇಶ ಕೂಡ್ರಿಸಿದಾಗೆಲ್ಲ ಆದಿಲ್ ನು
ಮಾಡುತ್ತಿದ್ದ. ಕನಕನಗರಕ್ಕೆ ಹೊಂದಿಕೆ
ಇಲಿಯಾಸ್ ನಗರದ ಜಾಮಿಯಾ ಮಸೀದಿ
ಆದಿಲ್ ಅಡ್ಡೆ ಹಾಕುತ್ತಿದ್ದ. ಹೇಗೂ ಹಳೇ
ಆದಿಲ್‌ನನ್ನು ದಿವಾನಾ ಆಲಿಯೇ ಕೊಲ್ಲಿಸಿ
ಆತನ ತಮ್ಮಂದಿರಾದ ದೌಲತ್ ಮತ್ತು
ಬನಶಂಕರಿ ಪೊಲೀಸ್ ಠಾಣೆಗೆ ದೂರು ಕೆ

ಅನ್ಯಾಯವಾಗಿ ತನ್ನ ಮೇಲೆ ಕೊಲೆ ಕೇಸು
ವಿರುದ್ಧ ಆಲಿ ಕಂಡಕಂಡವರಿಗೆ ದೂರು
ಪ್ರಯೋಜನವಾಗಲಿಲ್ಲ. ಹಾಗೇ ಒಂದೂವ
ತಲೆ ಮರೆಸಿಕೊಂಡಿದ್ದ ಆಲಿಯನ್ನು ಅಂತಿಮ
ಪೊಲೀಸರು ತಮಿಳುನಾಡಿನಲ್ಲಿ ಬಂಧಿಸಿ
ದಬ್ಬಿದ್ದರು. ಇಷ್ಟೆಲ್ಲ ನಡೆದ ಮೇಲಾದರೂ
ಇಸ್ಮಾಯಿಲ್ ಮಕ್ಕಳಿಗೆ ಬುದ್ಧಿ ಬರಬೇಕಿತ್ತು.
ತಂದೆ ಕೊಲೆಯಾದ. ಆನಂತರ ಹಿರಿಮಗ
ಹತ್ಯೆಯಾದ. ಉಳಿದಿಬ್ಬರೆಂದರೆ ಅದು ಅಣ್ಣ
ಮತ್ತು ಮುನ್ನಾ ಖಾನ್ ಮಾತ್ರ.

ತನಗೂ ಆದಿಲ್ ಹತ್ಯೆಗೂ ಸಂಬಂಧ
ಆಲಿ ಕಂಡಕಂಡವರೆದುರು ಆಣೆ ಪ್ರಮಾಣ ಮ
ಇದ್ದ. ಆದಾಗ್ಯೂ ದೌಲತ್ ಮತ್ತು ಮುನ್ನಾ ಸೇ
ಆಲಿಯ ತಮ್ಮ ಅಕಬರ್‌ನನ್ನು ಹಿಡಿದು ಕ
ಆಲಿಯ ಅಕ್ಕನ ಮಗನ ಗ್ಯಾರೇಜ್ ಮೇ
ಮಾಡಿ ಆತನ ತಲೆ ಒಡೆದಿದ್ದಾರೆ. ಇದೆಲ್ಲ ಆ
ಹೋದ ನಂತರದ ಘಟನೆಗಳು. ಇದೇ
ದೌಲತ್-ಮುನ್ನಾರ ತಂಗಿಯ ಗಂಡ
ಎಂಬಾತನಿಗೆ ಕಿದ್ವಾಯಿ ಆಸ್ಪತ್ರೆಯಲ್ಲಿ ನರ್ಸ್
ಜಬೀನ್ ಎಂಬಾಕೆಯ ಜೊತೆ ಸಲುಗೆ ಬೆಳೆದಿ
ಗೊತ್ತಾಗಿದ್ದೇ ದೌಲತ್-ಮುನ್ನ ಗ್ಯಾಂಗ್

ಜಗತ್ತಿನ ಇತಿಹಾಸವು ಆತ್ಮ ಶ್ರದ್ಧೆಯುಳ್ಳ ವ್ಯಕ್ತಿಗಳ ಚರಿತ್ರೆ -ಸ್ವಾಮಿ ವಿವೇಕಾನಂದ



ನೀವು ಕೆಎಎಸ್ ಅಭ್ಯರ್ಥಿಯೇ?

2006 ರ ಕೆಎಎಸ್ ನೇಮಕಾತಿಗೆ ನಡೆಯಲಿರುವ ೀಕ್ಷೆಗೆ ನೀವು ಕೂರುತ್ತಿದ್ದರೆ ಈ ಕೆಳಕಂಡ ಬಹು ಮ್ಮ ಮಾದರಿ ಪ್ರಶ್ನೆಗಳಿಗೆ ಉತ್ತರ ತಿಳಿದುಕೊಂಡಿದ್ದರೆ ಮ್ಮ ಸುಲಭ.

ಅವಧಿ: ಆದಷ್ಟು ಬೇಗ

ಅಂಕಗಳು: ನಿಮ್ಮ ಹಣಬರಹ ಅಷ್ಟೆ.

ಕೆಪಿಎಸ್‌ಸಿ ಅಂದರೇನು?
a) ಕಿತಾಪತಿ ಪಬ್ಲಿಕ್ ಸರ್ವಿಸ್ ಕಮಿಷನ್
b) ಕಚಡಾ ಪಬ್ಲಿಕ್ ಸರ್ವಿಸ್ ಕಮಿಷನ್
c) ಕಾಸು, ಪಾಲಿಟಿಕ್ಸು, ಸುಳ್ಳು ಕ್ಯಾಸ್ಟು
d) ಎಲ್ಲವೂ ಸರಿ

ಕೆಪಿಎಸ್‌ಸಿಯಲ್ಲಿ ತಾಳಿಭಾಗ್ಯ ಯೋಜನೆ ಆರಂಭಿಸಿದವರು
a) ಡಾ. ಎಚ್.ಸಿ. ಕೃಷ್ಣ
b) ಪಂಚಗಟ್ಟಿ
c) ವೈ.ಕೆ. ಪುಟ್ಟಸ್ವಾಮಿಗೌಡ
d) ಎಲ್ಲರೂ

3. ಈ ಕೆಳಗಿನ ಯಾವ ಗಾದೆ ಮಾತು ಕೆಪಿಎಸ್‌ಸಿಗೆ ಚೆನ್ನಾಗಿ ಅನ್ವಯವಾಗುತ್ತದೆ?
a) ಕಾಸಿದ್ರೆ ಕೈಲಾಸ
b) ಕಾಸಿಗೆ ತಕ್ಕ ಕಜ್ಜಾಯ
c) ಪ್ರತಿಭೆಗಿಂತಾ ಜಾತಿ ಮೇಲು, ಜಾತಿಗಿಂತಾ ಕಾಸು ಮಿಗಿಲು
d) ಎಲ್ಲವೂ ಸರಿ

4. ಇಂದಿರಾ ನಗರದಲ್ಲಿ 6 ಕೋಟಿ ಖರ್ಚಿನಲ್ಲಿ ಕಾಂಪ್ಲೆಕ್ಸ್ ಕಟ್ಟಿಸಿ ಲೋಕಸೇವೆ ಮಾಡಲು ಹೊರಟಿರುವವರ್ಯಾರು?
a) ದಾಸಯ್ಯ
b) ಡಾ. ಎಚ್.ಸಿ. ಕೃಷ್ಣ
c) ವೆಂಕಟಸ್ವಾಮಿ
d) ಕಟ್ಟಡ ಅಪೂರ್ಣವಾಗಿದ್ದು ಅರ್ಜೆಂಟಾಗಿ 2 ಕೋಟಿ ಬೇಕಿರುವುದರಿಂದ ಈಗಿನ ಪರೀಕ್ಷೆ ನಡೆಸಲಾಗುತ್ತಿದೆ

5. ಕೆಎಎಸ್ ಪಾಸು ಮಾಡಲು ಇರಬೇಕಾದ ಪ್ರಧಾನ ಅರ್ಹತೆ ಯಾವುದು?
a) ಮೆಂಬರ್ ಜಾತಿಗೇ ಸೇರಿರಬೇಕು
b) ಲಂಚ ಕೊಡುವ ತಾಕತ್ತಿರಬೇಕು
c) ಅವಿವಾಹಿತರಾಗಿದ್ದು ತಾಳಿ ಭಾಗ್ಯ ಸ್ಕೀಮಿನಡಿ ಮೆಂಬರ್‌ಗಳು ಸೂಚಿಸುವ ಹುಡುಗಿಯನ್ನೇ ಮದುವೆಯಾಗಲು ಒಪ್ಪಬೇಕು
d) ಎಲ್ಲವೂ ಸರಿ

6. 2005 ರಲ್ಲಿ ಕೆಎಎಸ್‌ಗೆ ಆಯ್ಕೆಯಾದವರಲ್ಲಿ ತಾಳಿಭಾಗ್ಯ ಯೋಜನೆಗೆ ಒಪ್ಪಿಕೊಂಡವರ ಸಂಖ್ಯೆ
a) 15 ಲಿಂಗಾಯತರು
b) 20 ಒಕ್ಕಲಿಗರು
c) 25 ಕಲಬೆರಕೆಯವರು
d) 'ಕೃಷ್ಣ' ಪರಮಾತ್ಮನಿಗೇ ಗೊತ್ತು

ನೆಗೆ ನುಗ್ಗಿದ್ದೇ ಆಕೆಯನ್ನು ತಾರಾಮಾರಾ ಬಡಿದಿದೆ. ಹಾಗೇ ಅವಮಾನಕ್ಕೀಡಾದ ಜಬೀನ್ ಅದೇ ಾರಬ್‌ನಗರದ ಇಲಿಯಾಸ್ ಎಂಬಾತನ ತಂಗಿ. ಆತ ಡಾ ಛೋಟಾ ರೌಡಿಯೆ. ಹಾಗೊಮ್ಮೆ ತನ್ನ ಗಿಯದೇ ತಪ್ಪಾಗಿದ್ದರೂ ಅದನ್ನು ತನಗೆ ತಿಳಿಸಬೇಕಿತ್ತು, ನೇ ಸರಿಪಡಿಸುತ್ತಿದ್ದೆ, ಅದನ್ನು ಬಿಟ್ಟು ಯಾರೋ ಡಸರು ಮನೆಗೆ ನುಗ್ಗಿ ಆಕೆಯನ್ನು ಅವಮಾನಿಸಿದ್ದು ್ಣ ಅಂತ ನಾನಿದ್ದು ಏನು ಪ್ರಯೋಜನ? ಎಂದೇ ಿಯಾಸ್ ಜಿದ್ದಿಗೆ ಬಿದ್ದ. ಅಣ್ಣ ತಮ್ಮಂದಿರಿಬ್ಬರನ್ನು ್ಟಿಗೇ ಮುಗಿಸಲು ಪಕ್ಕಾ ಸ್ಕೆಚ್ ಒಂದನ್ನು ಹಾಕಿದ.



ದಕ್ಕೆ ಆತ ಆಯ್ದುಕೊಂಡದ್ದು ಸಿಟಿ ೋರ್ಟು. ಹೇಗೂ ಜೂನ್ ಇಪ್ಪತ್ತೇ ೬ ಆಲಿಯ ತಮ್ಮ ಅಕಬರ್‌ನನ್ನು ್ತರಿಸಿದ ಕೇಸಿದೆ. ದೌಲತ್-ಮುನ್ನಾ ್ಟಿಗೆ ಬಂದೇ ಬರುತ್ತಾರೆ. ಕೋರ್ಟ್ ವರಣದಲ್ಲೇ ಅಟ್ಯಾಕ್ ಮಾಡಿದ ಯ್ತು, ಕೇಸೇನಿದ್ದರೂ ಅವರ ಹಳೇ ಷ್ಮನ್ ಆಲಿಯ ಮೇಲೆ ಬೀಳುತ್ತದೆ. ್ಲಿಗೆ ತಾನು ಸೇಫು ಎಂದೇ ಿಯಾಸ್ ಲೆಕ್ಕ ಹಾಕಿದ್ದಾನೆ.

ಆದರೆ ಜೂನ್ 27 ಕ್ಕೆ ಿಸ್ಥಿತಿಯೇ ಬೇರೆಯಾಗಿತ್ತು, ದೌಲತ್ ಮುನ್ನಾ ಮಾತ್ರವಲ್ಲದೇ ಮುನ್ನಾನ ್ನಿ ರುಬೈಯಾ ಭಾನು ಕೋರ್ಟಿಗೆ ಬಂದಿದ್ದಳು. ೊತೆಗೆ ದೌಲತ್‌ನ ಸಂಬಂಧಿ ಅಲೀಮ್ ಕೂಡ ್ದ. ಕೋರ್ಟ್ ಆವರಣದಲ್ಲಿ ಸಾಕಷ್ಟು ಪೊಲೀಸರಿದ್ದರು. ಕಬರ್‌ನನ್ನು ಕತ್ತರಿಸಿದ ಕೇಸು ಬೇರೆ ಖುಲಾಸೆಯಾಗಿತ್ತು, ಟಾ ಸುಮೋದಲ್ಲಿ ಕೂತು ಮುನ್ನಾ-ದೌಲತ್, ಬೈಯಾಭಾನು, ಅಲೀಮ್ ಇನ್ನೇನು ರಬೀಳಬೇಕೆನ್ನುವಷ್ಟರಲ್ಲಿ ಇಲಿಯಾಸ್ ಗ್ಯಾಂಗ್ ಂಬಾಲಿಸಿದೆ. ಮುಂದೊಂದು ಮಾರುತಿ ವ್ಯಾನ್ ಂದೊಂದು ಟಾಟಾ ಸುಮೋ ಮಧ್ಯೆ ದೌಲತ್-ಮುನ್ನಾ ಕಿದ್ದ ಗಾಡಿ ಸಿಕ್ಕಿಬಿದ್ದಿದೆ. ಹಡ್ಸನ್ ಸರ್ಕಲ್ ಮಧ್ಯೆಯೇ ್ಳಿಗೆ ಖಾರದ ಪುಡಿ ಎರಚಿ ಕತ್ತರಿಸಿದ್ದಾರೆ. ಪಕ್ಕದಲ್ಲೇ ್ದ ಪೊಲೀಸರು ಧಾವಿಸಿ ಬರದೇ ಹೋಗಿದ್ದರೆ ಅಣ್ಣ ್ಮಂದಿರಿಬ್ಬರೂ ಹೆಣವಾಗಬೇಕಿತ್ತು.

ಆದರೆ ಹಾಗಾಗಲಿಲ್ಲ, ಎಸಿಪಿ ಅಶೋಕ್‌ಕುಮಾರ್ ದ ಬಂದೋಬಸ್ತಿನಲ್ಲಿದ್ದವರು ಓಡಿ ಬಂದಿದ್ದಾರೆ. ೊಲೀಸರನ್ನು ಕಂಡಿದ್ದೇ ಇಲಿಯಾಸ್ ಗ್ಯಾಂಗ್ ್ಲಾಪಿಲ್ಲಿಯಾಗಿ ಓಡಿದೆ. ಬಹುಶಃ ಇಲಿಯಾಸ್ ಬಗ್ಗೆ ಲತ್-ಮುನ್ನಾನಿಗೆ ಅನುಮಾನವೊಂದು ನಿರೀಕ್ಷೆಯಿರಲಿಲ್ಲ ವೇನೋ. ಅದನ್ನು ದಿವಾನಾ ಆಲಿಯೇ ಮಾಡಿಸಿರಬೇಕೆಂದು ಆಲಿಯ ತಮ್ಮ ಅಕಬರ್, ಸೈತಾನ್ ಆಸಿಫ್, ಸುಬಾನ್, ರಫಿ, ಜಬಿ ಮುಂತಾದವರೇ ಬಂದು ಕತ್ತರಿಸಿದರು ಎಂದು ಪೊಲೀಸರಿಗೆ ದೂರು ಕೊಟ್ಟರು. ಸ್ವತಃ ಎಸಿಪಿ ಅಶೋಕ್‌ಕುಮಾರ್ ನಿಂತು ಎಫ್‌ಐಆರ್ ಹಾಕಿಸಿದ್ದಾರೆ.

ಯಾವತ್ತು ಆರೋಪಿಗಳ ಪತ್ತೆಗೆ ಪೊಲೀಸರು ರೌಂಡ್ಸ್ ಆರಂಭಿಸಿದರೋ ಆಗಷ್ಟೇ ಪೊಲೀಸರಿಗೆ ಜ್ಞಾನೋದಯವಾಗಿತ್ತು. ದಿವಾನಾ ಆಲಿ ಆದಿಲ್ ಕೊಲೆ ಕೇಸಿನಲ್ಲಿ ಕೋಲಾರ ಜೈಲಲ್ಲಿದ್ದ. ಆತನ ತಮ್ಮಂದಿರಾದ ಖದೀರ್ ಮತ್ತು ನಯಾಜ್ ಕೂಡ ಅದೇ ಕೋಲಾರ ಜೈಲಲ್ಲಿದ್ದರು. ಮತ್ತೊಬ್ಬ ತಮ್ಮ ಅಸಗರ್ ಸದ್ಯ ಬೆಂಗಳೂರು ಜೈಲಲ್ಲಿದ್ದಾನೆ. ಇನ್ನು ಯಾವ ಆಲಿಯ ತಮ್ಮ ಅಕಬರ್ ತಮ್ಮನ್ನು ಕತ್ತರಿಸಿದನೆಂದು ದೌಲತ್ ದೂರು ಕೊಟ್ಟಿದ್ದನೋ ಅದೇ ಅಕಬರ್ ಮತ್ತು ಆತನ ಸಹಚರರಾದ ಸೈತಾನ್ ಆಸಿಫ್, ಸುಬಾನ್, ರಫಿ ಮತ್ತು ಜಬಿ ಎಲ್ಲರನ್ನೂ ಅಲ್ಲಿಗೆ ವಾರದ ಹಿಂದಷ್ಟೇ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಹಾಕಿದ್ದರು!

ಜೈಲೊಳಗಿದ್ದುಕೊಂಡೇ ಹಡ್ಸನ್ ಸರ್ಕಲ್ಲಿಗೆ ಬಂದು ದಾಳಿ ಮಾಡಲು ಹೇಗೆ ಸಾಧ್ಯ?

ಪೊಲೀಸರಿಗೆ ಗೊತ್ತಾಗಿದ್ದೇ ಆವಾಗ. ಮುನ್ನಾ ಖಾನ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದರೆ ದೌಲತ್ ಸಣ್ಣಪುಟ್ಟ ಏಟಿಗೆ ಚಿಕಿತ್ಸೆ ಪಡೆದು ಹೊರಬಿದ್ದಿದ್ದ. ಅಶೋಕ್‌ಕುಮಾರ್ ತಮ್ಮೆಲ್ಲಾ ವಿದ್ಯೆ ಬಳಸಿ ಆತನ ಬಾಯಿ ಬಿಡಿಸಿದ್ದಾರೆ. ಆಗ ಇಲಿಯಾಸ್ ಹೆಸರನ್ನು ಹೊರಗೆಡುಹಿದ್ದಾನೆ. ಸದ್ಯ ಇಡೀ ಇಲಿಯಾಸ್ ಗ್ಯಾಂಗ್ ಅಲಸೂರು ಗೇಟ್ ಠಾಣೆಯ ಲಾಕಪ್ಪಿನಲ್ಲಿದೆ.

ಅತ್ತ ಕೋಲಾರ ಜೈಲಿನಲ್ಲಿ ಕೂತು ದಿವಾನಾ ಆಲಿ ನಿಟ್ಟುಸಿರಿಟ್ಟಿರಬೇಕು. ಹಾಗಂಥ ಯಾರಬ್ ನಗರದ ಗ್ಯಾಂಗ್ ವಾರ್ ಇಷ್ಟಕ್ಕೇ ನಿಲ್ಲುವಂಥದ್ದಲ್ಲ, ಆಸ್ಪತ್ರೆಯಿಂದ ಹೊರಬಿದ್ದಿದ್ದೇ ಮುನ್ನಾ ಖಾನ್ ಸುಮ್ಮನಿರುತ್ತಾನಾ? ದೌಲತ್ ಕೈ ಕಟ್ಟಿ ಕೂರುತ್ತಾನಾ? ತನ್ನ ತಮ್ಮಂದಿರ ವಿರುದ್ಧ ಸುಳ್ಳು ಸುಳ್ಳೇ ದೂರು ಕೊಟ್ಟವರನ್ನು ಇನ್ನು ಆಲಿ ಗ್ಯಾಂಗ್ ಬಿಡುತ್ತಾ?

ಅದು ಯಾವತ್ತಿಗೆ ಮುಗಿಯುತ್ತೊ?

–ರಾ. ಸೋಮನಾಥ್

ಸೋನಿಯಾಗಾಂಧಿ ನೋಡಕ್ಕೆ ನೀವೊಬ್ಬರೆ ಹೋಗಿದ್ರ...

ಈ ಭಜರಂಗಿಗಳ ತಲೆಕೆಟ್ಟು ಹನ್ನೆರಡಾಣೆಯಾಗುವ ಸೂಚನೆಗಳು ಪ್ರಖರವಾಗಿ ಕಂಡುಬರುತ್ತಿವೆಯಂತಲ್ಲಾ, "ತಿರುಪತಿ ತಿಮ್ಮಪ್ಪನ ದೇವಸ್ಥಾನದ ಲಾಡುಗಳನ್ನು ಕ್ರಿಶ್ಚಿಯನ್ನರು ತಯಾರಿಸುತ್ತಿದ್ದಾರೆ. ಇದರಿಂದ ಬ್ರಾಹ್ಮಣರ ಬಾಯಿಗೆ ಮಣ್ಣು ಬಿದ್ದಂತಾಗಿದೆ. ಆದ್ದರಿಂದ ಈ ಕೂಡಲೇ ಬ್ರಾಹ್ಮಣರಿಗೆ ಉದ್ಯೋಗ ಕೊಡಬೇಕು" ಎಂದು ರಚ್ಚೆ ಹಿಡಿದಿವೆಯಂತಲ್ಲಾ, ಈ ಭಜರಂಗಿಗಳು ಲಾಡು ತಯಾರಿಕೆಯಲ್ಲಿ ಮಾತ್ರ ತಮ್ಮ ಮೀಸಲಾತಿ ಹಕ್ಕನ್ನು ಚಲಾಯಿಸುತ್ತಿರುವುದನ್ನು ನೋಡಿದ ಮೀಸಲಾತಿ ಜನ "ಹೋರಾಟ ಅಂದರೆ ಇದಪ್ಪ, ಹಿಂದುಳಿದ ಜನ ಯಾವು ಯಾವುದೋ ಸವಲತ್ತಿಗಾಗಿ ಹೋರಾಡುವುದನ್ನು ನೋಡಿದ್ದೇವೆ. ಲಾಡುಗಾಗಿ ಹೋರಾಡುವ ಇಂತಹ ಲಾಟಗಳನ್ನು ನಾವೆಲ್ಲೂ ನೋಡಿಲ್ಲ" ಎಂದು ನಗಾಡುತ್ತಿರುವಾಗಲೇ, ರೈತ ಸಂಘದ ಪುಟ್ಟಣ್ಣಯ್ಯ ಈ ಚಿಡ್ಡಿ ಮನಸ್ಸುಗಳನ್ನು ವಿವರಿಸುತ್ತ "ಯಾವ ಹೋರಾಟವೂ ಇಲ್ಲದ ಕಾಲದಲ್ಲಿ ಈ ಭಜರಂಗಿಗಳು 'ಕ್ರಿಶ್ಚಿಯನ್ ಮತ್ತು ಹಿಂದೂವೊಬ್ಬ ಜೊತೆಯಲ್ಲೇ ಮಲಮೂತ್ರ ವಿಸರ್ಜಿಸಿರುವುದರಿಂದ ಹಿಂದೂ ಮಲ, ಮೈಲಿಗೆಯಾಗಿದೆ. ಆದ್ದರಿಂದ ಹಿಂದೂ ಮಲದಿಂದ ಕ್ರಿಶ್ಚಿಯನ್ ಪಾಯಿಖಾನೆಯನ್ನು ಬೇರೆ ಬೇರೆ ಮಾಡಿಕೊಡಿ' ಎಂದು ಹಟ ಹಿಡಿಯಲೂ ಹೇಸುವುದಿಲ್ಲ" ಎಂದು ತೂಕವಾಗಿ ಹೇಳಿ ಗಂಭೀರವಾದರಂತಲ್ಲಾ, ಥೂತ್ತೇರಿ!



****

ನೈಸ್ ಗದ್ದಲ ತುಂಬ ನೈಸಾಗಿ ಮುಗಿಯಿತು, ಇನ್ನು ರಸ್ತೆ ಮಾಡಲು ಯಾವ ತಕರಾರೂ ಇಲ್ಲವೆಂದು ರಸ್ತೆಗೆ ಸಂಬಂಧಿಸಿದವರು ನಿಟ್ಟುಸಿರು ಬಿಡುತ್ತಿರಬೇಕಾದರೆ, ಇದ್ದಕ್ಕಿದ್ದಂತೆ ದಲಿತ ಸಂಘದವರು ಮತ್ತು ಮಹಿಳೆಯರು ನೈಸ್ ರಸ್ತೆ ವಿರುದ್ಧ ಬ್ಯಾನರ್ ಹಿಡಿದು ಬಾಯಿ ಬಡಿದುಕೊಂಡರಂತಲ್ಲಾ, ಇದನ್ನು ನೋಡಿದ ಖೇಣಿ ಮನೆಯಲ್ಲಿ ಫೇಣಿ ಭೋಜನ ಬಾರಿಸಿದ ಶರಣ ಶಾಸಕರು "ನೋಡ್ರಿ, ದೇವೇಗೌಡರ ಬುಟ್ಟಿಲಿ ಇನ್ನು ಏನೇನು ತಂತ್ರಗಳಿವೆಯೋ ಏನೋ? ನೈಸಾದ ರಸ್ತೆಯನ್ನೇ ಅಗೆಸಿದರು, ರೈತರನ್ನು ಎತ್ತಿಕಟ್ಟಿದರು, ರಸ್ತೆಯಲ್ಲೇ ಅಡುಗೆ ಮಾಡಿಸಿದರು, ಉದ್ಘಾಟನೆಗೆ ಯಾರೂ ಬರದಂತೆ ತಡೆದರು. ಈಗ ಅಡ್ಡಬಂದವರ ಮೇಲೆ ಅಟ್ರಾಸಿಟಿ ಕೇಸು ಜಡಿಯಲು ಮತ್ತು ಅತ್ಯಾಚಾರದ ಕೇಸು ಜಡಿಯಲು ದಲಿತರು ಮತ್ತು ಮಹಿಳೆಯರನ್ನು ಬಿಟ್ಟಿದ್ದಾರೆ. ಬಿಡಲಿ ಸಂತೋಷ, ಆದರೆ ಈ ಪ್ರತಿಭಟನೆಕಾರರು ಭೂಮಿ ಕಳೆದುಕೊಳ್ಳುವಾಗ ಎಲ್ಲಿದ್ದರು? ಊರೇ ಖಾಲಿಯಾಗುವಾಗ ಎಲ್ಲಿದ್ದರು? ಇಷ್ಟಕ್ಕೂ ಪ್ರತಿಭಟನೆ ಮಾಡುತ್ತಿರುವ ಜನ ಅರ್ಜಿ ಕೊಡುವುದು ಸರ್ಕಾರಕ್ಕೊ? ದೇವೇಗೌಡರಿಗೊ? ನೀವೇ ನೋಡಿ" ಎಂದು ಕಂಡಕಂಡವರಲ್ಲಿ ಗುಟ್ಟಾಗಿ ಅಂಗಲಾಚುತ್ತಿದ್ದಾರಂತಲ್ಲಾ, ಥೂತ್ತೇರಿ!!



****

ನಮ್ಮ ಜೆ.ಎಚ್. ಪಟೇಲರ ಮಗ ಮಹಿಮಾ ಪಟೇಲ್ ಮಂತ್ರಿಯಾಗಲಿಲ್ಲವೆಂದು ಮುನಿಸಿಕೊಂಡು ಕೂಡಲಸಂಗಮದಲ್ಲಿ ಮೌನವ್ರತ ಆಚರಿಸುತ್ತಿದ್ದಾರಂತಲ್ಲಾ, ಈ ಮೌನವ್ರತದ ಉದ್ದೇಶವೇನು ಎಂದು ಕೇಳಿದರೆ ಗಾಳಿಯಲ್ಲಿ ಅಕ್ಷರ ಬರೆದು ಆಕಾಶದ ಕಡೆ ಕೈ ತೋರಿದರಂತಲ್ಲಾ, ಮಹಿಮಾರ ಅಂಗ ಸನ್ನೆಗಳನ್ನು ಜನ ಅವರವರ ಭಾವಕ್ಕೆ ತಕ್ಕಂತೆ ಅರ್ಥೈಸಿಕೊಂಡು ಕೆಲವರು "ಆ ದೇವೇಗೌಡನ ಮನೆ ಹಾಳಾಗ" ಎಂದರೆಂದೂ, ಮತ್ತೆ ಕೆಲವರು "ದೇವೇಗೌಡ ಕುಮಾರಸ್ವಾಮಿ ಫೋನ್ ಮಾಡಿದರೆ ಉತ್ತರಿಸಬಾರದೆಂದು ಮೌನಿಯಾಗಿದ್ದೇನೆ" ಎಂದರೆಂದೂ ಮತ್ತೆ ಕೆಲವರು "ಇಲ್ಲಿ ಯಾವ ಸುಖವೂ ಸ್ಥಿರವಲ್ಲ, ಎಲ್ಲಾ ನಶ್ವರ. ಮೌನವೊಂದೇ ಮುಕ್ತಿ" ಎಂದರೆಂದೂ, ಮತ್ತೆ ಕೆಲವರು "ಮಂತ್ರಿಯಾದ ಕೂಡಲೇ ಕಂತ್ರಿಯಾಗಿ ಬಾಳುವುದಕ್ಕಿಂತಲೂ ಕೂಡಲ ಸಂಗನ ನೆನೆದರೆ ದೊರಕುವುದಣ್ಣಾ ಮುಕ್ತಿ ಎನ್ನುತ್ತಿದ್ದಾರೆ" ಎಂದು ಭಾವಿಸಿಕೊಂಡು ಚನ್ನಗಿರಿ ಹಾದಿ ಹಿಡಿಯುತ್ತಿದ್ದಾರಂತಲ್ಲಾ, ಥೂತ್ತೇರಿ!!

****

ಮಹಿಮನಂತೆಯೇ ಮಂತ್ರಿಗಿರಿಯಿಂದ ವಂಚಿತನಾದ ಜಿ.ಟಿ. ದೇವೇಗೌಡ "ಮೈಸೂರು ಜಿಲ್ಲೆಯ ಉಳಿವಿಗಾಗಿ ಏನು ಮಾಡಲೂ ಸಿದ್ಧ" ಎಂದು ಘೋಷಣೆ ಹಾಕಿದ್ದಾರಂತಲ್ಲಾ, ಅಷ್ಟಕ್ಕೆ ಸುಮ್ಮನಾಗದ ದೇವೇಗೌಡ, ತನ್ನ ಸಾಮರ್ಥ್ಯವನ್ನು ಅಪ್ಪ ಮಕ್ಕಳಿಗೆ ಅರಿವು ಮಾಡಿಕೊಡಲೋಸ್ಕರ ತಿಂದು ತೇಗುವ ಕಳ್ಳರ ಇಲಾಖೆಯಾದ ಸಹಕಾರ ಇಲಾಖೆಗಾದರೂ ತಗಲಿಕೊಳ್ಳುವ ಉದ್ದೇಶದಿಂದ, ಒಂದಿಷ್ಟು ಪಿಂಜರಾಪೋಲು ಕಾರ್ಯಕರ್ತರನ್ನು ಕರೆದು "ನನ್ನ ಸಹಕಾರ ಚಾತುರ್ಯ ಈ ರಾಜ್ಯಕ್ಕೆ ಬೇಕಿದ್ದರೆ, ಮಂತ್ರಿ ಮಾಡಿರೆಂದು ಮುಖ್ಯಮಂತ್ರಿಯಲ್ಲಿ ಕೇಳಿ" ಎಂದರಂತಲ್ಲಾ, ಇದರಿಂದ ಕಳ್ಳರ ಇಲಾಖೆಯ ಅಭಿಮಾನಿಗಳು "ಪ್ರಗತಿಪರ ರೈತ ಜಿ.ಟಿ.ಡಿ.ಯಿಂದ ಮಾತ್ರ ಸಹಕಾರಿ ಸಂಘಗಳು ಸಂಪೂರ್ಣ ಸುಧಾರಿಸಬಲ್ಲವು" ಎಂದು ದೇವೇಗೌಡರಲ್ಲಿ ಹೇಳುತ್ತಿರಬೇಕಾದರೆ, ತನ್ನ ಹೆಸರಿನವನೊಬ್ಬ ತನ್ನ ಮಗನ ಸಂಪುಟದಲ್ಲಿರುವುದು ದೇವೇಗೌಡರಿಗೆ ಸುತರಾಂ ಇಷ್ಟವಿಲ್ಲವೆಂದು ದತ್ತ ಇನ್ನು ಬಾಯಿಬಿಟ್ಟಿಲ್ಲವಂತಲ್ಲಾ, ಥೂತ್ತೇರಿ!!

****

ಇದ್ದಕ್ಕಿದ್ದಂತೆ ಸಿದ್ಧರಾಮಯ್ಯ ಸೋನಿಯಾ ಸಂಧಿಸಿ ಬೆಂಗಳೂರಿಗೆ ಬಂದರೆಂಬ ಸುದ್ದಿಯಿಂದ ತೀರ ಕುತೂಹಲ ಉಂಟಾಯಿತಲ್ಲಾ, ಈ ಸಮಯದಲ್ಲಿ ಸಿದ್ಧರಾಮಯ್ಯನ ಸಂಗಡ ಮಾತನಾಡಿದರೆ ಹೇಗೆ ಅನ್ನಿಸಿತು. ಕೂಡಲೇ ಫೋನ್ ಮಾಡಿದರೆ ಸುಮಾರು ಹೊತ್ತಿನ ನಂತರ,

"ಹಲೋ, ಯಾರು?"

"ನಾನು ಸಾರ್, ಯಾಹೂ."

"ಏನ್ರಿ ಯಾಹೂ?"

"ಏನಿಲ್ಲ ಸಾರ್, ಒಂದೆರಡು ಪ್ರಶ್ನೆ ಕೇಳಬೇಕಾಗಿತ್ತು."

"ಒಂದು ವಾರ ಬುಟ್ಟು ಫೋನ್ ಮಾಡ್ತಿರಾ?"

"ವಾರದ ಭವಿಷ್ಯ ಏನೋ ಎಂತೊ, ಈಗ್ಲೆ ಹೇಳಿ ಸಾರ್."

"ಏನೇಳದ್ರಿ? ಯಲ್ಲಾ ನಿಮಗೆ ಗೊತ್ತಲ್ಲ?"

"ಸೋನಿಯಾ ಗಾಂಧಿ ಬೇಟಿಯಾಗಿದ್ರಾ ಸಾರ್?"

"ಹೌದು ಬೇಟಿಯಾಗಿದ್ದೆ."

"ಯಂಗೆ ಸಾರ್?"

"ಪರವಾಗಿಲ್ಲ ವಳ್ಳೆ ಇವುಳು. ಯಾರ್ನೆ ಆಗ್ಲಿ ಸಡನ್ನಂತ ಮಾತಾಡಸದಿಲ್ಲ, ಅವ್ರುನೇನು, ಅವ್ರುನ ಕ್ಯಾರಕ್ಟರೇನೂ, ಅಂತ ಯಲ್ಲಾ ಮಾಹಿತಿನೂ ತರಿಸಿಕೊಂಡು ಮಾತಾಡ್ತಾಳೆ."

"ದೇವೇಗೌಡ್ರ ವಿಷಯ ಕೇಳಿದ್ರಾ ಸಾರ್?"

"ನಾನೇನು ಕೇಳ್ಳಿಲ್ಲ, ಅವುರೆ ಹೇಳಿದ್ರು. ಬಿಜೆಪಿ ಜೊತೆ ಮಾತ್ರ ಹೋಗಬ್ಯಾಡಿ, ಬೇಕಿದ್ರೆ ನಿಮ್ಮ ಮಗನ್ನ ಮುಖ್ಯಮಂತ್ರಿ ಮಾಡಿ ಅಂದ್ರಂತೆ. ಆಯ್ತು ಅಂತ ಬಂದ ಈ ಆಸಾಮಿ ವಾಜಪೇಯಿ ಅತ್ರಕೋದರಂತೆ"

"ಸೋನಿಯಾ ಆಶ್ವಾಸನೆ ಮೀರಿ ಹೋದರಂತಾ?"

"ಹೌದು. ಯಾಕೆ ಅಂದ್ರೆ ಮಗನ್ನ ತಾನೇ ಮುಖ್ಯಮಂತ್ರಿ ಮಾಡಿದ್ರೆ ಜನ ಏನಾರ ಅಂದಕತ್ತರೆ ಅಂದುಬುಟ್ಟು ನೀನೋಗಿ ಅಂಗೆ ಮಾಡು, ನಾನು ಸತ್ತೋಗನಂಗೆ ನಾಟಗ ಆಡ್ತಿನಿ ಅಂತ ಯಲ್ಲಾ ಪ್ರೀ ಪ್ಲಾನು ಕಂಡ್ರೀ."

"ಸೋನಿಯಾ ಇನ್ನೇನೇಳಿದ್ರು ಸಾರ್?"

"ಇನ್ನೇನುಯಿಲ್ಲ, ನಾನೊಬ್ಬನೆ ಆಗಿದ್ರೆ ಇಷ್ಟೊತ್ತಿಗೆ ಹೋಗಬವುತ್ತು, ಆದ್ರೆ ನನ್ನ ಜೊತೆಯಿರೋರ ಬುಟ್ರೆ ಗಕ್ಕಾದತ್ತೇ?"

"ಇಬ್ರಾಹಿಂ ಸಮಸ್ಯೆ ಏನು ಸಾರ್?"

"ಏನುಯಿಲ್ಲ, ಆ ಸಾಬಿ ಕಂಡ್ರೆ ಇವುನಿಗಾಗದಿಲ್ಲ, ಈ ಸಾಬಿ ಕಂಡ್ರೆ ಅವುನಿಗಾಗದಿಲ್ಲ, ಏನು ಮಾಡನಾ?"

"ಸೋನಿಯಾ ದೇವೇಗೌಡ್ರ ಬಗ್ಗೆ ಇನ್ನೇನೇಳಿದ್ರು ಸಾರ್?"

"ಏನಿಲ್ಲ ಆದೆ, ದೇವೇಗೌಡ್ರು ಸೋನಿಯಾ ಬೇಟಿಗೆ ಒಬ್ರೆ ಹೋಗರು. ಜೊತೆಲ್ಯಾರನಾರ ಕರಕಂಡೋಯ್ತಿರಲಿಲ್ಲ, ಅವುರು ಏನು ಮಾತಾಡಿದ್ರು ಅಂತ ಪಾರ್ಟಿ ಜನಕ್ಕೆ ಗೊತ್ತಾಯ್ತಿರಲಿಲ್ಲ, ಹಿಂಗೆ ಏನೇನೊ ಮಾತಾಡಿದೆ."

"ಅಂಗಾದ್ರೆ ನೀವೂ ಒಬ್ರೆ ಹೋಗಿ ಬಂದ್ರಲ್ಲ ಸಾರ್, ಈಗ ನೀವು ಏನೇನು ಮಾತಾಡಿ ಬಂದ್ರಿ ಅಂತ ನಿಮ್ಮವ್ರುರಿಗೆ ಹ್ಯಂಗೆ ಗೊತ್ತಾಗಬೇಕು?"

"ಈಗ ನಾನೆ ಹೇಳ್ತಿನಲೀ?"

ಥೂತ್ತೇರಿ!!!

–ಯಾಹೂ

‘ಪುಣ್ಯಕ್ಷೇತ್ರ’, ‘ಪರಿಶುದ್ಧ ಪ್ರದೇಶ’ವಾದ ಶಬರಿಮಲೈನಲ್ಲಿ ಅನೈತಿಕ ವ್ಯವಹಾರ, ಅಕ್ರಮ ಚಟುವಟಿಕೆ, ಹೆಂಡ-ಡ್ರಗ್ಸ್ ಸೇವನೆ, ಕೋಟ್ಯಂತರ ರೂಪಾಯಿ ಗುಳುಂ....ಇವೆಲ್ಲ ನಡೆದಿದೆ. ಆದರೆ ಪುರುಷರು ಎಸಗಿರುವ ಇಂತಹ ಅಪರಾಧಗಳ ಬಗ್ಗೆ ಚಕಾರವೆತ್ತದ ಜನ ಮಹಿಳೆಯಾದ ಜಯಮಾಲಾರವರು ವಿಗ್ರಹ ಸ್ಪರ್ಶಿಸಿ ‘ಕಳಂಕ’ ತಂದಿದ್ದರ ಬಗ್ಗೆ ಬಾಯಿ ಬಡಿದುಕೊಳ್ಳುತ್ತಿದ್ದಾರೆ.....

ಬಲಿ!



ಮಹಿಳೆಯೊಬ್ಬಳು ಹಿಂದೂ ದೇವರು-ದಿಂಡರ ತುಟಿಗೆ ಹೋದರೆ ಏನಾಗುತ್ತದೆ ಎಂಬುದಕ್ಕೆ ನಟಿ ಜಯಮಾಲಾ ಉದಾಹರಣೆ. ಇತ್ತೀಚೆಗೆ ಬಂದವರಿಗೆಲ್ಲ ಜ್ಯೋತಿಷ್ಯ ಹೇಳಲು ಶುರು ಮಾಡಿರುವ ಜಯಮಾಲಾರವರಿಗೆ ತಾನೇ ಇಂತಹ ಬಿಕ್ಕಟ್ಟಿನಲ್ಲಿ ಸಿಲುಕಿ ಕೊಳ್ಳುತ್ತೇನೆ ಎಂಬುದರ ಬಗ್ಗೆ ಅರಿವಾಗದಿದ್ದದ್ದು ಸೋಜಿಗವಾಗಿದೆ.

ಅದೇನೆ ಇರಲಿ, ಇವತ್ತು ಢೋಂಗಿ ಜ್ಯೋತಿಷಿಗಳು, ಕಳ್ಳ ಪೂಜಾರಿಗಳು, ಭ್ರಷ್ಟ ತಂತ್ರಿಗಳು, ಲಫಂಗ ರಾಜಕಾರಣಿಗಳೆಲ್ಲ ಸೇರಿ ಜಯಮಾಲಾ ಮಹಿಳೆ ಆಗಿರುವುದಕ್ಕೇ ಆಕೆಯನ್ನು ಮಟ್ಟ ಹಾಕಲು ಯತ್ನಿಸುತ್ತಿರುವುದಂತೂ ಖಂಡನೀಯ.

ಜಯಮಾಲಾರವರಲ್ಲಿ ಮೂಢನಂಬಿಕೆ, ಸಹಸ್ರಾರು ದೇವರುಗಳಲ್ಲಿ ಭಕ್ತಿ, ಜ್ಯೋತಿಷ್ಯದ ಬಗ್ಗೆ ಅಚಲ ಗೌರವ, ವಾಸ್ತು ಬಗ್ಗೆ ಭಕ್ತಿ ಇಂತಹ ಐಲುಪೈಲುಗಳು ಹೇರಳವಾಗಿದೆ. ಆದರೆ ಅವೆಲ್ಲ ಒತ್ತಟ್ಟಿಗಿರಲಿ. ಅದೆಲ್ಲಕ್ಕಿಂತಲೂ ಮುಖ್ಯ ಶಬರಿಮಲೈ ದೇವಸ್ಥಾನದಲ್ಲಿ ನಡೆಯುತ್ತಿರುವ ಅವ್ಯವಹಾರಗಳು, ಅದನ್ನೆಲ್ಲ ಮರೆಮಾಚಲು ತಂತ್ರಿ-ಮಂತ್ರಿಗಳು ಸೇರಿ ನಡೆಸುತ್ತಿರುವ ಹುನ್ನಾರಗಳು, ಗೊತ್ತಿಲ್ಲದಂತೆ ಅದಕ್ಕೆ ಬಲಿಯಾಗಿರುವ ಜಯಮಾಲಾರವರ ಕತೆ-ವ್ಯಥೆ!

ಕಳೆದ ಫೆಬ್ರುವರಿ ತಿಂಗಳಲ್ಲಿ ಈ ವರ್ಷ ಶಬರಿಮಲೈ ದೇವಸ್ಥಾನದ ಆದಾಯ 69.33 ಕೋಟಿ ರೂಪಾಯಿಗಳು ಎಂದು ಟ್ರಾವಂಕೂರ್ ದೇವಸ್ಥಾನದ ಬೋರ್ಡ್ ಹೇಳಿಕೆ ನೀಡಿತ್ತು. ಕಳೆದ ಡಿಸೆಂಬರ್‌ನಿಂದ ಜನವರಿ ತನಕ ಹರಿದು ಬಂದ ನಲವತ್ತು ಲಕ್ಷ ಭಕ್ತಾದಿಗಳಿಂದ ಸಂಗ್ರಹವಾದ ಹಣ ಅದು. ಆಗ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೇರಳದಲ್ಲಿ ಅಧಿಕಾರದಲ್ಲಿತ್ತು. ಆ ಸರ್ಕಾರದ ಮಂತ್ರಿಯೊಬ್ಬ ತನ್ನ ಚೇಲಾಗಳನ್ನು ದೇವಸ್ಥಾನದ ಬೋರ್ಡಿನಲ್ಲಿ ತುಂಬಿ ಅವರೆಲ್ಲ ಹಣ ಮುಕ್ಕುತ್ತಿದ್ದರು ಎಂಬ ಆರೋಪವಿತ್ತು.



ತಂತ್ರಿ

ಈ ಮಧ್ಯೆ ರಾಜ್ಯ ವಿಧಾನಸಭೆಗೆ ಚುನಾವಣೆಗಳು ನಡೆದು ಕಾಂಗ್ರೆಸ್ ಮಣ್ಣು ಮುಕ್ಕಿದರೆ, ಎಡ ಪಕ್ಷವಾದ ಸಿಪಿಐ(ಎಂ) ಅಧಿಕಾರಕ್ಕೆ ಬಂತು. ಇದೇ ಸಮಯಕ್ಕೆ ಜೂನ್ 1 ರಂದು, ಅಂದರೆ ಒಂದು ತಿಂಗಳ ಹಿಂದೆ, ಕೇರಳದ ಹೈಕೋರ್ಟ್ "ಶಬರಿಮಲೈನಲ್ಲಿ ಭಕ್ತಾದಿಗಳಿಗೆ ನೀಡುವ ಆಹಾರ ಸೌಲಭ್ಯದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಕಳೆದ ನಾಲ್ಕೈದು ವರ್ಷಗಳಿಂದ ನಡೆದಿದೆ; ಇದಕ್ಕೆ ಸಂಬಂಧಪಟ್ಟಂತೆ ಬೋರ್ಡಿನ ಆರು ಅಧಿಕಾರಿಗಳ ವಿರುದ್ಧ ದೂರನ್ನು ದಾಖಲಿಸಿ ವಿಚಾರಣೆ ನಡೆಸಬೇಕು" ಎಂದು ತೀರ್ಪು ನೀಡಿತ್ತು.

ಶಬರಿಮಲೈನ ಉಸ್ತುವಾರಿ ವಹಿಸಿಕೊಂಡಿರುವವರೇ ದೇವರಿಗೆ, ಭಕ್ತರಿಗೆ ದ್ರೋಹ ಬಗೆದಿದ್ದಾರೆ ಎಂಬುದು ಖಚಿತವಾಗುತ್ತಿರುವಾಗಲೇ ಜೂನ್ 10 ರಂದು ಪರಪ್ಪನಂಗಡಿ ಉನ್ನಿಕೃಷ್ಣನ್ ಪಣಿಕರ್ ಎಂಬ ‘ಪ್ರಖ್ಯಾತ’ ಜ್ಯೋತಿಷಿ ‘ಅಷ್ಟಮಂಗಳ ದೇವಪ್ರಶ್ನಂ’ ನಡೆಸಬೇಕೆಂದು ಹೊಸ ಸರ್ಕಾರ ಕೇಳಿಕೊಂಡಿತು.

ಇಪ್ಪತ್ತು ಜ್ಯೋತಿಷಿಗಳ ತಂಡದ ನೇತೃತ್ವವನ್ನು ವಹಿಸಿಕೊಂಡ ಪಣಿಕರ್ ಇದೇ ಜೂನ್ 16 ರಿಂದ 19 ನೇ ತಾರೀಖಿನವರೆಗೂ ‘ದೇವಪ್ರಶ್ನಂ’ ಕಾರ್ಯಕ್ರಮ ನಡೆಸಿದರು. ಅದು ಅಂತ್ಯಗೊಂಡಾಗ ಪಣಿಕರ್ ಹೊರಚೆಲ್ಲಿದ ಅಂಶಗಳು ಅಯ್ಯಪ್ಪನ ಭಕ್ತರಿಗೆ ಶಾಕ್ ನೀಡಿದವು. ಅವುಗಳು ಏನೆಂದರೆ: ‘ಪುಣ್ಯಕ್ಷೇತ್ರ’ ವಾದ ಶಬರಿಮಲೈನಲ್ಲೇ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ; ಅಲ್ಲಿ ಪಾನೀಯ ಸೇವನೆ ಸಿಕ್ಕಾಪಟ್ಟೆ ಆಗಿದೆ; ಗಾಂಜಾ, ಅಫೀಮು ಸೇರಿದಂತೆ ಇತರ ಅಕ್ರಮ ವ್ಯವಹಾರಗಳ ತಾಣವಾಗಿದೆ; ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡಿರುವವರೇ ಅಲ್ಲಿಂದ ಹಣ ಮತ್ತು ಸಾಮಗ್ರಿಗಳನ್ನು ಲೂಟಿ ಮಾಡುತ್ತಿದ್ದಾರೆ.... ಹೀಗೆ ಶಬರಿಮಲೈನಲ್ಲಿ ನಡೆಯುತ್ತಿರುವ ‘ಪುಣ್ಯ’ ಕಾರ್ಯಗಳ ಪಟ್ಟಿ ಸಾಗುತ್ತಾ ಹೋಗುತ್ತದೆ. ಅವುಗಳಲ್ಲಿ ಒಂದು ಇಪ್ಪತ್ತು ವರ್ಷಗಳ ಹಿಂದೆ ನಟಿಯೊಬ್ಬಳು ಅಯ್ಯಪ್ಪನ ವಿಗ್ರಹವನ್ನು ಸ್ಪರ್ಶಿಸಿದ್ದಳು ಎಂಬುದು!

ಅಂದಹಾಗೆ, ಪಣಿಕರ್‌ರವರ ತಂಡ ‘ಶಬರಿಮಲೈನಲ್ಲಿರುವ ತಂತ್ರಿಗಳು (ಪೂಜಾರಿಗಳ) ಸಾಂಪ್ರದಾಯಿಕ ಆಚರಣೆಗಳನ್ನು ಬಿಟ್ಟುಬಿಟ್ಟಿದ್ದಾರೆ, ದೇವಸ್ಥಾನದಲ್ಲಿ ಸರಿಯಾಗಿ ಪೂಜೆ ನಡೆಸದೆ ಪೂಜೆ ವಿಧಾನಗಳಲ್ಲಿ ವ್ಯಾಪಾರಿಗಳಾಗಿದ್ದಾರೆ, ಭಕ್ತರನ್ನು ಸುಲಿದು ತಿನ್ನುತ್ತಿದ್ದಾರೆ, ಎಲ್ಲರೂ ಸೇರಿ ತಮ್ಮ ಜೇಬನ್ನು ಭರ್ತಿ ಮಾಡಿಕೊಳ್ಳುತ್ತಿದ್ದಾರೆ’ ಎಂದೂ ಹೇಳಿದ್ದರು.

ಆದರೆ ವಿಪರ್ಯಾಸ ನೋಡಿ. ದೇವರ ಹೆಸರಲ್ಲಿ ನಡೆಯುತ್ತಿದ್ದ ಈ ಹಗಲು ದರೋಡೆ ಯಾರ ಗಮನವನ್ನೂ ಸೆಳೆಯಲಿಲ್ಲ. ಅನೈತಿಕ-ಅಕ್ರಮ ಚಟುವಟಿಕೆಗಳು, ಹೆಂಡ-ಗಾಂಜಾ ಸೇವನೆ ‘ಅಯ್ಯಪ್ಪ’ನ ಪಾವಿತ್ರವನ್ನು ಹಾಳು ಮಾಡಲಿಲ್ಲ. ಆದರೆ ಜಯಮಾಲ ಎಂಬ ಹೆಂಗಸು ವಿಗ್ರಹವನ್ನು ಮುಟ್ಟಿದ್ದೇ ಘೋರ ಪಾಪವಾಗಿದೆ! ಇದರ ಬಗ್ಗೆ ಮಾಧ್ಯಮಗಳಲ್ಲಿ ಕವರೇಜ್, ವಿಧಾನಸಭೆಯಲ್ಲಿ ಗಲಾಟೆ ಆಗುತ್ತಿದೆ. ಆದರೆ ಪೂಜಾರಿಗಳು, ಭ್ರಷ್ಟ ಅಧಿಕಾರಿಗಳು ಎಸಗಿರುವ ದ್ರೋಹ, ಅನ್ಯಾಯ, ಕಳಂಕಗಳ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ.



ದೇವರ ಪೂಜೆಗೆ ನಿಂತಿರುವವರೇ ಭಕ್ತರಿಗೆ ಕಳಪೆ ನೈವೇದ್ಯ ನೀಡಿ ಹಣ ನುಂಗಬಹುದು; ದೇಗುಲದ ಉಸ್ತುವಾರಿ ವಹಿಸಿಕೊಂಡಿರುವವರು ಹುಂಡಿಯಿಂದಲೇ ದುಡ್ಡನ್ನು ಲಪಟಾಯಿಸಬಹುದು. ಆದರೆ ದೈವನಿಷ್ಠೆಯಿಂದ ಬಂದ ಮಹಿಳೆಯೊಬ್ಬಳು ಗರ್ಭಗುಡಿಯನ್ನು ಪ್ರವೇಶಿಸಿದಳು; ವಿಗ್ರಹವನ್ನು ಸ್ಪರ್ಶಿಸಿದಳು ಎಂಬುದೇ ದೊಡ್ಡ ಅನಾಹುತ. ಮಹಿಳೆಯೊಬ್ಬಳನ್ನು ಬಲಿಪಶು ಮಾಡಿ ತಮ್ಮ ಹತ್ತು-ಹಲವು ಅನಾಚಾರಗಳನ್ನು ಮುಚ್ಚಿ ಹಾಕುತ್ತಿದ್ದಾರೆ ಅಲ್ಲಿನ ಪುರುಷರು, ಪುರೋಹಿತರು. ಇದನ್ನು ಅರಿಯದ ಜಯಮಾಲ ದೇವರಿಗೆ ಕ್ಷಮಾ ಪತ್ರ ಬರೆದು ಫ್ಯಾಕ್ಸ್ ಮಾಡಿ ಹಾಸ್ಯಾಸ್ಪದ ಆಗಿದ್ದಾರೆ.

ಜಯಮಾಲಾರವರ ‘ತಪ್ಪೊಪ್ಪಿಗೆ’ಯ ನಂತರ, ಶಬರಿಮಲೈ ದೇವಸ್ಥಾನವನ್ನು ಪರಿಶುದ್ಧಗೊಳಿಸುವ ಕಾರ್ಯಾಚರಣೆಗಳು ಇದೇ ಜೂನ್ 26 ರಂದು ಆರಂಭವಾಗಿವೆ. ಜಯಮಾಲಾರವರು ಒಂದು ಕ್ಷಣ ವಿಗ್ರಹವನ್ನು ಮುಟ್ಟಿದ್ದರ ಕಳಂಕವನ್ನು ತೆಗೆದು ಹಾಕಲು ಎರಡು ವರ್ಷ ಬೇಕಾಗುತ್ತದಂತೆ.

ಆದರೆ ಹಲವಾರು ವರ್ಷಗಳಿಂದ ಅಲ್ಲಿನ ಪುರುಷ ತಂತ್ರಿಗಳು, ಅಧಿಕಾರಿಗಳು ಎಸಗುತ್ತಾ ಬಂದಿರುವ ಪಾಪಗಳ ಶುದ್ಧೀಕರಣಕ್ಕೆ ಎಷ್ಟು ಶತಮಾನಗಳು ಬೇಕಾಗಬಹುದೋ ಯೋಚಿಸಿ?


ದೇವರು-ದಿಂಡರು ಎಂದೆಲ್ಲಾ ಭಯ ಭಕ್ತಿಯಿಂದ ಹೋದ ಜಯಮಾಲಾ ಎಂಬ ಶೂದ್ರ ಮಹಿಳೆಗೆ ಪುರುಷ ಪುರೋಹಿತಶಾಹಿಗಳು ತಂದಿಟ್ಟಿರುವ ತಾಪತ್ರಯ ಇದು.

ಇದರಿಂದ ಜಯಮಾಲಾ ಕೂಡ ಪಾಠ ಕಲಿಯಬೇಕಿದೆ. ಹಾಗೆಯೇ ಶೂದ್ರರು, ಮಹಿಳೆಯರು ಕೂಡ...

-ಗೌರಿ ಲಂಕೇಶ್

‘ಹಿಂದೂ ಧರ್ಮಕ್ಕೆ ಕೇಡುಗಾಲ’

ಯಾಕೋ, ಏನೋ ಇತ್ತೀಚೆಗೆ ಹಿಂದೂ ಧರ್ಮದ ಮಠಾಧೀಶರನ್ನೂ, ದೇಗುಲಗಳನ್ನೂ ದೆ[illegible]ಗಳು ಕಾಡುತ್ತಿರುವಂತಿದೆ. ಇತ್ತ ದಕ್ಷಿಣ ಭಾರತದಲ್ಲಿ ಜಯಮಾಲಾ ಸೇರಿದಂತೆ ಇತರೆ ಸಿನಿಮಾ ನಟಿಯರು ಶಬರಿಮಲೈನ ಅಯ್ಯಪ್ಪನನ್ನು ಸ್ಪರ್ಶಿಸಿ ‘ಅಪರಾಧ’ ವೆಸಗಿದ್ದರೆ ಅತ್ತ ಉತ್ತರ ಭಾರತದ ಅಮರನಾಥದಲ್ಲಿ ಈ ವರ್ಷ ಶಿವಲಿಂಗವೇ ಸೃಷ್ಟಿಯಾಗದೆ ದೊಡ್ಡ ರಾದ್ಧಾಂತವಾಗಿದೆ. ಈ ಮಧ್ಯೆ ಸಾಕ್ಷಾತ್ ತಿರುಪತಿ ಸುತ್ತ ಕ್ರಿಶ್ಚಿಯನ್ ಧಾರ್ಮಿಕರ ‘ಕಾಟ’ ಹೆಚ್ಚಾಗುತ್ತಿದೆಯ[illegible]ಲ್ಲದೆ, ಪಾಪ ಕಂಚಿ ‘ಕಾಮಕೋಟಿ’ಯಂತಹ ಪವಿತ್ರ ಕ್ಷೇತ್ರಗಳ ಮಠಾಧೀಶರು ಕೊಲೆ, ವ್ಯಭಿಚಾರ, ಸೆಕ್ಸ್ ಸಿಡಿ ಪ್ರಕರಣಗಳಲ್ಲಿ ಸಿಲುಕಿ ಕೊಂಡು ಒದ್ದಾಡುತ್ತಿದ್ದಾರೆ!



ದೇವರು[illegible] ಇದ್ದಾನೆ ಎಂಬುದು ನಿಜವೇ ಆಗಿದ್ದರೆ ಆತ ತನ್ನ ‘ಸೃಷ್ಟಿ’ಯಾದ ಮಹಿಳೆಯರನ್ನು[illegible] ತುಚ್ಛವಾಗಿ ಕಾಣುತ್ತಿರಲಿಲ್ಲ ಎಂಬ ವಾದವನ್ನು[illegible] ಅಯ್ಯಪ್ಪನ ಭಕ್ತಾದಿಗಳು ಒಪ್ಪುತ್ತಿಲ್ಲ. ಜಾಗತಿಕ ಪರಿಸರದ[illegible] ಬದಲಾವಣೆಯಿಂದ ಈ ವರ್ಷ ಅಮರನಾಥದಲ್ಲಿ[illegible] ಹಿಮ ಕಡಿಮೆಯಾಗಿ ‘ಶಿವಲಿಂಗ’ ಸೃಷ್ಟಿಯಾಗಿಲ್ಲ[illegible] ಎಂದರೆ ಶಿವಭಕ್ತರು ಅದನ್ನು ನಂಬುತ್ತಿಲ್ಲ.

ಇದಿಷ್ಟು ಸಾಲದೆಂಬಂತೆ, ಕಂಚಿ ಮಠದಲ್ಲಿ[illegible] ‘ಕಾಮಲೀಲೆ’ಗಳು ನಡೆದಿಲ್ಲ ಎಂದರೆ ಜನ ನಂಬುತ್ತಿಲ್ಲ[illegible] ಹಾಗೆಯೇ ಪದ್ಮಾವತಿಯ ಮೋಹಕ್ಕೆ ಬಿದ್ದು ಅವಳನ್ನೇ[illegible] ಮದುವೆ ಆಗುತ್ತೇನೆಂದು ಹಠ ಹಿಡಿದು, ತೀರಿಸಲಾಗ[illegible]ದಷ್ಟು ಸಾಲ ಮಾಡಿ "ಭಕ್ತರೇ, ನೀವೇ ಈ ಸಾಲ[illegible] ತೀರಿಸಿ" ಎಂದು ತಿರುಪತಿ ತಿಮ್ಮಪ್ಪ ತಿಕ್ಕಿದ ನಾಮವನ್ನು[illegible] ಅಳಿಸಿಕೊಂಡು ಜನ ಬೇರೆ ಧರ್ಮದತ್ತ ಹೋಗುತ್ತಿದ್ದಾರೆ[illegible] ಅಂದರೆ, ಹಿಂದೂತ್ವದ ಬ್ರಿಗೇಡ್ ಅದನ್ನು ಒಪ್ಪುತ್ತಿಲ್ಲ[illegible] "ಇದು ಕ್ರಿಶ್ಚಿಯನ್ನರ ತುತ್ತೂರಿ. ಜನ ಹೀಗೆ ಓಡಿ[illegible] ಹೋಗುವಂತಿಲ್ಲ. ಇಲ್ಲೇ ಇದ್ದು ನಮ್ಮ ತಿಮ್ಮಪ್ಪ[illegible] ಮಾಡಿದ ಸಾಲವನ್ನು ತೀರಿಸಲೇ ಬೇಕು" ಎಂದು[illegible] ಅವರೆಲ್ಲ ಅಬ್ಬರಿಸುತ್ತಿದ್ದಾರೆ. ಆದರ ನಾಯಕತ್ವವನ್ನು[illegible] ಪೇಜಾವರದ ಯತಿಗಳು ವಹಿಸಿಕೊಂಡಿದ್ದಾರೆ.

ಪಾಪ, ಹಿಂದೂ ಧರ್ಮದ ದೇವರುಗಳಿಗೆ, ಅವ[illegible] ದೇಗುಲ-ಮಠಗಳಿಗೆ ಈ ಪಾಡು ಬರಬಾರದಿತ್ತು!!

ಅಯ್ಯಪ್ಪನ ವಾರ್ಷಿಕ ಆದಾಯ 70 ಕೋಟಿ!

ಪ್ರಸ್ತುತ ಸಾಲಿನಲ್ಲಿ ಶಬರಿಮಲೈ ಅಯ್ಯಪ್ಪ[illegible] ದೇವಸ್ಥಾನದ ಆದಾಯ ಕೇವಲ 70 ಕೋಟಿ[illegible] ರೂಪಾಯಿಗಳು. ಇಷ್ಟೊಂದು ಹಣ ಸಂಗ್ರಹವಾಗಿದ್ದು[illegible] ಭಕ್ತಾದಿಗಳ ಕಾಣಿಕೆಯಿಂದ ಮತ್ತು ಅದೇ ಭಕ್ತಾದಿ[illegible]ಗಳಿಗೆ ಮಾರಿದ ದೇವರ ‘ಪ್ರಸಾದ’ದಿಂದ!

ಆದರೆ ಇಷ್ಟೊಂದು ಹಣ ಚೆಲ್ಲಿದ ಭಕ್ತಾದಿ[illegible]ಗಳಿಗೆಂದು ದೇವಸ್ಥಾನದ ಉಸ್ತುವಾರಿ ವಹಿಸಿಕೊಂಡಿ[illegible]ರುವ ಮಂಡಳಿ ವೆಚ್ಚ ಮಾಡಿದ್ದು ಕೇವಲ 25[illegible] ಕೋಟಿಗಳನ್ನು. ಅಂದರೆ ದೇವಸ್ಥಾನಕ್ಕೆ ಸರಾಸರಿ 45[illegible] ಕೋಟಿ ರೂಪಾಯಿಗಳ ಲಾಭ! ಈ ಲಾಭದಲ್ಲಿ[illegible] ‘ಅಪ್ಪ’ ಶಿವನಿಗೆಷ್ಟೋ, ಮಗ ‘ಅಯ್ಯಪ್ಪ’ನಿಗೆಷ್ಟೋ, ಅವರಿಬ್ಬರ ಹೆಸರಲ್ಲಿ ದೇವಸ್ಥಾನದ ಉಸ್ತುವಾರಿಯನ್ನು[illegible] ನಡೆಸುತ್ತಿರುವ ಧರ್ಮಾಧಿಕಾರಿಗಳ ಪಾಲೆಷ್ಟೋ, ಆ[illegible] ಶಿವನೇ ಬಲ್ಲ!



ಯಾರು ಈ ಪರಪ್ಪನಂಗಡಿ ಪಣಿಕರ್?

ನಮ್ಮ ಪರಪ್ಪನ ಅಗ್ರಹಾರದಲ್ಲಿರುವ ಜೈಲಿಗೂ ಈ ಪರಪ್ಪನಂಗಡಿ ಉನ್ನಿಕೃಷ್ಣನ್ ಪಣಿಕರ್‌ಗೂ ‘ಪರಸ್ಪರ’ ಸಂಬಂಧ ಇದ್ದಂತಿಲ್ಲ.

ಆದರೂ ಈತ ರಾಜ್ಯದಲ್ಲಿ, ದೇಶದಲ್ಲಿ, ವಿದೇಶದಲ್ಲಿ ಸುತ್ತಾಡುವಾಗ ಪೊಲೀಸ್ ಬಂದೋಬಸ್ತ್ ಇರುತ್ತದೆ. ಆತನಿಗೆ ಯಾವುದೇ ಹಾನಿಯಾಗದಂತೆ ಕೇರಳ ಮತ್ತು ತಮಿಳುನಾಡಿನ ಪೊಲೀಸರು ‘Z’ ಕ್ಯಾಟಗರಿಯ ರಕ್ಷಣೆ ನೀಡಿದ್ದಾರೆ. ಇದಕ್ಕೆ ಕಾರಣ ಜಯಲಲಿತಾರವರ ಮೇಲೆ ಒತ್ತಡ ಹೇರಿ ಕೊಯ್ಮತ್ತೂರು ಜೈಲಿನಲ್ಲಿರುವ PDP ಪಕ್ಷದ ಅಬ್ದುಲ್ ನಾಸರ್ ಮ್ಯದಾನಿಯ ಬಿಡುಗಡೆಗಾಗಿ ಯತ್ನಿಸದೇ ಇರುವುದು.

ವೇದಗಳಲ್ಲಿ ಪ್ರಖ್ಯಾತ ‘ಪಂಡಿತ’ನಾಗಿರುವ ಈತನ ಹಲವಾರು ಗ್ರಾಹಕರಲ್ಲಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಪ್ರಮುಖರು. ಅವರೊಂದಿಗೆ ಹಲವಾರು ರಾಜಕಾರಣಿಗಳು, ಉದ್ಯಮಿಗಳು, ತಾರೆಯರೂ ಇದ್ದಾರೆ. ಅಷ್ಟೇ ಅಲ್ಲ, ಶ್ರೀಲಂಕಾದ ಸರ್ಕಾರಕ್ಕೆ ಈತ ‘ಸಾಂಸ್ಕೃತಿಕ ಸಲಹೆಗಾರ’ ಕೂಡ!

ತಮಿಳ್ ಈಳಂ ಹೋರಾಟಗಾರರೊಂದಿಗೆ ಕೆಲ ದಶಕಗಳಿಂದ ಸೆಣಸಾಡುತ್ತಿರುವ ಶ್ರೀಲಂಕಾದ ಸರ್ಕಾರ, ಈ ಪರಪ್ಪನಂಗಡಿ ಉನ್ನಿಕೃಷ್ಣನ್ ಪಣಿಕರ್‌ನ ಸಲಹೆಯನ್ನು ಕೋರಿತು. "ಜುಲೈ ಮೊದಲನೆ ವಾರದಲ್ಲಿ ಎಲ್ಲವೂ ಅಂತ್ಯಗೊಳ್ಳುತ್ತೆ. ಶ್ರೀಲಂಕಾ ಒಂದೇ ದೇಶವಾಗಿ ಉಳಿಯುತ್ತೆ ಶ್ರೀಲಂಕಾದ ಸರ್ಕಾರವೇ ಈ ಯುದ್ಧದಲ್ಲಿ ಗೆಲ್ಲುತ್ತೆ" ಎಂದು ಈ ಪಣಿಕರ್ ಭವಿಷ್ಯ ನುಡಿದಿದ್ದ. ಹಾಗೆಯೇ ಒಂದು ಪರಿಹಾರವನ್ನು ಸೂಚಿಸಿದ್ದ. "ಶ್ರೀಲಂಕಾ ದೇಶವನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಅಲ್ಲಿ ವಿಷ್ಣು ದೇವಸ್ಥಾನ ಇಲ್ಲದಿರುವುದೇ ಕಾರಣ. ಸರ್ಕಾರ ಈ ಕೂಡಲೇ ವಿಷ್ಣು ದೇವಸ್ಥಾನವನ್ನು ನಿರ್ಮಿಸಿದರೆ ಎಲ್ಲವೂ ಬಗೆಹರಿಯುತ್ತದೆ" ಎಂದು ಪಣಿಕರ್ ಹೇಳಿದ್ದ. ಅದರಂತೆ ಶ್ರೀಲಂಕಾ ಸರ್ಕಾರವು ರಾಜಧಾನಿ ಕೊಲಂಬೋ ಹತ್ತಿರ 50 ಎಕರೆ ಜಮೀನನ್ನು ವಿಷ್ಣು ದೇವಸ್ಥಾನಕ್ಕೆ ನೀಡಿತು.



ಪಣಿಕರ್

ಆದರೇನಂತೆ? ತಮಿಳ್ ಈಳಂರವರ ಹೋರಾಟವೂ ಅಂತ್ಯಗೊಳ್ಳಲಿಲ್ಲ; ಶ್ರೀಲಂಕಾ ಸರ್ಕಾರದ ತಲೆನೋವೂ ಕಡಿಮೆ ಆಗಲಿಲ್ಲ. ಇತ್ತೀಚೆಗೆ ನಾರ್ವೆ ದೇಶದ ಉಸ್ತುವಾರಿಕೆಯಲ್ಲಿ ನಡೆಯುತ್ತಿದ್ದ ಮಾತುಕತೆಗಳೂ ಮುರಿದು ಬಿದ್ದಿವೆ.

ಅಂದಹಾಗೆ, ಪರಪ್ಪನಂಗಡಿ ಉನ್ನಿಕೃಷ್ಣ ಪಣಿಕರ್ ಶ್ರೀಲಂಕಾದ ಆಂತರಿಕ ಸಮಸ್ಯೆ ಇದೇ ಜುಲೈ ತಿಂಗಳಲ್ಲಿ ಅಂತ್ಯಗೊಳ್ಳುತ್ತೆ ಎಂದು ಹೇಳಿದ್ದು ಕ್ರಿ.ಶ. 2000 ರಲ್ಲಿ!

ಈ ಪಣಿಕರ್‌ಗೂ ಕರ್ನಾಟಕ ರಾಜ್ಯಕ್ಕೂ ನಂಟಿದೆ. ಅದೇನೆಂದರೆ ಡಾ. ರಾಜ್‌ಕುಮಾರ್‌ರವರನ್ನು ನರಹಂತಕ ವೀರಪ್ಪನ್ ಅಪಹರಿಸಿದ್ದಾಗ, ಅವರ ಸಂಸಾರದವರೂ ಪಣಿಕರ್‌ನಿಂದ ಭವಿಷ್ಯ ಕೇಳಿದ್ದರು. ಈಗ ಈತ ದೇವರಿಗೆ ‘ಪ್ರಶ್ನೆ’ ಕೇಳಿ ಶಬರಿಮಲೈನಲ್ಲಾಗುತ್ತಿರುವ ಅವ್ಯವಹಾರಗಳನ್ನು ಬಯಲಿಗೆಳೆದಿದ್ದಾರಲ್ಲದೆ, ಆ ಪ್ರಕ್ರಿಯೆಯಲ್ಲಿ ಜಯಮಾಲಾರನ್ನು ಕೂಡ ತೊಂದರೆಯಲ್ಲಿ ಸಿಕ್ಕಿಹಾಕಿಸಿದ್ದಾರೆ.

'ಪಶ್ಚಾತ್ತಾಪ ಇಲ್ಲ'

'ಗಿರಿಕನ್ಯೆ'ಯಾಗಿ 70ರ ದಶಕದಲ್ಲಿ ಕನ್ನಡ ...ಂಗದ ದಿಗಂತದಲ್ಲಿ ಮೂಡಿದ ತಾರೆ ಜಯ...ಾ ಎಲೆಂಟು ವರ್ಷದ ಹಿಂದೆ 'ತಾಯಿ ಸಾಹೇಬ' ನಿರ್ಮಿಸಿ ಸ್ವರ್ಣ ಕಮಲ ಪ್ರಶಸ್ತಿ ಪಡೆದು ಚಿತ್ರೋದ್ಯಮದನ್ನು ದಂಗು ಪಡಿಸಿದ್ದರು. ...ಹ ಜಯಮಾಲಾ ಈಗ ಹೊಸ ವಿವಾದದಲ್ಲಿ ...ಚಿಕೊಂಡು ಅಯ್ಯಪ್ಪ ಸ್ವಾಮಿಯ ಭಕ್ತಾದಿಗಳನ್ನು ...ನಾತ್ಮಕವಾದ ಇಕ್ಕಟ್ಟಿನಲ್ಲಿ ಸಿಲುಕಿಸಿದ್ದಾರೆ.

ಈ ವಿವಾದಕ್ಕೆ ಸಂಬಂಧಿಸಿದಂತೆ ಆಕೆಯೊಂದಿಗೆ ...ದ ಸಂದರ್ಶನದ ತುಣುಕುಗಳು ಇಲ್ಲಿವೆ:

ಪ್ರ: ನಿಜವಾಗಿಯೂ ನೀವು ಅಯ್ಯಪ್ಪ ಸ್ವಾಮಿಯ ಪಾದವನ್ನು ಸ್ಪರ್ಶಿಸಿದಿರಾ?



● ಹೌದು. ನಾನು ಅಯ್ಯಪ್ಪ ಸ್ವಾಮಿಯ ವಿಗ್ರಹವನ್ನು ಸ್ಪರ್ಶಿಸಿದ್ದು ನಿಜ. ಇದರಲ್ಲಿ ಸುಳ್ಳು ಹೇಳುವ ಪ್ರಶ್ನೆಯೇ ಇಲ್ಲ.

ಪ್ರ: ನೀವು ಪ್ರಚಾರಕ್ಕೋಸ್ಕರ ಹೀಗೆ ಹೇಳುತ್ತಿದ್ದೀರಿ ಎಂದು ಅಯ್ಯಪ್ಪಸ್ವಾಮಿ ಆಡಳಿತ ಮಂಡಳಿ ದೂರುತ್ತಿದೆಯಲ್ಲವೇ?

● ನಾನು ಸಿನಿಮಾ ಉದ್ಯಮದಲ್ಲಿ ಮೂವತ್ತಮೂರು ವರ್ಷಗಳಿಂದ ಇದ್ದೇನೆ. ರಾಷ್ಟ್ರ ಪ್ರಶಸ್ತಿ ರಾಜ್ಯ ಪ್ರಶಸ್ತಿ ಪಡೆದಾಗ ನನಗೆ ಕರ್ನಾಟಕದ ಮಾಧ್ಯಮದವರು ಸಾಕಷ್ಟು ಪ್ರಚಾರ ನೀಡಿದ್ದಾರೆ. ಈಗ ನನಗೆ ಹದಿನಾರು ವರ್ಷದ ಮಗಳು ಇದ್ದಾಳೆ. ಇಂತಹ ಸಂದರ್ಭದಲ್ಲಿ ನನಗೆ ಈ ಥರದ ಪಬ್ಲಿಸಿಟಿಯ ಅಗತ್ಯವಿದೆಯೇ ನೀವೇ ಹೇಳಿ?

ಪ್ರ: ಹಾಗಾದರೆ ನಡೆದದ್ದು ಏನು?

● 19 ವರ್ಷದ ಹಿಂದೆ ಈ ಪ್ರಕರಣ ನಡೆದದ್ದು. ನನ್ನ ಪತಿ ಪ್ರಭಾಕರ್ ಅವರು ಕಾಲು ನೋವಿನಿಂದ ನರಳುತ್ತಿದ್ದಾಗ ಯಾರೋ ನನಗೆ ಅಯ್ಯಪ್ಪನ ಹರಕೆ ಹೊತ್ತರೆ ಎಲ್ಲ ಸರಿಯಾಗುತ್ತದೆ ಅಂದರು. ನಾನು ಹಾಗೆ ಹರಕೆ ಹೊತ್ತುಕೊಂಡು ವ್ರತ ಮಾಡಿಕೊಂಡೆ. ಅವರ ಕಾಲು ನೋವು ಗುಣವಾಯಿತು. ಆಗ ನಾನು ದೇವರಿಗೆ ಕೊಟ್ಟ ಮಾತಿನಂತೆ ಹರಕೆ ತೀರಿಸಲು ಶಬರಿಮಲೈಗೆ ಹೋದೆ.

ಪ್ರ: ಶಬರಿಮಲೈಗೆ ಹೆಣ್ಣು ಮಕ್ಕಳು ಹೋಗಬಾರದು ಎಂಬ ವಾಡಿಕೆ ನಿಮಗೆ ತಿಳಿದಿರಲಿಲ್ಲವೇ?

● ಇಲ್ಲ, ನನಗೆ ನಿಜವಾಗಿಯೂ ಗೊತ್ತಿರಲಿಲ್ಲ. ನಾನು ಅಲ್ಲಿಂದ ಬಂದ ನಂತರ ನಮ್ಮ ಬಂಧುಗಳ ಬಳಿ ನಾನು ಶಬರಿಮಲೈಗೆ ಹೋದ ವಿಷಯ ತಿಳಿಸಿದಾಗ ಅವರು ಆಶ್ಚರ್ಯದಿಂದ ಆ ವಿಷಯವನ್ನು ನನಗೆ ಹೇಳಿದರು.

ಪ್ರ: ಈಗ ಈ ವಿಷಯ ಹೇಗೆ ಬಹಿರಂಗವಾಯಿತು?

● Lord Ayyappa is angry ಎಂದು ಹದಿನೈದು ದಿನದ ಹಿಂದೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಲೇಖನ ಓದಿದೆ. ಅದರಲ್ಲಿ ಸಿನಿಮಾ ನಟಿಯೊಬ್ಬರು ವಿಗ್ರಹವನ್ನು ಮುಟ್ಟಿದ್ದರಿಂದ ಅದಕ್ಕೆ ಅಪಚಾರವಾಗಿದೆ ಎಂದು ಬರೆಯಲಾಗಿತ್ತು. ಆಗ ನನಗೆ ಹತ್ತೊಂಬತ್ತು ವರ್ಷಗಳ ಹಿಂದೆ ನಡೆದ ಘಟನೆ ನೆನಪಾಯಿತು. ನಾನೇ ದೇವಸ್ಥಾನಕ್ಕೆ ಫೋನ್ ಮಾಡಿ, ನಾನೇ ಆ ನಟಿಯಾಗಿರುವ ಸಂಭವವಿದೆ. ನನ್ನಿಂದ ತಪ್ಪಾಗಿದೆ. ಅದಕ್ಕಾಗಿ ನಾನು ದೇವರ ಬಳಿ ಕ್ಷಮೆ ಯಾಚಿಸಬೇಕಾಗಿದೆ ಎಂದು ಕೇಳಿಕೊಂಡೆ. ಅದಕ್ಕವರು ನೀವು ದೇವರಿಗೆ ಒಂದು ಪತ್ರವನ್ನು ಬರೆದು ಕ್ಷಮೆ ಯಾಚಿಸಿಕೊಳ್ಳಬಹುದು ಎಂದರು. ಹಾಗೆ ಪತ್ರ ಬರೆದ ನಂತರ ಈ ವಿಷಯ ಅಲ್ಲಿಗೇ ಮುಗಿಯಿತು ಎಂದು ಪುರೋಹಿತರು ನನಗೆ ಫೋನು ಮಾಡಿದರು. ಜೊತೆಗೆ ನಾವು ಈ ಕಾಗದವನ್ನು ನಾಶ ಮಾಡುತ್ತೇವೆ ಎಂಬ ಭರವಸೆಯನ್ನು ನೀಡಿದ್ದರು.

ಪ್ರ: ಮತ್ತೆ ಈ ವಿವಾದ ಹೇಗೆ ಸೃಷ್ಟಿಯಾಯಿತು?

● ಪತ್ರವನ್ನು ನಾಶ ಮಾಡುತ್ತೇವೆ ಎಂದು ಹೇಳಿದವರು ಈಗ ನನ್ನನ್ನೇ ನಾಶ ಮಾಡಲು ಹೊರಟಿದ್ದಾರೆ. ಈ ಪತ್ರದ ವಿಷಯವನ್ನು ಪತ್ರಿಕೆಗಳಿಗೆ, ಚಾನೆಲ್‌ಗಳಿಗೆ ಬಹಿರಂಗಪಡಿಸಿದವರು ಅವರೇ. ಈಗ ನೀವೇ ಹೇಳಿ, ಪಬ್ಲಿಸಿಟಿ ಬೇಕಾಗಿದ್ದು ನನಗಾ ಅಥವಾ ಅವರಿಗಾ?

ಪ್ರ: ನೀವು ಶಬರಿಮಲೈಗೆ ಹೋಗಿರಲೇ ಇಲ್ಲ ಎಂದು ಪುರೋಹಿತರು ಈಗ ಹೇಳುತ್ತಿದ್ದಾರಲ್ಲ?

● ನಾನು ಬದುಕಿಯೇ ಇಲ್ಲ ಎಂದು ಹೇಳಿದರೆ ನೀವು ನಂಬುತ್ತೀರಾ? ಹಾಗೆಯೇ ಅವರ ಮಾತುಗಳು.

ಪ್ರ: ನಿಮ್ಮನ್ನು ಬಂಧಿಸಬೇಕೆಂದು, ಈ ವಿಷಯುವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಕೇರಳದಲ್ಲಿ ಭಕ್ತರು ಒತ್ತಾಯ ಮಾಡುತ್ತಿದ್ದಾರಲ್ಲ?

● ನಾನು ಯಾವುದೇ ತನಿಖೆಗೆ ಸಿದ್ಧ. ಸಿಬಿಐ ತನಿಖೆಗೂ ಸಿದ್ಧ. ನಾನೊಬ್ಬ ಮಹಿಳೆ. ಅವರು ಅನಗತ್ಯವಾಗಿ ಈ ವಿವಾದವನ್ನು ದೊಡ್ಡದು ಮಾಡುತ್ತಾರೆ.

ಪ್ರ: ಈ ಘಟನೆ ಈಗ ಮುಂಬರುವ ದಿನಗಳಲ್ಲಿ ರಾಜಕೀಯ ತಿರುವು ಪಡೆಯಬಹುದು. ಆಗ ಏನು ಮಾಡುತ್ತೀರ?

● ನನಗೆ ಯಾವ ರಾಜಕೀಯ ಪಕ್ಷದ ಬೆಂಬಲವೂ ಬೇಡ. ನನಗೆ ಸ್ವಾಮಿ ಅಯ್ಯಪ್ಪನ ಕೃಪೆ ಇದೆ ಎಂದೇ ನಂಬಿದ್ದೇನೆ. ಅಯ್ಯಪ್ಪನ ಆಶೀರ್ವಾದ ಇದ್ದುದರಿಂದಲೇ ನನಗೆ ಆತನ ಪಾದ ಸ್ಪರ್ಶಿಸುವ ಸದವಕಾಶ ದೊರೆತದ್ದು.

ಪ್ರ: ಈ ವಿಷಯದ ಬಗ್ಗೆ ಪಶ್ಚಾತ್ತಾಪ ಪಡುತ್ತೀರಾ?

● ಪಶ್ಚಾತ್ತಾಪವೇಕೆ ಪಡಬೇಕು? ನಾನು ಗೊತ್ತಿಲ್ಲದೇ ಹೋಗಿದ್ದೇನೆ. ಅಲ್ಲಿ ಜನಜಂಗುಳಿಯಲ್ಲಿ, ನೂಕುನುಗ್ಗಲಿನಲ್ಲಿ ಅನಿರೀಕ್ಷಿತವಾಗಿ ಅಯ್ಯಪ್ಪನ ಪಾದವನ್ನು ಸ್ಪರ್ಶಿಸಿದ್ದೇನೆ. ಇದು ಉದ್ದೇಶ ಪೂರ್ವಕವಾಗಿ ಮಾಡಿದ್ದಲ್ಲ. ಹೀಗಾಗಿ ಪಶ್ಚಾತ್ತಾಪ ಪಡುವ ಪ್ರಶ್ನೆಯೇ ಇಲ್ಲ. ಆದರೆ ನನ್ನಿಂದಾಗಿ ಅಪಚಾರವಾಗಿದ್ದಕ್ಕೆ ನಾನು ದೇವರಿಗೆ Confession ಪತ್ರ ಬರೆದಿದ್ದೇನೆ. ಮಾಡಿದ ತಪ್ಪಿಗೆ ದೇವರು ನನ್ನನ್ನು ಕ್ಷಮಿಸುತ್ತಾರೆ ಎಂದು ಭಾವಿಸಿದ್ದೇನೆ. ■

'ಅಯ್ಯಪ್ಪೋ'ಗಳಿಗೆ ಕಾಂಡೋಮ್‌ಗಳು ಬೇಡ!

ಇತ್ತೀಚಿಗೆ ಕೇರಳ ರಾಜ್ಯದ ಏಡ್ಸ್ ನಿಯಂತ್ರಣ ಮಂಡಳಿ ಶಬರಿಮಲೈ ಸುತ್ತ ಬಟ್ಟಿಯಾಗಿ ಕಾಂಡೋಮ್‌ಗಳನ್ನು ...ವುದಾಗಿ ಹೇಳಿದಾಗ ದೊಡ್ಡ ರಾದ್ಧಾಂತವಾಗಿತ್ತು. ಅಯ್ಯಪ್ಪನ ಭಕ್ತಾದಿಗಳು ಮತ್ತು ಸಂಘ ಪರಿವಾರದವರು "...ಪ ಒಂದೂ ಧರ್ಮಕ್ಷೇತ್ರದ ಮೇಲೆ ಎಸಗುತ್ತಿರುವ ಅಪಚಾರ" ಎಂದು ಕೆಂಡ ಕಾರಿದ್ದರು.

ಆದರೆ ವಾಸ್ತವ ಸ್ಥಿತಿಯೇ ಬೇರೆಯಾಗಿದೆ. ಇವತ್ತು ಕೇರಳ ರಾಜ್ಯದಲ್ಲಿ ಅತಿ ಹೆಚ್ಚು ಏಡ್ಸ್ ರೋಗಿಗಳಿದ್ದಾರಲ್ಲದೆ, ...ಮಲೈ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಪತ್ತೆಯಾಗಿದ್ದಾರೆ. ಆ ಕಾರಣದಿಂದಲೇ ...ನಿಯಂತ್ರಣ ಮಂಡಳಿ ಅಲ್ಲಿಗೆ ಹೋಗುವ ಜನರಿಗೆ ಬಟ್ಟಿಯಾಗಿ ಕಾಂಡೋಮ್‌ಗಳನ್ನು ನೀಡಲು ನಿರ್ಧರಿಸಿತ್ತು.



"ಇದು ಧಾರ್ಮಿಕ ಭಾವನೆಗಳನ್ನು ಮೀರಿದ್ದು; ಸಮಾಜದ ಆರೋಗ್ಯಕ್ಕೆ ಸಂಬಂಧಪಟ್ಟದ್ದು" ಎಂದು ಏಡ್ಸ್ ನಿಯಂತ್ರಣ ಮಂಡಳಿ ಎಷ್ಟೇ ವಾದಿಸಿದರೂ, ಸಂಘ ಪರಿವಾರ ಮತ್ತು ಭಕ್ತಾದಿ ಸಂಘಟನೆಗಳು "ಇಲ್ಲಿಗೆ ಬರುವ ಜನ ಪರಿಶುದ್ಧರು. ಆದ್ದರಿಂದ ಈ ಯೋಜನೆಯನ್ನು [illegible]" ಎಂದು [illegible] [illegible]


ಡ್ರಗ್ ದಂಧೆಯಲ್ಲಿ ಮಂತ್ರಿ ಮಕ್ಕಳು!

ಪೊಲೀಸ್ ವರದಿ

ಬೆಂಗಳೂರಿನ ಡ್ರಗ್ ಜಗತ್ತಿನ ವರದಿ ಇದು. ಇತ್ತೀಚೆಗೆ ತಾನೆ ದೆಹಲಿಯಲ್ಲಿ ಬಿಜೆಪಿ ಯುವ ನಾಯಕ ರಾಹುಲ್ ಮಹಾಜನ್ ಡ್ರಗ್ ತಿಂದು ಸಿಕ್ಕಿಬಿದ್ದಿದ್ದ ಸುದ್ದಿ ಅಲ್ಲೋಲ ಕಲ್ಲೋಲ ಎಬ್ಬಿಸಿತ್ತು. ಹೈ ಸೊಸೈಟಿಯ ಜನರು, ರಾಜಕಾರಣಿಗಳ ಮಕ್ಕಳು, ಶ್ರೀಮಂತರು, ಸಿನಿಮಾ ನಟರು, ಮಾಡೆಲ್‌ಗಳ ಡ್ರಗ್, ಕುಡಿತ-ಕುಣಿತ, ಸೆಕ್ಸ್‌ಗಳ ವಿಕೃತ ಬದುಕನ್ನು ರಾಹುಲ್ ಪ್ರಕರಣ ಆಚೆಗೆ ತಂದಿತ್ತು.

ಅಂತದ್ದೇ ಘಟನೆಗಳು ಈಗ ಬೆಂಗಳೂರಿನಲ್ಲೂ ನಡೆಯುತ್ತಿವೆ. ಮಂತ್ರಿಗಳ ಮಕ್ಕಳು, ಮಾಡೆಲ್‌ಗಳು, ಕ್ರಿಕೆಟರ್‌ಗಳು ಡ್ರಗ್ ಚಟಕ್ಕೆ ಬಲಿಯಾಗಿದ್ದಾರೆ.

2005 ರ ಅಕ್ಟೋಬರ್ 4 ನೇ ತಾರೀಖು ಬೆಂಗಳೂರಿನ ಬಾಣಸವಾಡಿ ಪೊಲೀಸರು ರೋಸ್‌ಗಾರ್ಡನ್ ಬಾರ್ ಮೇಲೆ ದಾಳಿ ಮಾಡಿ ಕಿಯಾಬಿ ಇಲುಲು ಅಲಿಯಾಸ್ ಸ್ಟೀವ್ ಎಂಬಿತ್ಯಾದಿ ಉದ್ದನೆ ಹೆಸರಿನ ನೈಜೀರಿಯಾ ದೇಶದವನನ್ನು ಅರೆಸ್ಟ್ ಮಾಡಿದ್ದರು.



ಸಂಗೀತ್


ಡ್ರಗ್ಸ್ ಮಾರುತ್ತಿದ್ದ ಆರೋಪ ಅವನ ಮೇಲಿತ್ತು.

ಈ ಸ್ಟೀವ್‌ನ ಕುಂಡೆ ಮೇಲೊದ್ದು ಎಳಕೊಂಡು ಹೋದ ಪೊಲೀಸರಿಗೆ ಅವನು ಸಾಮಾನ್ಯ ಡ್ರಗ್ ಮಾರಾಟಗಾರ ಅಲ್ಲ ಎನಿಸಿ ಅವನ ಬಾಯಿ ಬಿಡಿಸಲು ಹೊಸ ಮಾರ್ಗ ಹುಡುಕಿದ್ದರು.

ಅದು ನಾರ್ಕೋ ಅನಾಲಿಸಿಸ್ ಟೆಸ್ಟ್!

ಸ್ಟೀವ್‌ನನ್ನು ನಾರ್ಕೋ ಅನಾಲಿಸೀಸ್, ಪಾಲಿಗ್ರಫಿ ಟೆಸ್ಟ್‌ಗಳಿಗೆ ಒಳಪಡಿಸಿ ಅರೆಪ್ರಜ್ಞಾವಸ್ಥೆಗೆ ಕರೆದೊಯ್ದು ಅವನಿಗೆ ಗೊತ್ತಿರುವುದನ್ನೆಲ್ಲಾ ಕಕ್ಕಿಸಲಾಗಿದೆ.

ಅಕ್ಟೋಬರ್ 6 ನೇ ತಾರೀಖು ಮಡಿವಾಳದ ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿಯೊಳಗೆ ನಡೆದ ಈ ರಹಸ್ಯ ಪರೀಕ್ಷೆಯಲ್ಲಿ ಆರೋಪಿ ಸ್ಟೀವ್ ಸಂಸ್ಥೆಯ ಮುಖ್ಯಸ್ಥೆ ಡಾ. ಎಸ್. ಮಾಲಿನಿ ಹಾಗೂ ಕೆಲ ಹಿರಿಯ ಪೊಲೀಸ್ ಆಫೀಸರ್‌ಗಳ ಎದುರಿಗೆ ಹೇಳಿದ್ದೆಲ್ಲವೂ ವಿಡಿಯೋ ರೆಕಾರ್ಡ್ ಆಗಿದೆ. ಡಾ. ಮಾಲಿನಿ ಕೂಡ ಲಿಖಿತ ತನಿಖಾ ವರದಿಯನ್ನು 2005 ರ ಅಕ್ಟೋಬರ್ 17 ರಂದೇ ಈಸ್ಟ್ ಡಿವಿಜನ್ನಿನ ಡಿಸಿಪಿಗೆ ಕಳುಹಿಸಿದ್ದಾರೆ! 'ಲಂಕೇಶ್'ಗೂ ಅದರ ಪ್ರತಿ ಸಿಕ್ಕಿದೆ!!



ಸೂರ್ಯಕಾಂತ

ಈ ರಹಸ್ಯ ವೈಜ್ಞಾನಿಕ ವಿಚಾರಣೆಯ ವೇಳೆ ಡ್ರಗ್ ದಂಧೆಯ ಸ್ಟೀವ್ ತನ್ನ ಜೊತೆಗಾರರು, ಪಾಲುದಾರರು, ಗಿರಾಕಿಗಳು ಯಾರ್ಯಾರೆಂದು ಬಾಯಿ ಬಿಟ್ಟಿದ್ದಾನೋ ಆ ಹೆಸರುಗಳು ನಿಮಗೂ ಗೊತ್ತಾಗಬೇಕಿದೆ.

ಸೂರ್ಯಕಾಂತ ನಾಗಮಾರಪಲ್ಲಿ, ವಿಜಯ ಮಲ್ಯ, ಮಾಡೆಲ್ ಆರತಿ ರೆಡ್ಡಿ, ಸಂಗೀತ್, ಪವಿತ್ರಾ, ಸತೀಶ, ಆನಂದ ಶೆಟ್ಟಿ.... ಇತ್ಯಾದಿ ಇತ್ಯಾದಿ.

ಇವೆಲ್ಲಾ ಸಾಮಾನ್ಯ ಹೆಸರುಗಳಲ್ಲ, ಹೈ ಸೊಸೈಟಿಯ ಮೆಂಟಲ್ ಗಿರಾಕಿಗಳಿವರು. ನೆಟ್ಟಗೆ ಹೊಟ್ಟೆಗೆ ಅನ್ನ ತಿಂದುಕೊಂಡಿರುವ ಬದಲಾಗಿ ಡ್ರಿಂಕು-ಡ್ರಗ್ಗೂ ತಿಂದೇ ಕಾಲ ಕಳೆಯುವ ರೋಗಿಷ್ಟರು.

ಸ್ಟೀವ್ ಇವರೆಲ್ಲರ ಚಟಗಳು, ಚಟುವಟಿಕೆಗಳ ಬಗ್ಗೆ ಡೀಟೈಲಾಗಿ ಹೇಳಿದ್ದರೂ ಬೆಂಗಳೂರು ಪೊಲೀಸರು ಅದಿನ್ಯಾವ ಡ್ರಗ್ ತಿಂದು ಮಲಗಿದ್ದಾರೋ ಗೊತ್ತಿಲ್ಲ. ಇದುವರೆಗೂ ಯಾರನ್ನೂ ಅರೆಸ್ಟ್ ಮಾಡಿಲ್ಲ. ಕನಿಷ್ಠ ಕರೆಸಿ ವಿಚಾರಣೆಯನ್ನೂ ಮಾಡಿಲ್ಲ ಎಂದರೆ ಆಶ್ಚರ್ಯವಾಗುತ್ತದೆ.

ಮಾಜಿ ಮಂತ್ರಿ ಬೀದರಿನ ಗುರುಪಾದಪ್ಪ ನಾಗಮಾರಪಲ್ಲಿ ಮಗ ಸೂರ್ಯಕಾಂತ ಮತ್ತವನ ಸೋದರ ಉಮಾಕಾಂತ ಬೀದರಿನ ಔರಾದ್‌ನಲ್ಲಿ ಪುಂಡಾಟ ಮಾಡುತ್ತಿದ್ದಾಗ ನಕ್ಸಲರಿಂದ ಏಟು ತಿಂದು ಬೆಂಗಳೂರಿಗೆ ಓಡಿ ಬಂದಿದ್ದವರು. ನಂತರ ಉಮಾಕಾಂತ ರಾಜ್ಯ ಸಹಕಾರ ಮಹಾ ಮಂಡಲಿಯಲ್ಲಿ ಯಾವುದೋ ಚಿಲ್ಲರೆ ಸ್ಥಾನ ಗಿಟ್ಟಿಸಿ ಈಗ ಮೂಲೆ ಗುಂಪಾಗಿದ್ದಾನೆ. ಆದರೆ ಸೂರ್ಯಕಾಂತ ಅಂತವನಲ್ಲ. ಕೈ ತುಂಬಾ ದುಡ್ಡಿಟ್ಟುಕೊಂಡು (ಅಪ್ಪ ಕದ್ದಿದ್ದು) ಜೊತೆ ಗೊಂದಿಷ್ಟು ಗೂಂಡಾಪಡೆ, ಬಾರು, ಡಿಸ್ಕೋ, ಡ್ರಗ್ ಎಂದೆಲ್ಲಾ ಅಂಡಲೆಯುತ್ತಿದ್ದಾನೆ. ಇವನೆಂತಾ ಅವಿವೇಕಿಯೆಂದರೆ 2006 ರ ಜನವರಿ 22 ರಂದು ನೈಂಟೀಸ್ ಟ್ವಿಲ್ಸ್ ಎಂಬ ಪಬ್‌ನಲ್ಲಿ ಗುಂಡು ಹಾರಿಸಿ ರತನ್ ಎಂಬುವವನ್ನು ಗಾಯಗೊಳಿಸಿದ್ದ. ಅದು ಪೊಲೀಸ್ ಕೇಸಾಗಿ ಸೂರ್ಯಕಾಂತ ಅರೆಸ್ಟಾಗಿದ್ದ. ಆದರೆ ಈ ಸ್ಟೀವ್‌ನ ಡ್ರಗ್ ವ್ಯಾಪಾರದಲ್ಲೂ ಸೂರ್ಯಕಾಂತನ ರೋಲ್ ಇರುವುದಕ್ಕೆ ಈಗ ಸಾಕ್ಷಿ ಸಿಕ್ಕಿದೆ.

(13 ನೇ ಪುಟಕ್ಕೆ)

ಲ್ಯಾಟಿನ್ ಅಮೆರಿಕಾ ಡ್ರಗ್ ಬೆಂಗಳೂರಿಗೆ

ಸ್ಟೀವ್ ಬಾಯಿ ಬಿಟ್ಟಿರುವ ವಿಷಯಗಳಲ್ಲಿ ಇದೂ ಒಂದು. ಬೆಂಗಳೂರಿಗೆ ಬಂದು ಬೀಳುತ್ತಿರುವ ಕೊಕೇನ್ ಸರಕು ಲ್ಯಾಟಿನ್ ಅಮೆರಿಕಾ ದೇಶಗಳಿಂದ ಹೊರಡುತ್ತಿವೆ!

ವಿಮಾನಗಳ ಅಥವಾ ಹಡಗುಗಳಲ್ಲಿ ಈ ಕೊಕೇನ್ ಪ್ರಯಾಣ ಹೊರಡುತ್ತದೆ. ವಿಮಾನದ ಪೈಲಟ್ ಅಥವಾ ಕಾರ್ಗೋ ಆಫೀಸರ್ ನೆರವಿನಿಂದ [illegible]

ಕಲಬೆರಕೆ ಕೊಕೇನ್-ಲೌಂಜ್ ಬಾರ್

ಕೊಕೇನ್ ಅತೀ ದುಬಾರಿ ಮಾದಕ ವಸ್ತು. ಆದರೆ ಸ್ಟೀವ್ ಈ ಸರಕು ಕಡಿಮೆ ಬೆಲೆಯಲ್ಲಿ ಸಿಕ್ಕಿ ಎಲ್ಲರೂ ಸಂತೋಷಪಡಲಿ ಎಂದು ಕಲಬೆರಕೆ ಕೊಕೇನ್ ರೆಡಿ ಮಾಡಿ ಕಡಿಮೆ ರೇಟಿಗೆ ಮಾರುತ್ತಿದ್ದ... ಚಾಕ್‌ಪೀಸ್ ಪುಡಿ ಬೆರೆಸುವ ಮೂಲಕ.

ಅಂದಹಾಗೆ ಬೆಂಗಳೂರಿನಲ್ಲಿ ಕೊಕೇನ್ ಸಿಗುವ ಹೊಸ ಜಾಯಿಂಟ್‌ಗಳೆಂದರೆ ಲೌಂಜ್ ಬಾರುಗಳು [illegible]


ಹುಬ್ಬಳ್ಳಿ RTO ಮಂಥ್ಲಿ ಕಮಾಯಿ ಒಂದು ಕೋಟಿ ರೂಪಾಯಿ!

ಹೌದು ಇದು ಇಲ್ಲೀಗ ಓಪನ್ ಸಿಕ್ರೇಟ್!

'ಸಾರಿಗೆ ಮಂತ್ರಿಯ ರೋಡ್ ರಾಬರಿ' ಎಂದು 'ಲಂಕೇಶ್' ಬರೆದಿದ್ದು ನೆನಪುಂಟಲ್ಲ? ಚಲುವರಾಯ ಸ್ವಾಮಿ RTO ಟ್ರಾನ್ಸ್‌ಫರ್‌ಗಳಲ್ಲಿ ಮಾಡಿದ ಅಂಥಾ ದುಂದಿಯಿಂದ ಇದೀ RTO ಕಚೇರಿಗಳು ಭ್ರಷ್ಟತೆಯ ಗಂಗೋತ್ರಿಗಳಾಗಲಿವೆ ಎಂದು ಅಂದೇ 'ಪತ್ರಿಕೆ' ಎಚ್ಚರಿಸಿತ್ತು.

ಹುಬ್ಬಳ್ಳಿಯ RTO ಕಚೇರಿ ಹೊಕ್ಕರೆ ಯಾವನು ನೌಕರ, ಯಾವ ನನ್ಮಗ ಏಜಂಟ್ ಎಂದು ಗುರುತಿಸುವುದೇ ಕಷ್ಟ. ಅಷ್ಟೊಂದು ಅನ್ಯೋನ್ಯವಾಗಿದ್ದಾರೆ ನೌಕರರು ಮತ್ತು ಏಜಂಟರು.

RTO ಕರೀಮ್ ಬೇಗ್‌ನ ಉಂಡಾಟದ ಬಗ್ಗೆ ಹಿಂದೊಮ್ಮೆ ಬರೆದಿದ್ದೆವು. ಚಲುವನಿಟ್ಟ ಟ್ರಾನ್ಸ್‌ಫರ್ ಫಿಟ್ಟಿಂಗ್‌ಗೆ ತತ್ತರಿಸಿದ ಕರೀಮ್ ಬೇಗ್ "ನಾ ಹ್ಯಂಗ ಹುಬ್ಳಿ ಬಿಟ್ ಹೋಗ್ಲಿ... ಮೈ ಹುಬ್ಳಿ ಕೊ ಬಹುತ್ ಪ್ಯಾರ್ ಕರತಾ ಹೂsss" ಎಂದು ಕಂಡವರ ಮುಂದೆ ಗೋಳಾಡಿ, ಕೊನೆಗೆ ಚಲುವನಿಗೆ 15 ಲಕ್ಷ ಕಪ್ಪ ಕೊಟ್ಟು ಮತ್ತಿಲ್ಲೇ ಸೆಟ್ಲ್ ಆಗಿಬಿಟ್ಟ.



ಮೇಘರಾಜ್ ಹಿರೆಮನಿ


ಈ ಸಾರಿಗೆ ಅಧಿಕಾರಿ ಈಗ ನುಂಗುತ್ತಿರುವ ಸ್ಪೀಡ್ ನೋಡಿದರೆ ನೀವು ಗಾಬರಿ ಬೀಳುತ್ತೀರಿ. ಸರ್ಕಾರಿ ಬಸ್ ಬಹಳ ಎಂದರೆ ಗಂಟೆಗೆ 65 ಕಿ.ಮೀ. ಸ್ಪೀಡಲ್ಲಿರುತ್ತೆ, ಆದರೆ ಕರೀಮನ ಭ್ರಷ್ಟಾಚಾರಿ ಬಸ್ ಗಂಟೆಗೆ 100 ಕಿ.ಮೀ. ಸ್ಪೀಡಿನಲ್ಲಿ ಓಡ್ತಾ ಕಲೆಕ್ಷನ್ ಶುರುವಿಟ್ಟುಕೊಂಡಿದೆ.

ಇನ್ಸ್‌ಪೆಕ್ಟರ್ಸ್: ತೆರೆದೇ ಇರುವ ಬಾಯಿಗಳು!!

ಅನಾದಿ ಕಾಲದಿಂದಲೂ ಹುಬ್ಬಳ್ಳಿ RTO ಕಚೇರಿಯಲ್ಲಿ ತೂತು ಕೊರೆಯುತ್ತಲೇ ಇರುವ ಹೆಗ್ಗಣಗಳು ಹಲವಾರು. ಇನ್ಸ್‌ಪೆಕ್ಟರ್‌ಗಳಾದ ಮಸರಕಲ್, ಮಲ್ಲಿಕಾರ್ಜುನ, ಜಯಸಿಂಹ, ಮುನವಳ್ಳಿ, ಅತ್ತಾರ, ಬಾರಿಗಿಡದ ಎಂಬ ಹುಟ್ಟಾ ಭ್ರಷ್ಟರಿಗೆ ಕರೀಮ್ ಬೇಗ್‌ನಂತಹ ಭ್ರಷ್ಟಾತಿಭ್ರಷ್ಟನ ಆಶೀರ್ವಾದ ಸಿಕ್ಕಿರುವುದರಿಂದ ಜನಕ್ಕೆ RTO ಕಚೇರಿ ಕಡೆ ಹೋಗಲು ಭಯವಾಗುತ್ತಿದೆ. ಇಂತಹ ಖದೀಮರಿಂದ ಫಿಟ್‌ನೆಸ್ ಸರ್ಟಿಫಿಕೇಟ್ ಪಡೆದ ವಾಹನಗಳು ಅದೆಷ್ಟು ಅನ್‌ಫಿಟ್ ಆಗಿರುತ್ತವೆ ಎಂಬುದು ಅವಳಿ ನಗರಕ್ಕೆ ಗೊತ್ತಿರುವ ವಿಷಯವೇ.

ಇಲ್ಲಿ ಏಜಂಟ್‌ರ ಶ್ರೀಮಂತಿಕೆ ನೋಡಿದರೆ ನೀವು ಹೌಹಾರುತ್ತೀರಿ. ಶಾನ್‌ಬಾಗ್ ಎಂಬ ಏಜಂಟ್ ತನ್ನ ದಲ್ಲಾಳಿ ಕೆಲಸ ಮಾಡಲೆಂದು ಕಾರ್‌ನಲ್ಲಿ ಬರುತ್ತಾನೆ!

ಬರೋಬ್ಬರಿ 200 ಜನ ಇಂತಹಾ ಏಜಂಟರಿದ್ದಾರೆ ಮತ್ತು ಅವರೆಲ್ಲರೂ ಟಿಪ್‌ಟಾಪ್ ಆಗಿಯೇ ಬಂದು ದಲ್ಲಾಳಿ ಕೆಲಸ ನಡೆಸುತ್ತಾರೆ ಎಂದರೆ ಈ RTO ಕಚೇರಿ ಅದೆಂತಹ ಕಬಳಿಕಾ ಕೇಂದ್ರವಾಗಿರಬಹುದು ಲೆಕ್ಕ ಹಾಕಿ. ದೊಡ್ಡ ಏಜಂಟ್ ದಿನವೊಂದಕ್ಕೆ 1 ರಿಂದ 2 ಸಾವಿರ ಗಳಿಸಿದರೆ, ಚೋಟು ಪಾಟುಗಳೆಲ್ಲ 100 ರೂಪಾಯಿಗೆ ತೃಪ್ತಿಪಡುತ್ತವೆ. ಕಚೇರಿ ಸುತ್ತಲೂ ಇರುವ ಚಾದಂಗಡಿಗಳೇ ಡೀಲ್ ಸೆಂಟರ್ಸ್! ಕೆಲವು ಬಿಗ್ ಏಜಂಟ್ಸ್‌ಗೆ ಹುಬ್ಬಳ್ಳಿ-ಧಾರವಾಡದಲ್ಲಿ ಸ್ವಂತ ಕಚೇರಿಗಳಿವೆ!



ಚೆಲುವರಾಯಸ್ವಾಮಿ

ಎಷ್ಟೊಂದು ಪಾರದರ್ಶಕ ಬ್ಯುಸಿನೆಸ್ಸು ನೋಡಿ ಈ ಹಲಾಲುಕೋರರದು!

ಡ್ರೈವಿಂಗ್ ಸ್ಕೂಲು: ಇಲ್ಲೂ ಪಾಲು!


ಡ್ರೈವಿಂಗ್ ತರಬೇತಿ ಕೊಡುವ ಸಾಗರ, ವಿನಾಯಕ, ರವಿ, ಬಾಬಾ ಡ್ರೈವಿಂಗ್ ಸ್ಕೂಲ್‌ಗಳಿಗೂ RTO ಕಚೇರಿಗೂ ಅವಿನಾಭಾವ ಸಂಬಂಧ. ಈ ಸ್ಕೂಲ್‌ಗಳ ಮಾಲೀಕರಾದ ಅಜಗರಖಾನ್ ಪಠಾಣ್, ನಾರಾಯಣ ಜೂಜಗಾರ, ರವೀಂದ್ರ ಹರ್ತಿ, ರಫೀಕ್‌ಗಳೆಲ್ಲ ಸಿಕ್ಕ ಸಿಕ್ಕವರಿಗೆ ಡ್ರೈವಿಂಗ್ ಸರ್ಟಿಫಿಕೇಟ್ ನೀಡಿ, RTO ಕಚೇರಿಯವರಿಗೊಂದಿಷ್ಟು ತಿನ್ನಿಸಿ ತಾವು ಪಾವನರಾಗುತ್ತಾರೆ.

ಮತ್ತೆ ಡಾಕ್ಟರ್ ಸರ್ಟಿಫಿಕೇಟ್ ಕೊಡೋದ್ಯಾರು? ಅಂತಾ ಚಿಂತೆ ಮಾಡಬೇಡಿ. RTO ಕಚೇರಿಯ ಬಾಗಿಲಲ್ಲೇ ಟೆಂಟ್ ಹೊಡೆದು ಕೂತಿದ್ದಾನೆ ಡಾ. ಖಾಜಿ. ಒಂದ್ ನಲ್ವತ್ ರೂಪಾಯಿ ಬಿಸಾಕಿ ನೋಡಿ, ಪಟ್ಟಂತ ಸರ್ಟಿಫಿಕೇಟ್ ಕೊಟ್ಟೇ ಬಿಡ್ತಾನೆ ಡಾ. ಖಾಜಿ!

ಆದ್ರೂ ಪೊಲೀಸ್ ಸ್ಟೇಷನ್ ಸರ್ಟಿಫಿಕೇಟ್ ಸಿಗೋದು ಸ್ವಲ್ಪ ಕಷ್ಟ ಅಂದ್ಕೊಂಡಿರಾ? ನೊ... ನೊ. ಸ್ಪಾಟ್‌ನಲ್ಲೇ ರೆಡಿ ಮಾಡಿ ಕೊಡಲು ಮಿ. ಶೇಖ್ ತುದಿಗಾಲ ಮೇಲೇ ನಿಂತಿರುತ್ತಾನೆ. ವಾಹನಗಳು ಕಳೆದಾಗ ಕಾನೂನು ಪ್ರಕಾರ ಪೊಲೀಸ್ ಠಾಣೆಯಿಂದ ಪ್ರಮಾಣ ಪತ್ರ ಪಡೆಯಬೇಕು. ಶೇಖ್ ಇರುವಾಗ ಪೊಲೀಸ್ ಏಕೆ?

ಬರ್ತ್ ಸರ್ಟಿಫಿಕೇಟ್ ಕೊಡಲೂ ಒಂದು ನೆಟ್‌ವರ್ಕ್ ಇದ್ದೇ ಇದೆ. ಸರ್ಕಾರ ನಿಗದಿ ಪಡಿಸಿದ ಹಣ ತುಂಬಲು ಚಲನ್‌ನೊಂದಿಗೆ ಹೋದರೆ ಅಲ್ಲಿ RTO ನೌಕರನ ವರಸೆ ಶುರುವಾಗುತ್ತದೆ. ಹತ್ತರ ಜೊತೆ ಹನ್ನೊಂದು ಎಂಬಂತೆ ಈ ನೌಕರರು ಪ್ರತಿ ಚಲನ್‌ಗೆ ಐದು ರೂ. ಕೊಡು ಎಂದು ಭಿಕ್ಷಾಪಾತ್ರೆ ಹಿಡಿದೇ ಕೂತಿದ್ದಾರೆ.

RTO ಕಚೇರಿಯ ಪ್ಯೂನ್‌ಗಳಿಗಿಂತ ಏಜಂಟರೇ ಗಡಿಬಿಡಿಯಿಂದ ಓಡಾಡಿ ಕೆಲಸ ಮಾಡುತ್ತಿರುತ್ತಾರೆ. ಸಂಜೆ 5 ರಿಂದ 7 ಗಂಟೆಯ ಅವಧಿಯಲ್ಲಂತೂ ಈ ಕಚೇರಿಯಲ್ಲಿ ಟ್ರಾಫಿಕ್ ಜಾಮ್ ಆಗಿಬಿಡುತ್ತದೆ. ಕಂತ್ರಿ ಕೆಲಸಗಳು ನಡೆಯುವ ಪೀಕ್ ಟೈಮ್ ಇದು. ಚಲನ್ ಪತ್ರ ನೀಡುವ ವಿಭಾಗದ ಸೂಪರಿಂಟೆಂಡೆಂಟ್ ಶ್ರೀಮತಿ ಗಲಗಲಿ ಹತ್ತಿರ ಹೋದರೆ ನೀವು ಗಲಿಬಿಲಿ ಆಗಿಬಿಡ್ತೀರಿ. ಏಕೆಂದರೆ ಈ ಪುಣ್ಯಾತ್‌ಗಿತ್ತಿ 24 ಅವರ್ ತನ್ನ ಮೇಜಿನ ಡ್ರಾಯರ್ ತೆಗೆದೇ ಕುಳಿತಿರುತ್ತಾಳೆ. ಸಖತ್ ಮೇಯ್ದು ನಿವೃತ್ತಿಯಾದ ಗಣಾಚಾರಿ ನವನಗರದಲ್ಲಿ 25 ಲಕ್ಷ ರೂಪಾಯಿ ಮನೆಯಲ್ಲಿ ಕುಳಿತು ತನ್ನ ಹಳೆಯ ಉಂಡಾಟಗಳ ಕತೆ ಹೇಳ್ತಿದ್ದಾನಂತೆ. ಈಗ ಸೇವೆಯಲ್ಲಿ ಫುಲ್ ಬ್ಯುಸಿ ಇರುವ ಇನ್ಸ್‌ಪೆಕ್ಟರ್ ಅತ್ತಾರ ಧಾರವಾಡದಲ್ಲಿ 15 ಲಕ್ಷದ ಮನೆ ಎಬ್ಬಿಸಿದ್ದಾನೆ. ರಹದಾರಿಪತ್ರ (ಪರ್ಮಿಟ್ ಸೆಕ್ಷನ್) ವಿಭಾಗಕ್ಕೆ ಕಾಲಿಟ್ಟರೆ ಅಲ್ಲಿ ಸೂಪರಿಂಟೆಂಡೆಂಟ್ ತಿಪ್ಪಯ್ಯ ಮುದರಡ್ಡಿಗಳ ಕಾರುಬಾರು. ಜೊತೆಗೆ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನ ಸಹೋದರ ಸಂಬಂಧಿ ಚಿದಾನಂದಪ್ಪ, ಕ್ಲರ್ಕ್ ಗಡ್ಡಿ ರಹದಾರಿ ಪತ್ರಕ್ಕೆ ದಾರಿ ತೋರಿಸುವ ಇವರು ಸುಲಿಯದೇ ನಿಮ್ಮನ್ನು ಬಿಟ್ಟರೆ ದೇವರಾಣೆ!



RTO ಕರೀಮ್ ಬೇಗ್

ಜಾತ್ಯತೀತ ದಳದ ಮೇಘರಾಜ್ ಹಿರೇಮನಿ, ಅವರಣ್ಣ ಕಾಂಗ್ರೆಸ್‌ನ ಮೋಹನ್ ಹಿರೇಮನಿ ಇಬ್ಬರಿಗೂ RTO ಕಚೇರಿಯ ಲಿಂಕ್ ಉಂಟು. ಮೇಘರಾಜ್ ಪ್ರತಿ ತಿಂಗಳು ಆರ್.ಆರ್. ಸಾಮ್ರಾಟ್, ಚಾಲುಕ್ಯ ಸರ್ವಿಸ್ ಎಂಬ ಖಾಸಗಿ ಬಸ್‌ಗಳಿಂದ ಹಣ ಸಂಗ್ರಹಿಸಿ RTO ಸಾಹೇಬರಿಗೆ ತಲುಪಿಸುತ್ತಾನೆ.

RTO ಕರೀಮ್ ಬೇಗ್‌ನ 'ನುಂಗಾಟ ಸರ್ವಿಸ್' ಎಂಬ ಬಸ್ ಮುಕ್ಕುತ್ತಲೇ ಸಾಗಿ[illegible] ಜನಸಾಮಾನ್ಯರಿಗೆ RTO ಕಚೇರಿ ಎಂದರೆ ದೆವ್ವ[illegible] ಮನೆ ಎಂಬಂತಾಗಿದೆ. ಅಲ್ಲಿ ಮೇಲೆ ಕುಳಿತಿದ್ದಾನಲ್ಲ[illegible] ರೋಡ್ ರಾಬರಿ ಖದೀಮ ಚಲವರಾಯಸ್ವಾಮಿಯ[illegible] ಗಬಗಬ ಮುಕ್ಕುತ್ತಿ ರುವಾಗ RTO ಗಳು ತ[illegible] ದೊರೆಯನ್ನು ಅನುಕರಿ ಸದೇ ಬಿಡುತ್ತಾರಾ?

-ಜಗಾಪು[illegible]

ಡ್ರೈವಿಂಗ್ ಸ್ಕೂಲ್: ರೂಟ್ ಲೆಸ್ ಡ್ರೈವಿಂಗ್

ನೀವು ಡ್ರೈವಿಂಗ್ ಕಲಿಯದೇ RTO ಕಚೇರಿ[illegible] ಸರ್ಟಿಫಿಕೇಟ್ ಪಡೆಯಬೇಕೆ? ಇಂದೇ ತ್ವರೆ ಮಾಡಿ ಹುಬ್ಬಳ್ಳಿಯ ಡ್ರೈವಿಂಗ್ ಸ್ಕೂಲ್‌ಗಳಿಗೊಮ್ಮೆ ಭೇ[illegible] ಕೊಡಿ!

ಸುಲಭ ದರದಲ್ಲಿ ಸರ್ಟಿಫಿಕೇಟ್ ಲಭ್ಯ!

ವಾಹನ	ಸರ್ಕಾರಿ ದರ	ಲಂಚ
ಆಟೋ ರಿಕ್ಷಾ	2000	450
ಕಾರ್	3400	550
ಟ್ರಕ್	4500	1500

ಲಂಚ ಚಲಿಸುವ ರೂಟ್!

1. RTO ಕರೀಮ್ ಬೇಗ್‌ನಿಗೆ ಪಿ.ಎ. ಕಮ್ ಪ್ಯೂನ್ ಆಗಿರುವ ಸವಣೂರ್ ಪ್ರತಿದಿನ 8 ಸಾವಿರ ಕಲೆಕ್ಷನ್ ತಂದಿಡುತ್ತಾನೆ.
2. LLR ಕಲಿಕಾ ಚಾಲನಾ ಪತ್ರ: ಏಜಂಟ್ಸ್ ಸದಾನಂದ, ಮಲ್ಲಿಕಾರ್ಜುನರು ಇದರಲ್ಲಿ ಎಕ್ಸ್‌ಪರ್ಟ್!
3. DL ಚಾಲನಾಪತ್ರ: ಏಜಂಟ್ ಹಿರೇಮಠ್ ತುಂಬಾ ಫಾಸ್ಟು!
4. DL ರಿನ್ಯೂವಲ್: ಏಜಂಟ್ಸ್ ನಾಗಪ್ಪ, ಸೋಮುಗಳು ಇದರಲ್ಲಿ ಎತ್ತಿದ ಕೈ!
5. ಪಾಸಿಂಗ್ (ಫಿಟ್‌ನೆಸ್ ಸರ್ಟಿಫಿಕೇಟ್): ಮಲ್ಲೇಶಿ ಇದರಲ್ಲಿ ಪಿಎಚ್‌ಡಿ ಮಾಡಿದ್ದಾನೆ!

ಹೀಗೆ 12 ಜನ ಎಕ್ಸ್‌ಪರ್ಟ್ ಏಜಂಟರಿದ್ದಾರೆ. ಸದಾ ನಿಮ್ಮ 'ಸೇವೆ' (shave)ಗೆ ತುದಿಗುಂಡಿಯ ಮೇಲೆ ಕುಳಿತೇ ಬಿಟ್ಟಿದ್ದಾರೆ! Hurry up!

ಮಂಥ್ಲಿ ಹಫ್ತಾ ಫಿಕ್ಸಿಂಗ್!

ವಾಹನ	ರೇಟ್	ಸಂಖ್ಯೆ	ತಿಂಗಳ ಕಲೆಕ್ಷನ್ನು
ಮ್ಯಾಂಗನೀಸ್ ಲಾರಿ	1100	5000	55 ಲಕ್ಷ
ಆರ್.ಆರ್. ಸಾಮ್ರಾಟ್, ಚಾಲುಕ್ಯ ಖಾಸಗಿ ಬಸ್	1500	60	90 ಸಾವಿರ
	Total	55 ಲಕ್ಷ 90 ಸಾವಿರ	

ರೇಟ್ ಬೋರ್ಡ್: ಲಂಚಕ್ಕೂ ಪರ್ಮಿಟ್ಟು!

ಈ RTO ಕಚೇರಿಯಲ್ಲಿ ಲಂಚಕ್ಕಂತೂ ಮುಚ್ಚುಮರೆಯೇ ಇಲ್ಲ. 'ಪಾರದರ್ಶಕ ವ್ಯವಹಾರಕ್ಕೆ ಪ್ರಾಧಾನ್ಯತೆ ಕೊಡಲಾಗುವುದು' ಎಂಬುದೇ ಇಲ್ಲಿಯ ನಿತ್ಯಮಂತ್ರ. ಇಲ್ಲೊಂದು ರೇಟ್‌ಬೋರ್ಡ್ ಇದೆ ಓದಿ ನೋಡಿ.

	ಕೆಲಸಕ್ಕೆಷ್ಟು ರೇಟ್ (ರೂ.ಗಳಲ್ಲಿ)	ದಿನಕ್ಕೆಷ್ಟು ವಾಹನ?	ದಿನದ ಕಲೆಕ್ಷನ್ನು(ರೂ.ಗಳಲ್ಲಿ)
1. ಟ್ರಕ್ ಪಾಸಿಂಗ್ (ಫಿಟ್‌ನೆಸ್ ಸರ್ಟಿಫಿಕೇಟ್)	500	15	7500
2. ಮ್ಯಾಕ್ಸಿ ಕ್ಯಾಬ್ ಪಾಸಿಂಗ್	1500	3	4500
3. ಮೋಟಾರ್ ಬೈಕ್ ಪಾಸಿಂಗ್	120	60	7200
4. ಡ್ರೈವಿಂಗ್ ಲೈಸೆನ್ಸ್			
(a) ಹೆವಿ (ಟ್ರಕ್)	500	15	7500
(b) ಕಾರ್	400	15	6000
(c) ಮೋಟಾರ್‌ಬೈಕ್	200	40	8000
(d) ಆಟೋರಿಕ್ಷಾ	300	10	3000
(e) ಆಟೋ ರಿಕ್ಷಾ ಪಾಸಿಂಗ್	100	15	1500

ದಿನದ ಒಟ್ಟು ಕಲೆಕ್ಷನ್ 45,200 ರೂ. ತಿಂಗಳಿಗೆ 45,200 x 31=14 ಲಕ್ಷ!

ಎಮಿಷನ್ ಟೆಸ್ಟು: ಕಮಿಷನ್ ಎಷ್ಟು?

ಖತರ್‌ನಾಕ್ ಏಜಂಟರು ಇಲ್ಲೂ ನಿಮ್ಮನ್ನು ಬಿಡುವುದಿಲ್ಲ. ಎಮಿಷನ್ ಎನ್ನುತ್ತಿದ್ದಂತೆ ಕಮಿಷನ್ ಎಂದು ಬಾಯಿಬಿಡುತ್ತವೆ.

1. ಮೂನ್‌ಲೈಟ್ ಎಮಿಷನ್ ಟೆಸ್ಟ್ ಸೆಂಟರ್

ಮಾಲೀಕ: ಜಂಗಲಿ; ಕಾಂಗ್ರೆ ಪುಡಾರಿ, ಹಿಂಡಸಗೇರಿ ಹಿಂಬಾಲಕ. ಆಟೋರಿಕ್ಷಾ ಎಮಿಷನ್ ಟೆಸ್ಟ್ ಮಾಡಿಸಲು ನೂರೆಂಟು ದಾರಿಬಲ್ಲ RTO ಏಜಂಟ! ಹೊಗೆ ಎಷ್ಟು ಬಿಟ್ಟರೂ ನಡೆಯುತ್ತೆ.

2. ಭಾರತ್ ಎಮಿಷನ್ ಟೆಸ್ಟ್ ಸೆಂಟರ್

ಮಾಲೀಕ: ಶಿರಾಜ್; ಆಟೋರಿಕ್ಷಾ ಏಜಂಟ್- ನಂಬರ್ ಪ್ಲೇಟ್ ಬದಲಿಸಿ ಸರ್ಟಿಫಿಕೇಟ್ ನೀಡಬಲ್ಲ!

ಆಟೋ ಮೀಟರ್ ಮಾಫಿಯಾ: ತೂಕ ಮತ್ತು ಅಳತೆ ಮೌಲ್ಯಮಾಪನ ಕಚೇರಿಯಿಂದ ಪ್ರತಿವರ್ಷ 9 [illegible] ಸಾವಿರ ಆಟೋಗಳು ಸರ್ಟಿಫಿಕೇಟ್ ಪಡೆಯಬೇಕು. ಸರ್ಕಾರದಿಂದ ಅಧಿಕೃತ ಪರವಾನಗಿ ಪಡೆದ ರಿಪೇರಿದಾರರು [illegible] ಆಟೋ ಒಂದಕ್ಕೆ ಪಡೆಯುವುದು 300 ರಿಂದ 400 ರೂ.. ರಿಪೇರಿಗೆ 25 ರೂ ಖರ್ಚಾದರೆ, 100 ರೂ ತೂಕ [illegible] ಮತ್ತು ಅಳತೆ ಇಲಾಖೆ ಅಧಿಕಾರಿಗಳ ಜೇಬು ಸೇರುತ್ತಿದೆ.

ರಿಪೇರಿ ಮಾಡದೇ ನಕಲಿ ಸರ್ಟಿಫಿಕೇಟ್ ಪಡೆಯುವಾಶೆಯೇ? ಅದಕ್ಕೂ ಕಂತ್ರಿ ನನ್ಮಕ್ಳು ರೆಡಿಯಾಗೇ [illegible] ಕುಳಿತಿದ್ದಾರೆ. ಬಾಷಾ, ರಾಮ, ಪವಾರ, ಬಾಬು etc, etc.

ಅದಕ್ಕೇ ಅಲ್ಲವೆ ಹುಬ್ಬಳ್ಳಿ-ಧಾರವಾಡಗಳ ಆಟೋ ಮೀಟರುಗಳ ಮೇಲೆ ಜನಕ್ಕೆ ನಂಬಿಕೆ ಹೋಗಿರುವುದು?

ಜೆಡಿಎಸ್‌ಗೆ ಈಗ ಡ್ಯಾಮೇಜ್ ಗುನ್ಯಾ!


ಇಲ್ಲಿವರೆಗೆ ಭದ್ರ, ಮುಂದೆ ಜಿಲ್ಲೆಯಲ್ಲಿ ಜಯಭೇರಿ ಹೊಡೆಯುವ ಪಾರ್ಟಿ ಎನ್ನುತ್ತಿದ್ದ ಕೊಪ್ಪಳ ಜಿಲ್ಲಾ ಜಾ.ದಳದಲ್ಲಿ ಭಿನ್ನಮತ ಭುಗಿಲೆದ್ದು, ಪಾರ್ಟಿ ದಿಗಿಲಾಗಿ, ಕಾರ್ಯಕರ್ತರು ಕಂಗಾಲಾಗಿದ್ದಾರೆ. ಇದು ಜಾತ್ಯತೀತ ದಳದ ಇಬ್ಬರು ನಾಯಕರ ಜಾತಿಯ ಜಗಳದಂತೆ ಬಣ್ಣ ಪಡೆಯುತ್ತಿರುವುದು ಮಾತ್ರ ಪಾರ್ಟಿ ದೃಷ್ಟಿಯಲ್ಲಿ ಮಾರಕವೇ. ಕರಡಿ ಕುಣಿತಕ್ಕೆ ಅನ್ಸಾರಿಯ ಅಬ್ಬರ ನಿರೀಕ್ಷಿಸಿದವರಿಗೆ ನಿಜವಾಗ್ಲೂ ನಿರಾಶೆಯಾಗಿದೆ. ಇದೇ ನೆಪದಲ್ಲಿ ಕುಷ್ಟಗಿ, ಯಲಬುರ್ಗಾ, ಕನಕಗಿರಿ ಕ್ಷೇತ್ರಗಳಲ್ಲಿ ಬಿರುಕು ಮೂಡಿದ್ದು ಪಕ್ಷ ಆಂತರಿಕವಾಗಿ ಇಬ್ಭಾಗವಾಗಿದೆ. ಸ್ವತಃ ದೇವೇಗೌಡರೇ, ಮುಲಾಮು ಹಚ್ಚಿ, ಬ್ಯಾಂಡೇಜ್ ಕಟ್ಟಿದರೂ ಆಗಿರುವ ಗಾಯ ಮಾಯುವ ಲಕ್ಷಣಗಳಿಲ್ಲ.


ಇಕ್ಬಾಲ್ ಅನ್ಸಾರಿ

ಜಗಳ ತೆಗೆದದ್ದು ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ. ಜಾತಿಯಿಂದ ಲಿಂಗಾಯಿತ. ಹಿಂದೆ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದಾನೆ. ಈತನ ಟಾರ್ಗೆಟ್ ಲೇಬರ್ ಮಂತ್ರಿ ಇಕ್ಬಾಲ್‌ಅನ್ಸಾರಿ. ಆತ ಮುಸ್ಲಿಂ. ಇವರ ಜಗಳ ದಿನೇ ದಿನೇ ಪಡೆಯುತ್ತಿರುವ ಸ್ವರೂಪವು ಮಾತ್ರ ಆತಂಕಕಾರಿ. ಇದು ಕಾಂಗ್ರೆಸ್‌ನ ಖುಷಿಗೆ ಕಾರಣವಾದರೆ ಎ.ಐ.ಪಿ. ಜೆ.ಡಿ ಸಂಗಣ್ಣನ ಮೇಲೆ ಮುಗಿಬಿದ್ದಿದೆ. ಜಗಳಕ್ಕೆ ಕಾರಣ 'ಅನ್ಸಾರಿ ಪಾರ್ಟಿಯನ್ನು ಗಟ್ಟಿ ಮಾಡುತ್ತಿಲ್ಲ. ಅಭಿವೃದ್ಧಿಗೆ ಆಸಕ್ತಿ ಇಲ್ಲ. ಮತ್ತು ಎಂಟು ಜನ ಮುಸ್ಲಿಂ ಅಧಿಕಾರಿಗಳನ್ನು ಜಿಲ್ಲೆಗೆ ತಂದಿದ್ದಾರೆ. ಅದಕ್ಕೆ ನಾನು ರಾಜೀನಾಮೆ ಕೊಡುತ್ತಿದ್ದೇನೆ' ಎಂದು ಸಂಗಣ್ಣನ ದೂರು.

ಮೇ 25 ಶನಿವಾರದಂದು ಮಧ್ಯಾಹ್ನ ಒಂದು ಸುದ್ದಿ ಕೊಪ್ಪಳದ ಬೀದಿ ತುಂಬ ಓಡಾಡತೊಡಗಿತು. ಸಂಗಣ್ಣ ರಾಜೀನಾಮೆ ನೀಡಿದ್ದಾರೆ, ಅನ್ಸಾರಿ ಜೊತೆ ಜಗಳವಾಡಿದ್ದಾರೆ, ಸಿಂದೋಗಿ, ಅಳವಾಡಿ, ಗಿಣಿಗೇರಿ, ಇರಕಲ್‌ಗಡಗಳಲ್ಲಿ ರಹಸ್ಯ ಸಭೆ ಮಾಡಿ ಜುಲೈ 15ಕ್ಕೆ ಬಂಗಾರಪ್ಪನ ಸಮಾಜವಾದಿ ಪಾರ್ಟಿ ಸೇರಲಿದ್ದಾರೆ ಅಂತ ಸಂಜೆ ಊರೆಲ್ಲಾ ಇದೇ ಸುದ್ದಿ!

ಹೌದು, ಈ ಇಬ್ಬರ ನಡುವಿನ ಜಗಳಕ್ಕೆ ಕಾರಣವಾದರೂ ಏನು? ತಾ.ಪಂ., ಜಿ.ಪಂ. ಚುನಾವಣೆಯ ಟಿಕೆಟ್ ಹಂಚಿಕೆ ಮನಸ್ತಾಪ ಸ್ಫೋಟಗೊಂಡಿತಾ? ಸಂಗಣ್ಣ ಕೊಟ್ಟ ಟ್ರಾನ್ಸ್‌ಫರ್ ಲಿಸ್ಟ್‌ಗೆ ಅನ್ಸಾರಿ ಅಡ್ಡವಾದರಾ? ಅಥವಾ ಜಿಲ್ಲೆಗೆ ಬರೀ ಅನ್ಸಾರಿಯ ಆದರಲ್ಲೂ ಮುಸ್ಲಿಂ ಅಧಿಕಾರಿಗಳೇ ಬಂದರೆ ನನ್ನದೇನು ನಡೆಯೋಲ್ಲ, ನಾಲ್ಕು ರೊಕ್ಕ ಮಾಡೋದು ಹೇಗೆ? ಎಂದು ಸಂಗಣ್ಣ ಎದ್ದ ಬಂಡಾಯವಾ? ಇಲ್ಲ ನಿಗಮ ಮಂಡಳಿಗೆ ಅಮರಿಕೊಳ್ಳುವ ತಂತ್ರವಾ?


ಎಂ.ಪಿ. ಪ್ರಕಾಶ್


2004ರ ಚುನಾವಣೆಯಲ್ಲಿ ಸಂಗಣ್ಣ ಕರಡಿ ಕೊಪ್ಪಳದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ. ಮುತಾಲಿಕ್ ಬಂದು ಸಾಬರನ್ನು ಬೈದು ಹೋಗಿದ್ದರಿಂದ ಕಾಂಗ್ರೆಸ್ ಗೆಲುವಿನತ್ತ ಹೊರಟಿತ್ತು. ಇದೇ ಹೊತ್ತಿನಲ್ಲಿ ಗಂಗಾವತಿಗೆ ಹೋದ ಸಂಗಣ್ಣ ಅಲ್ಲಿ ಸ್ವಜಾತಿಯವರನ್ನು ಕರೆದು ಬಿಜೆಪಿಯ ಗಿರಿಗೌಡನನ್ನು ಗೆಲ್ಲಿಸಿ ಅಂತ ಕರೆಕೊಟ್ಟ. ಅಲ್ಲಿ ಜೆಡಿಎಸ್‌ನ ಅಭ್ಯರ್ಥಿಯಾಗಿದ್ದದ್ದು ಇಕ್ಬಾಲ್ ಅನ್ಸಾರಿ!

ಕೊಪ್ಪಳ

ಇತ್ತ ಸಂಗಣ್ಣ ಸೋತಿದ್ದರೆ, ಅತ್ತ ಅನ್ಸಾರಿ ಗೆದ್ದು ಮಿನಿಸ್ಟರ್ ಆದ. ಕೊನೆಗೆ ಸಂಗಣ್ಣ ಬಿಜೆಪಿ ತೊರೆದು ಜೆಡಿಎಸ್ ಸೇರಿ ಸಿದ್ದು ಅಹಿಂದ ಪ್ರಕರಣದಿಂದ ಹನುಮಂತಪ್ಪ ಅಂಗಡಿ ಪದಚ್ಯುತಗೊಂಡು ಸಂಗಣ್ಣ ಜಿಲ್ಲಾಧ್ಯಕ್ಷನಾದ. ಅಂದಿನಿಂದ ಮುಸು ಮುಸು ಅಂತಿದ್ದ ವೈಮನಸ್ಯ ಅನ್ಸಾರಿಯ ಗಂಗಾವತಿಗೆ ಮುಖ್ಯಮಂತ್ರಿ ಕುಮಾರಸ್ವಾಮಿ ಬರುವಾಗ ಕೊಪ್ಪಳಕ್ಕೂ ಬಂದು ಹೋಗಲೆಂದು ಸಂಗಣ್ಣ ಕೇಳಿದರೆ ಅನ್ಸಾರಿ ಅದನ್ನು ತಪ್ಪಿಸಿಬಿಟ್ಟ. ಜಿದ್ದಿಗೆ ಬಿದ್ದ ಸಂಗಣ್ಣ ತನ್ನ ಮಗಳ ಮದುವೆಗೆ ಕುಮಾರಸ್ವಾಮಿಯನ್ನು ಕರೆದು ಅನ್ಸಾರಿ ಮೇಲೆ ಸೇಡು ತೀರಿಸಿಕೊಂಡ.

ಮೊನ್ನೆ ಸಂಗಣ್ಣ ರಾಜೀನಾಮೆ ನೀಡಿದ ಕೂಡಲೇ ಮಾಜಿ ಶಾಸಕರಾದ ಕುಷ್ಟಗಿಯ ಕೆ.ಶರಣಪ್ಪ, ಯಲಬುರ್ಗಾದ ಶಿವಶರಣಪ್ಪಗೌಡ, ರುದ್ರಗೌಡ, ಮಾಜಿ ಸಚಿವ ವಿರುಪಾಕ್ಷ ಅಗಡಿ ರಾಜೀನಾಮೆ ನೀಡಲಿದ್ದಾರೆಂದು ಸುದ್ದಿ ಹಬ್ಬಿತು. ಆದರೆ ರವಿರಗೋಡ, ಮಹಾಂತೇಶ್ ಮೈನಳ್ಳಿ, ದ್ಯಾವಣ್ಣ, ಬಸವನಗೌಡ, ಮೈಲೈಕ್ ಜೀಲಾನ್, ರಾಮಣ್ಣ ಕಲ್ಲಣ್ಣನವರ್, ಕೃಷ್ಣ ಮ್ಯಾಗಳ ಮನಿಯಂತಹ ಯುವಕರು ಮಾತ್ರ ರಾಜೀನಾಮೆ ನೀಡಿದರೆ ಕುಷ್ಟಗಿ ಮಾಜಿ ಶಾಸಕ ಕೆ.ಶರಣಪ್ಪ ಅನ್ಸಾರಿ ಪರ ನಿಂತುಬಿಟ್ಟ. ಕೇವಲ ಒಂದೇ ದಿನಕ್ಕೆ ಸಂಗಣ್ಣನ ರಾಜೀನಾಮೆ ಪ್ರಹಸನ ಠುಸ್ ಆಗಲಿದೆ ಎಂಬ ವಾಸನೆ ಸಿಕ್ಕ ಕೂಡಲೇ ಜಿ.ಪಂ. ಮಾಜಿ ಸದಸ್ಯ ಮೋತಿಲಾಲ್, ನಾಗನಗೌಡ, ಶ್ರೀಶೈಲಪ್ಪ, ಹನುಮರೆಡ್ಡಿ, ಶೇಖರಪ್ಪ, ಗಿಣಿಗೇರಿ ಪಾಂಡಪ್ಪ ಅನೇಕರು ಸಂಗಣ್ಣ ರಾಜೀನಾಮೆ ವಾಪಸ್ಸು ತೆಗೆದುಕೊಳ್ಳಬೇಕು ಅಂತ 'ನೈಸ್' ಮಾಡಲಾಂಭಿಸಿದರು.

ಅನ್ಸಾರಿ ಸಚಿವನಾದಾಗ ಅದ್ಯಾರೋ ಶಾಹಿರಿ ಹೇಳಿದ್ದರು– 'ಉದಯ ರವಿಯು ತಾ ಹೊಂಗಿರಣ ಚೆಲ್ಲಲು ಬಂದಿದ್ದಾನೆ. ಗಂಗಾವತಿಗೆ ವರದಾತ, ಸಚಿವನಾಗಿ ನಿಂತಿಹನು'. ಇದೇ ನಿಜವಾಗಿ ಬಿಟ್ಟಿತು. ಗಂಗಾವತಿ ಬಿಟ್ಟರೆ ಬೇರೆಡೆ ಅಭಿವೃದ್ಧಿಯೇ ಇಲ್ಲ. ಹಿಂಬಾಲಕರ ಹಾವಳಿಯಂತೂ ಮಿತಿ ಮೀರಿದೆ. ಮಂತ್ರಿಯಾದ ಹೊಸದರಲ್ಲಿ 'ಪೊಲೀಸರು ಬಡವರ ಮೇಲೆ ದೌರ್ಜನ್ಯ ನಡೆಸಿದರೆ ಸುಮ್ಮನಿರಲ್ಲ' ಎಂದು ಅನ್ಸಾರಿ ಬಹಿರಂಗ ಎಚ್ಚರಿಕೆ ನೀಡಿದ್ದರೆ, ಆತನ ಬೆಂಬಲಿಗರೇ ಪೊಲೀಸರ ಮೇಲೆ ರುಬಾಬ್ ಮಾಡಲು ಹೊರಟರು. ತೆಗ್ಗಿನಕೇರಿಯ ಮನೆಯೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಸಿಲಿಂಡರ್‌ಗಳು ಸ್ಫೋಟಗೊಂಡ ಪ್ರಕರಣವನ್ನು ಅನ್ಸಾರಿ ಹೆಸರಲ್ಲಿ ಮುಚ್ಚಿಹಾಕಲಾಯಿತು. ಕೊಪ್ಪಳದ ಚೋಟಾ–ಮೋಟಾ ಕುಳಗಳೆಲ್ಲ ಮೈ ಅನ್ಸಾರಿಕಾ ಆದ್ಮಿ ಅಂತ ಕಚೇರಿಗಳಲ್ಲಿ ಧಮಕಿ ಹಾಕತೊಡಗಿದರು. ಮಿನಿಸ್ಟರ್ ಅನ್ಸಾರಿ ನನ್ನ ಚಿಕ್ಕಮ್ಮನ ಮಗ ಎಂದೂ ಹೇಳಿಕೊಂಡರು. ಅನ್ಸಾರಿಯಿಂದ ಹತ್ತು ಸಾವಿರ ಸಾಲ ಕೊಡಿಸುತ್ತೇನೆಂದು ಬಡ ಮುಸ್ಲಿಂ ಮಹಿಳೆಯರಿಂದ 15ರೂ.ನಂತೆ ಲಕ್ಷಾಂತರ ಸುಲಿಯುತ್ತಿದ್ದಾರೆ. ಗಂಗಾವತಿ ಬುಟ್ಟಿ ರೆಹಮಾನನ ಮಗ ಯೂಸುಫ್ ಇಂದಿಗೂ ಕೊಪ್ಪಳದ ಬಾರ್‌ಗಳಲ್ಲಿ ಕೂತು 'ನನಗೆ ಅನ್ಸಾರಿ ಗೊತ್ತು. 40 ಸಾವಿರಕ್ಕೆ ನಗರಸಭೆ ಟಿಕೆಟ್ ಕೊಡಿಸುತ್ತೇ' ಎಂದು ಸುಲಿಗೆಗೆ ಇಳಿಯುತ್ತಾನೆ. ಇನ್ನು DHO ಮುಲ್ಲಾ ತಿಂಗಳಾ ಅನ್ಸಾರಿಗೆ ಎರಡು ಲಕ್ಷ ಕೊಡಬೇಕು. ರೊಕ್ಕ ತರ್‍ರಿ, ಅಂತ ಡಾಕ್ಟರ್‌ಗಳಿಂದ ಸುಲಿಯುತ್ತಿದ್ದಾನೆ. ಆಸ್ಪತ್ರೆಗಳು ಮಾತ್ರ ರೋಗ ಪೀಡಿತವಾಗಿವೆ. ದಿನಗೂಲಿ ನೌಕರರ ಹೆಸರಲ್ಲೂ ಅವ್ಯವಹಾರ ನಡೆದಿದೆ. ಇವೆಲ್ಲ ಕೇವಲ ಸ್ಯಾಂಪಲ್‌ಗಳು. ಅನ್ಸಾರಿ ಗಮನಕ್ಕೂ ಬಂದಿದೆ. ಆದರೂ ಆತನಿಗೆ ತಿದ್ದುವ ಆಸೆ ಇಲ್ಲ.


ಸಂಗಪ್ಪ ಕರಡಿ

ಸಂಗಣ್ಣ ಕೂಡ ಕೊಪ್ಪಳಕ್ಕೆ 9 ವರ್ಷ ಶಾಸಕನಾದರೂ ಒಂದು ಬಸ್‌ಸ್ಟ್ಯಾಂಡ್ ರಿಪೇರಿ ಮಾಡಲಿಲ್ಲ. ಮದುವೆ, ಮುಂಜಿ, ಸಾವುಗಳಂತಹ ಸೆಂಟಿಮೆಂಟ್‌ಗಳೊಂದಿಗೆ ಅಟ್ಯಾಚ್ ಇಟ್ಟುಕೊಳ್ಳುವುದು ಸಂಗಣ್ಣನ ರಾಜಕೀಯ. ಬೆಳೆಯಬಹುದಾದ ಯಾರೇ ಇರಲಿ ಅವರನ್ನು ಕಟ್ ಮಾಡುವುದು ಈತನ ವಿಶೇಷತೆ. ಜೆಡಿಎಸ್‌ನ ಸೀನಿಯಾರಿಟಿ ವಿಷಯಕ್ಕೆ ಬಂದರೆ ಸಂಗಣ್ಣನದು ಲಾಸ್ಟ್ ನಂಬರ್. ಸಂಗಣ್ಣನಿಗಿಂತ ಅನ್ಸಾರಿ, ಅನ್ಸಾರಿಗಿಂತ ಅಗಡಿ, ಅಗಡಿಗಿಂತ ಎಂ.ವಿ. ಪಾಟೀಲ್, ಮಹಾಂತಯ್ಯನ ಮಠ ಸೀನಿಯರ್‌ಗಳು. ಆದರೆ ಸಂಗಣ್ಣ ಇವರನ್ನ ಯಾವುದಕ್ಕೂ ಕರೆಯೋಲ್ಲ, ಏನನ್ನೂ ಕೇಳಲ್ಲ, ವರ್ಷವಾಗುತ್ತ ಬಂದರೂ, ಪಾರ್ಟಿ ಮೀಟಿಂಗ್ ಕರೆದಿಲ್ಲ. ಇಂತಹ ಸಂದರ್ಭವನ್ನೇ ಬಳಸಿಕೊಂಡ ಭವಿಷ್ಯದ ನಾಯಕರೆಂದೆ ಬಿಂಬಿತವಾಗಿರುವ ಸಂಗಮೇಶ ಬದವಾಡಗಿ, ಹನಮಂತಪ್ಪ ಕಿನ್ನಾಳ, ಕರಡಿಗೆ ಜಾಡಿಸಿ ಬಿಟ್ಟಿದ್ದಾರೆ. ಜಾ.ದಳ ಯುವ ಘಟಕದ ಅಧ್ಯಕ್ಷ ಹನುಮಂತಪ್ಪ ಜಿಲ್ಲಾಧ್ಯಕ್ಷ ಸ್ಥಾನ ಬೇರೆಯವರಿಗೆ ಕೂಡಿ ಎಂದೇ ಗುಡುಗಿಬಿಟ್ಟಿದ್ದಾರೆ.

ಇಷ್ಟೆಲ್ಲ ಆದರೂ ಸಚಿವ ಇಕ್ಬಾಲ್ ಅನ್ಸಾರಿ ಮೌನ ಒಡೆದಿಲ್ಲ. ಇದು ಸಂಗಣ್ಣನ ಇಡೀ ಪ್ರಹಸನಕ್ಕೆ ತಣ್ಣೀರು ಹಾಕಿದಂತಾಗಿದೆ. ಜೆಡಿಎಸ್ ರಾಜ್ಯಾಧ್ಯಕ್ಷ ಎಂ.ಪಿ. ಪ್ರಕಾಶ್‌ಗೆ ಕೇಳಿದರೆ ಸಂಗಣ್ಣನ ರಾಜೀನಾಮೆ ಬಂದೇ ಇಲ್ಲ, ಹಿಂಗ್‌ಮಾಡೋದೂ ಸರಿಯಲ್ಲ, ಹೊಂದಿಕೊಂಡು ಹೋಗಬೇಕಿತ್ತು ಎಂದಿದ್ದಾರೆ. ಎಷ್ಟೇ ಆಗಲಿ ಪ್ರಕಾಶ್ ಅಡ್ಜಸ್ಟ್‌ಮೆಂಟ್ ರಾಜಕಾರಣಿ ಅಲ್ಲವೇ?

2004 ರಲ್ಲಿ ಬಿಜೆಪಿ ಸೇರಿ ತನ್ನ ರಾಜಕೀಯ ಭವಿಷ್ಯಕ್ಕೆ ಕಲ್ಲು ಹಾಕಿಕೊಂಡ ಸಂಗಣ್ಣ ಕರಡಿ ಈ ಬಾರಿ ಭಿನ್ನಮತ ಹುಟ್ಟು ಹಾಕಿ ಪಕ್ಷ ಮತ್ತು ತನ್ನ ವರ್ಚಸ್ಸಿಗೆ ಡ್ಯಾಮೇಜ್ ಮಾಡಿಕೊಂಡಿದ್ದು ಮಾತ್ರ ನಿ. ಸಧ್ಯಕ್ಕೆ ಜೆಡಿಎಸ್‌ನಲ್ಲಿ ಮೋಡ ಮುಸುಕಿದ ವಾತಾವರಣ! ತಿಳಿಯಾಗುವುದು ಎಂದೋ?

–ಹುಸೇನ್ ಪಾಷಾ

ಸರ್ಟಿಫಿಕೇಟ್ ಕೊಡೋಕೆ ಇವರ್‍ಯಾರು?

ಕೊಪ್ಪಳ ಎಕ್ಕುಟ್ಟಿ ಹೋಗುತ್ತಿದೆ. ಯಾರಿಗೂ ಅಭಿವೃದ್ಧಿಯ ಕಾಳಜಿ ಇಲ್ಲ. ಇಪ್ಪತ್ತು ಕೊಟ್ಟು ಸನ್ಮಾನ, ಐನೂರು ಕೊಟ್ಟು ಅವಾರ್ಡ್ ತೊಗೊಳ್ಳೋ ಜನಪ್ರತಿನಿಧಿಗಳು ಇಲ್ಲಿದ್ದಾರೆ. ಇಂತಹದ್ದರಲ್ಲಿ ಸುಮ್ಮನಿರಲಾಗದ ಕಾಂಗ್ರೆ ಸಂಸದ ವಿರುಪಾಕ್ಷಪ್ಪ ಜೆಡಿಎಸ್‌ನ ಸಂಗಣ್ಣ ರಾಜೀನಾಮೆ ಕೊಟ್ಟಿದ್ದು ಸ್ವಾಗತಾರ್ಹ, ಸಂಗಣ್ಣ ಸ್ವಾಭಿಮಾನಿ ಎಂದೆಲ್ಲ ಪ್ರೆಸ್‌ಮೀಟ್‌ನಲ್ಲಿ ಬಡಬಡಿಸಿಬಿಟ್ಟರು. ಇದಕ್ಕೆ ಕಾರಣವೂ ಇದೆ. ಸದರಿ ಸಂಗಣ್ಣನ ಟಾರ್ಗೆಟ್ ಆಗಿರುವ ಅನ್ಸಾರಿಗೂ ಸಂಸದ ವಿರೂಪಾಕ್ಷಪ್ಪನಿಗೂ ಈ ಹಿಂದೆ ಭಯಂಕರ ಜಗಳ ನಡೆದಿತ್ತು. ಧರಂ ಸರ್ಕಾರದಲ್ಲೂ ಸಚಿವನಾಗಿದ್ದ ಅನ್ಸಾರಿಗೆ ಒಬ್ಬೇ ಒಬ್ಬ ಅಧಿಕಾರಿಯನ್ನು ಎತ್ತಿಸಲಾಗದಂತೆ ಮಾಡಿದ್ದು ಇದೇ ಸಂಸದ. ಅದೇ ನೆಪದಿಂದ ಈಗ ಅನ್ಸಾರಿ ವಿರುದ್ಧ ಬಂಡೆದ್ದಿರುವ ಸಂಗಣ್ಣ ಸ್ವಾಭಿಮಾನಿ ಸಂಸದರ ದೃಷ್ಟಿಯಲ್ಲಿ.


ಒಂದು ಪಕ್ಷದ ಜಗಳವನ್ನು ನೋಡಿ, ಅದರಲ್ಲೂ ಒಬ್ಬರ ಪರವಾಗಿ ಮಾತನಾಡುವುದು ಸರಿಯಲ್ಲ. ಜೆಡಿಎಸ್‌ನ ಆಂತರಿಕ ವಿಷಯದಲ್ಲಿ ಕೈ ಹಾಕಬಾರದು ಎಂಬ ಪ್ರಜ್ಞೆ ಬೇಡವಾ? ಎಂದು ಜೆಡಿಎಸ್‌ನ ಕಾರ್ಯಕರ್ತರು ಎಂ.ಪಿ.ಗೆ ಬೈಯುತ್ತಿದ್ದಾರೆ. ಇದು ಕೂಡ ನಿಜಾನೆ. ಇನ್ನೊಂದು ಪಾರ್ಟಿಯವರಿಗೆ ಸರ್ಟಿಫಿಕೇಟ್ ಕೊಡೋಕೆ ಎಂ.ಪಿ ವಿರುಪಾಕ್ಷಪ್ಪ ನಡೆದಾಡೋ ಯುನಿವರ್ಸಿಟಿಯಾ?

ಡ್ರಗ್ಸ್ ದಂಧೆಯಲ್ಲಿ.....

(11 ನೇ ಪುಟದಿಂದ)

ಸಂಗೀತ್ ಎಂಬ ಇನ್ನೊಬ್ಬ ಡ್ರಗ್ ದಾಸ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮೊಮ್ಮಗ!

ಈ ಸಂಗೀತ್ ಹಾಗೂ ಸೂರ್ಯಕಾಂತ್ ಬೆಂಗಳೂರಿನ ಹೊರವಲಯಗಳಲ್ಲಿ ತಮ್ಮ ಶ್ರೀಮಂತ ಮಿತ್ರರಿಗಾಗಿ Rave party ಗಳನ್ನು ಅರೇಂಜ್ ಮಾಡುತ್ತಾ ಅಲ್ಲಿಗೆ ಸಾಕಷ್ಟು ಹುಡುಗಿಯರೂ ಹಾಗೂ ಕೊಕೇನ್ ತರಿಸಿ ಕೊಡುತ್ತಿದ್ದರು. ಸ್ಟೀವ್ ಇವರ ಮುಖ್ಯ ಸರಬರಾಜುದಾರನಾಗಿದ್ದ.



ಇಷ್ಟಲ್ಲದೆ ಲೀಲಾ ಪ್ಯಾಲೇಸ್ ಹೋಟೆಲಿನ ಆರತಿ ರೆಡ್ಡಿ ಎಂಬುವಳೂ ಸ್ಟೀವ್‌ನಿಂದ ಕೊಕೇನ್ ಖರೀದಿಸಿ ಪಾರ್ಟಿಗಳಲ್ಲಿ ಸರಬರಾಜು ಮಾಡಿದ್ದಾಳೆ. "ದೇವೇಗೌಡರ ನೆಂಟ, ಅಬಕಾರಿ ಹಣಕಾಸು ವ್ಯವಹಾರಗಳನ್ನೆಲ್ಲಾ ನಾನೇ ನೋಡಿಕೊಳ್ಳೋದು" ಎಂದು ಹೇಳಿಕೊಂಡು ತಿರುಗುತ್ತಿರುವ ಸತೀಶ್ ಎಂಬ ಇನ್ನೊಬ್ಬನಿಗೂ ಸ್ಟೀವ್ ಜೊತೆ ಡ್ರಗ್ ಸಂಪರ್ಕಗಳಿವೆ.

ಮಂತ್ರಿಯೊಬ್ಬರ ಮೊಮ್ಮಗಳು ಪವಿತ್ರ ಎಂಬಾಕೆಯ ಹೆಸರೂ ಸ್ಟೀವ್‌ನ ಪರಿಚಿತರ ಲಿಸ್ಟಿನಲ್ಲಿದೆ. ಅರ್ಜುನ್ ತಿಮ್ಮೇಗೌಡ ಜನರಿಗೆ ಚೀಪ್ ಲಿಕ್ಕರ್ ಕುಡಿಸಿ ದುಡ್ಡು ಮಾಡುತ್ತಿದ್ದರೆ ಅವರ ಮಗ ಸುರೇಶ್ ಅದೇ ದುಡ್ಡಿನಲ್ಲಿ ಸ್ಟೀವ್‌ನ ಪರಿಚಯ ಮಾಡಿಕೊಂಡಿದ್ದಾನೆ ಅಂದರೆ ವಿಸ್ಮಯ? ಕ್ರಿಕೆಟರ್ ರೋಜರ್ ಬಿನ್ನಿಯ ಮಗ ಸ್ಟೂವರ್ಟ್ ಬಿನ್ನಿಯೂ ಡ್ರಗ್ ಗಿರಾಕಿಯಾಗಿರುವ ಬಗ್ಗೆ ಪೊಲೀಸರಿಗೆ ಸಾಕ್ಷಿ ಸಿಕ್ಕಿದೆ.

ಈ ಸ್ಟೀವ್ ಅಂತರರಾಷ್ಟ್ರೀಯ ಲಿಂಕ್‌ಗಳಿರುವ ಡ್ರಗ್ ದಂಧೆಕೋರ. ಬೆಂಗಳೂರಿನ ರಿಚ್‌ಮಂಡ್ ಟೌನಿನ Homestead Service ಅಪಾರ್ಟ್‌ಮೆಂಟಿನಲ್ಲಿ ಹೆಂಡತಿಯೊಂದಿಗೆ ವಾಸವಿದ್ದ ಸ್ಟೀವ್ ತಾನಿಲ್ಲಿ ಲೆದರ್ ಗಾರ್ಮೆಂಟ್ಸ್ ಬ್ಯುಸಿನೆಸ್ ಮಾಡುತ್ತಿದ್ದೇನೆಂದು ಹೇಳಿಕೊಂಡಿದ್ದ. ಮುಂಬೈನ ಕೊಲಾಬಾದಲ್ಲಿರುವ ಸುಪ್ರೀಂ ಲೆದರ್ಸ್‌ನಿಂದ ಸರಕು ಪಡೆದು ಕೀನ್ಯಾ, ನೈಜೀರಿಯಾಗೆ ರಫ್ತು ಮಾಡುತ್ತಿದ್ದೇನೆಂದು ತೋರಿಸಿಕೊಂಡಿದ್ದ. ಬೆಂಗಳೂರಿನಲ್ಲಿ ಡ್ರಗ್ಸ್‌ಗೆ ಡಿಮ್ಯಾಂಡ್ ಚೆನ್ನಾಗಿದೆ ಎಂದು ಸ್ಟೀವ್‌ನನ್ನು ಕಳಿಸಿಕೊಟ್ಟವನು ಆಫ್ರಿಕಾದ ಆಸ್ತಾ ಎಂಬ ಇನ್ನೊಬ್ಬ ಡ್ರಗ್ ಮಾರಾಟಗಾರ.

2003ರಲ್ಲಿ ಬೆಂಗಳೂರಿಗೆ ಬಂದು ಸೆಟಲ್ ಆಗಿದ್ದ ಸ್ಟೀವ್ ಎಂ.ಜಿ. ರಸ್ತೆ, ಬ್ರಿಗೇಡ್ ರೋಡಿನ ಡಿಸ್ಕೋ ಥೆಕ್‌ಗಳಲ್ಲಿ ಮತ್ತು ಲೌಂಜ್ ಬಾರ್‌ಗಳಲ್ಲಿ ಡ್ರಗ್ ಗಿರಾಕಿಗಳನ್ನು ಹುಡುಕಿಕೊಂಡಿದ್ದಾನೆ. ಬೇರೆ ಗಿರಾಕಿಗಳನ್ನು ಆರ್.ಟಿ. ನಗರದ ಸತೀಶ, ಏರ್‌ಪೋರ್ಟ್ ರೋಡಿನ ಸುಧಾ, ಧಾರವಾಡದಲ್ಲಿ ಓದುತ್ತಿದ್ದ ಕೀನ್ಯಾದ ಸೋಫಿ ಮುಂತಾದವರು ಹುಡುಕಿ ಕೊಡುತ್ತಿದ್ದರು. ಈ ಮೇಲಿನ ವಿವರಗಳೆಲ್ಲವೂ ಸ್ಟೀವ್ ಹೇಳಿರುವುದೇನೆ. ಫೊರೆನ್ಸಿಕ್ ಲ್ಯಾಬಿನ ಡಾ. ಮಾಲಿನಿ ದಿನಾಂಕ 17.10.2005 ರಂದು ಸಿಟಿ ಪೊಲೀಸರಿಗೆ ನೀಡಿರುವ ವರದಿ ಸಂಖ್ಯೆ No. FSL/12568/174/FPS/2005 ರಲ್ಲಿ ಈ ಮಾಹಿತಿಗಳನ್ನು ಸ್ಪಷ್ಟವಾಗಿ ಖಚಿತವಾಗಿ ದಾಖಲಿಸಲಾಗಿದೆ.

ಆದರೂ ಪೊಲೀಸರು ಒಂದಿಂಚೂ ಅಲ್ಲಾಡುತ್ತಿಲ್ಲ ಏಕೆ? ಸೂರ್ಯಕಾಂತ, ಸಂಗೀತ್, ಸತೀ[illegible], ಆರತಿ ರೆಡ್ಡಿಯನ್ನು ಡ್ರಗ್ ರ್‍ಯಾಕೆಟ್‌ನಲ್ಲಿ ಭಾಗಿಯಾಗಿರುವ ಬಗ್ಗೆ ಪ್ರಶ್ನಿಸುತ್ತಿಲ್ಲ ಯಾಕೆ?

ಪೊಲೀಸರೂ 'ಡ್ರಗ್ಸ್' ಪ್ರಭಾವಕ್ಕೆ ಶರ[illegible] ದ್ದಾರಾ ಹೇಗೆ?

ಮಾನ ಉಳಿಸಿದ್ದ ಮಹಾಂತಯ್ಯನ ಮಠ!

ಇವತ್ತು ರಾಜ್ಯದಲ್ಲಿ ಸರ್ಕಾರ ನಡೆಸುತ್ತಿರುವ ಜೆಡಿಎಸ್‌ಗೆ 2004 ರ ಚುನಾವಣೆಗೆ ಕೊಪ್ಪಳದಲ್ಲಿ ಎಂತಹ ಬರಗಾಲ ಇತ್ತೆಂದರೆ ಜೆಡಿಎಸ್‌ಗೆ ಬರ್ತೀನಂತ ಹೇಳಿ ಕೈ ಕೊಟ್ಟು ಬಿಜೆಪಿ ಕ್ಯಾಂಡಿಡೇಟ್ ಆಗಿದ್ದು ಇದೇ ಸಂಗಣ್ಣ, ಕಾಂಗ್ರೆಸ್– ಬಿಜೆಪಿ ಭರ್ಜರಿಯಾಗಿ ನಾಮಪತ್ರ ಸಲ್ಲಿಸಿದ್ದರೆ ಮಾಜಿ ಸಚಿವ ವಿರೂಪಾಕ್ಷಪ್ಪ ಅಗಡಿ ಎಂಪಿಗೆ ಹೂಂ ಅಂದು ಬಿಟ್ಟರು. ಎಂ.ವಿ.ಪಾಟೀಲ್ ಎಂಎಲ್‌ಎಗೆ ಒಲ್ಲೆ ಎಂದರು. ನಾಮಪತ್ರ ಸಲ್ಲಿಕೆಗೆ ಕೊನೆಗೆ 3 ಗಂಟೆ ಉಳಿದಾಗ ಪಕ್ಷದ ಮಾನ ಉಳಿಸಲೆಂದು ಮೂಲ ನಾಯಕರಾದ ಎಂ.ಎಸ್. ಮಹಾಂತಯ್ಯನ ಮಠ ಅಭ್ಯರ್ಥಿಯಾದರು. ಆಗರ್ಭ ಶ್ರೀಮಂತರಾಗಿದ್ದು, ಸರಳವಾಗಿರುವ [illegible] ವಿವಾದ [illegible] ಮನಸ್ಸು. ನನಗೆ ಓಟು ಕೊಡದಿದ್ದರೂ ಪರವಾಗಿಲ್ಲ ಬಿಜೆಪಿಗೆ ಓಟು ಕೊಡಬೇಡಿ ಎಂದು ಕಮಲದ ಸೋಲಿಗೆ ಕಾರಣರಾದವರು ಮಹಾಂತಯ್ಯನ ಮಠರು.

[illegible]



ಕರಿಯಪ್ಪನ ಸಿರವಾರ ಕಾಂಪ್ಲೆಕ್ಸ್

ರಾಯಚೂರು ZP: ಬಿ ಕ್ವಿಕ್

ನಾಳೆ ಬೀಳಲಿದೆ ಬೀಗ!

ಹೊಸ ಗೋದ್ರೇಜ್ ಕೀಲಿ ಹತ್ತು ನಿನ್ನೆ ಕಾಣೆ ತಂದಿದ್ದಾರೆ ಜಿಲ್ಲಾ ಪಂಚಾಯತ್‌ನ ಐವತ್ತ ಜಾಗಗಳು. ನಿಮ್ಮದೇನಾದರೂ ಕೆಲಸವಿದ್ದರೆ ಬೇಗ ಇಂದೇ ಹೋಗಿ ಬನ್ನಿ.. ಏಕೆಂದರೆ ನಾಳೆ ಸಂಜೆಯೊಳಗೆ ಜಿಲ್ಲಾ ಪಂಚಾಯತ್‌ನ ಕದ ಮುಚ್ಚಿ ಬೀಗ ಜಡಿಯುವ ಸಂಭವ ಜಾಸ್ತಿ ಇದೆ.

ಹೌದು. ಇವತ್ತು ರಾಯಚೂರು ZP ಮೆಂಬರುಗಳನ್ನು, ಅಧಿಕಾರಿಗಳನ್ನು ನೋಡಿದರೆ ಮೇಲಿನಂತೆ ಅನಿಸುವುದು ಸಹಜ.. ಇದು ಜಿಲ್ಲಾ ಉಸ್ತುವಾರಿ ಸಚಿವ, ಕ್ರೀಡಾ ಸಚಿವ ಅಲ್ಕೋಡ್ ಹನುಮಂತಪ್ಪನಿಗೂ ಗೊತ್ತು, ಸಂಸದ ವೆಂಕಟೇಶ್ ನಾಯಕನಿಗೂ ಗೊತ್ತು... ಹೊಸ ಬೀಗ ಇವರೇ ಕೊಡಿಸಿದ್ದಾರೆ ಎನ್ನುವುದು ಜನರೆಲ್ಲರ ಅಭಿಮತವೂ ಹೌದು! ಇನ್ನು ಬಿಡಿ, ರಾಯಚೂರಿನ ಎಂ.ಎಲ್‌ಎ. ಪಾಪರೆಡ್ಡಿ ಬದುಕಿರುವುದೇ ಪಾಪ ಮಾಡಲೆಂದು!

ಮಲ್ಯನ ಫಂಡು ಮುಗ್ಗಿದರು ತಿಂದುಂಡು!

ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್ ಕಾರಣಕ್ಕಾಗಿ ವಿಜಯ ಮಲ್ಯನ ಹೆಸರು ಒಂದಿಷ್ಟು ಓಡಾಡಿತ್ತು ಈ ಜಿಲ್ಲೆಯಲ್ಲಿ! ಅದು ಬಿಟ್ಟರೆ ಕಿಂಗ್‌ಫಿಷರ್ ಮಲ್ಯನಿಗೂ ಈ ಜಿಲ್ಲೆಗೂ ಆದೆಲ್ಲಿಯ ಸಂಬಂಧ? ತನ್ನ ಎಂ.ಪಿ. ಫಂಡು ಖರ್ಚು ಮಾಡಲೇ ಬೇಕಲ್ಲ ಮಲ್ಯ? ಅಂತೂ ಈ ಜಿಲ್ಲೆಗೆ 18 ಲಕ್ಷ ಕೊಟ್ಟೇಬಿಟ್ಟ! 2003-04 ಸಾಲಿನಲ್ಲಿ ಬಂದ ಈ ಹಣವನ್ನು ದೇವದುರ್ಗ ಮತ್ತು ಲಿಂಗಸ್ಗೂರಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬಳಸಲಾಗುವುದೆಂದು ಘೋಷಿಸಿದರು ಜಿಲ್ಲೆಯ ರಾಜಕಾರಣಿಗಳು ಮತ್ತು ಅಧಿಕಾರಿಗಳು.

ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗದ ಭ್ರಷ್ಟಾತಿ ಭ್ರಷ್ಟ ಅಧಿಕಾರಿಗಳು ಇಲಾಖೆಯ ಪಾಲನ್ನು ಸೇರಿಸಿ 42 ಲಕ್ಷ ರೂಗಳ ಯೋಜನೆ ತಯಾರಿಸಿದರಷ್ಟೇ. ಯೋಜನೆ ಹಳ್ಳ ಹಿಡಿಯಿತು, ಅಧಿಕಾರಿಗಳು ಮಾತ್ರ ನುಂಗಿ ನೀರು ಕುಡಿದರು. ಹಳೆಯ ಬೋರ್‌ವೆಲ್‌ಗಳನ್ನು ತೋರಿಸಿ, ನಕಲಿ ಎಂ.ಬಿ.ಬುಕ್ (ಅಳತೆ ಪುಸ್ತಕ), ಬೋಗಸ್ ಬಿಲ್‌ಗಳನ್ನು ಸೃಷ್ಟಿಸಿ ವೆಂಕಟರಮಣ ಗೋವಿಂದಾ, ಗೋವಿಂದಾ ಎನ್ನುತ್ತಾ ದೇವದುರ್ಗ, ಲಿಂಗಸ್ಗೂರು ತಾಲೂಕುಗಳ ಜನರಿಗೆ 'ನೀರು ಕುಡಿಸಿಯೇ' ಬಿಟ್ಟರು.




ವೆಂಕಟೇಶ್ ನಾಯಕ್

ಇವನೊಬ್ಬ ಸೋಲಂಕಿ : ನುಂಗೊದೆಲ್ಲ ಆರಂಕಿ!

ಇವನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್. ಹೆಸರು : ಅಮೃತ್ ಸೋಲಂಕಿ; ಬಸಿರು : ವೆಂಕಟೇಶ್ ನಾಯ್ಕ! ಹೌದು ಅಮೃತ್ ಸೋಲಂಕಿಯ ಮೇಲೆ ಎಂ.ಪಿ. ವೆಂಕಟೇಶ್ ನಾಯ್ಕನ ಅಮೃತ ಹಸ್ತ ಇದ್ದೇ ಇದೆ. ಸೋಲಂಕಿ ಏನೂ ಬರೀ ಹೆಸರಿಗಷ್ಟೇ ಭ್ರಷ್ಟನಾಗುತ್ತಾನಾ? ಪರ್ಸೆಂಟೇಜು ಪ್ರವೀಣ ಎಂದೇ ಕುಖ್ಯಾತನಾಗಿರುವ ಸೋಲಂಕಿ ಹಣ ಎತ್ತುವುದು ಆರಂಕಿ ಮೊತ್ತಗಳಲ್ಲೇ (ಲಕ್ಷ ಲಕ್ಷಗಳಲ್ಲಿ)! ಜಿಲ್ಲೆಯ ಎಲ್ಲ ಪಾರ್ಟಿಯ ರಾಜಕಾರಣಿಗಳಿಗೆ ತಮ್ಮ ಪಾಲು ಸಿಕ್ಕರೆ ಸಾಕಷ್ಟೇ. ಅಲ್ಲಿಗೆ ಸೋಲಂಕಿ ಇಡೀ ಜಿಲ್ಲಾ ಪಂಚಾಯತ್‌ನ್ನು ತುಂಗಭದ್ರೆಯ ಪಾಲು ಮಾಡದಿರುತ್ತಾನೆಯೆ?

"ಸಿಎಮ್ಮು, ಮಿನಿಸ್ಟ್ರು ತಮ್ ತಮ್ ಆಫೀಸಿನ ವಾಸ್ತು ಚೇಂಜ್ ಮಾಡಿಕೊತಾರ..... ನಾ ಯಾಕ್ ಬಿಡಬೇಕು?" ಎಂದ ಸೋಲಂಕಿ ತನ್ನ ಕಚೇರಿಯ ವಾಸ್ತು ಬದಲಾಯಿಸಲು ಇಲಾಖೆಯ 14 ಲಕ್ಷ ರೂ. ಖರ್ಚು ಮಾಡಿ... [illegible]



ಇದು 'ಹೈಯರ್ ಸ್ಟಡೀಸು, ಲೋಯರ್ ಸ್ಟಡೀಸು'ಗಳೆಲ್ಲ ಕಂಪ್ಲೀಟ್ ಆಗಿದ್ದು ಈ ನತದೃಷ್ಟ ರಾಯಚೂರು ಜಿಲ್ಲೆಯಲ್ಲಿಯೇ!

ಈತನಿಗೆ ಮೊದಲಿಂದಲೂ ಹುಡುಗಿಯರ ಶೋಕಿ. ಕೆಲ ಕಿರುತೆರೆಯ ಧಾರಾವಾಹಿಗಳಲ್ಲೂ ಮುಖ ತೋರಿಸಿದ್ದಾನೆ ಈ ಚಪಲ ಚನ್ನಿಗರಾಯ! ಬೆಂಗಳೂರಿಂದ ಹುಡುಗಿಯರನ್ನು ಕರೆಸಿ, ಅವರನ್ನು ಕಿರುತೆರೆ ನಟಿಯರೆಂದು ಬಿಂಬಿಸುತ್ತಲೇ ಲಾಡ್ಜ್ ರೂಮಿನ ಕದ ತೆರೆದವನು ಇದೇ ಸೋಲಂಕಿಯೇ. ಜಿಲ್ಲಾ ಪಂಚಾಯತ್ ದುಡ್ಡು ಎತ್ತಿ ಮಜಾ ಉಡಾಯಿಸುವ ಈ ಭ್ರಷ್ಟ ಶೋಕಿ ಲಾಲನಿಗೆ ಸಂಸದ ವೆಂಕಟೇಶ್ ನಾಯ್ಕ, ಮತ್ತವನ ಮಗನ ಫುಲ್ ಸಪೋರ್ಟು!

ಭ್ರಷ್ಟರ ತನಿಖೆಗೆ ಭ್ರಷ್ಟರೇ...!

ಜಿಲ್ಲಾ ಪಂಚಾಯತ್‌ನ್ನೇ ಗುಡಿಸಿ ಗುಂಡಾರ ಹಾಕಿದ್ದ ಭ್ರಷ್ಟರ ತನಿಖೆಗೆ ಇದೇ ಇಲಾಖೆಗೆ ಸೇರಿದ ಅಧಿಕಾರಿಗಳ ತಂಡಗಳನ್ನು ರಚಿಸಲಾಗಿತ್ತು, ಪ್ರಕರಣವನ್ನು ಸಿ.ಒ.ಡಿ.ಗೂ ಒಪ್ಪಿಸಲಾಗಿತ್ತು, ಅಷ್ಟೇ ಕ್ವಿಕ್ ಆಗಿ ವಾಪಸ್ ಪಡೆಯಲಾಯ್ತು! ಅಂತೂ ಕೊನೆಗೆ ಸೋಲಂಕಿ ಸೇರಿದಂತೆ 18 ಅಧಿಕಾರಿಗಳನ್ನು ಅಮಾನತ್ತು ಮಾಡುವ ಡ್ರಾಮಾವೂ ಜರುಗಿ ಹೋಗಿತ್ತು.

ತನಿಖಾ ತಂಡದಲ್ಲಿದ್ದ ಭ್ರಷ್ಟ ಅಧಿಕಾರಿಗಳು ಮುಂದೆ ತನಿಖೆಗೊಳಗಾಗಿ ಅಮಾನತ್ತುಗೊಂಡಾಗ ಇಡೀ ರಾಯಚೂರೇ ನಕ್ಕಿತ್ತು; ರಾಜಕಾರಣಿ-ಅಧಿಕಾರಿಗಳ ಕೊಳಕು ರಿಲೇಷನ್ನು ನೋಡಿ ನಾಚಿ ಹೋಗಿತ್ತು.

ಹಿಂದಿನ ಐದು ವರ್ಷಗಳ 112 ಬಿಲ್‌ಗಳ ಕುರಿತು ತನಿಖೆ ಮಾಡಬೇಕೆಂದು ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಾಧಿಕಾರಿ ಆದಿತ್ಯ ಅಮ್ಲನ್ ಬಿಸ್ವಾಸ್‌ನನ್ನು ಕೋರಿದ್ದು ಇಂಜಿನಿಯರ್ ಆಗಿದ್ದ ಕೆ.ಎ. ಆದೋನಿ! ಜನ 'ಭಪ್ಪರೆ ಆದೋನಿ' ಎಂದು ಖುಷಿಗೊಂಡಿದ್ದರು. ಆದರೆ ಈ ಆದೋನಿ ಎಂಬ ಅದ್ವಾನದ ಗಿರಾಕಿ ಇಲಾಖಾ ಯೋಜನೆಗಳಿಗೆ ಬಿಡುಗಡೆ ಮಾಡಿದ್ದ 12 ಲಕ್ಷ ರೂ. ಗಳನ್ನು ಸ್ವಂತಕ್ಕೆ ಬಳಸಿಕೊಂಡಿದ್ದಕ್ಕೆ ಸಸ್ಪೆಂಡಾಗಿ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದಾನೆ. ಇಂಜಿನಿಯರಿಂಗ್ ವಿಭಾಗದ E.E ಆಗಿರುವ ದೇಸಾಯಿ ಎಂಬುವನೂ ಅಮಾನತ್ತಾಗಿದ್ದ. ಇವನು ಸೋಲಂಕಿಯ ಸಂಬಂಧಿ ಆಗಿದ್ದರಿಂದ ಭ್ರಷ್ಟಾಚಾರದ ಪಾಠಗಳನ್ನು ಉಚಿತವಾಗಿಯೇ ಕಲಿತಿದ್ದಾನೆ.

ಕೋಟಿ ವೀರ ಕರಿಯಪ್ಪ!

ಇಂಜಿನಿಯರಿಂಗ್ ವಿಭಾಗದ A.E, E.E ಗಳು ಕಷ್ಟ ಪಟ್ಟು ಹಣ ಸಂಗ್ರಹಿಸುತ್ತಿರುವಾಗ J.E ಕರಿಯಪ್ಪ ಪಿಳಿ ಪಿಳಿ ಕಣ್ಣು ಬಿಡ್ತಾ ಬಿಳಿಹಣದ ಮೇಲೆ ಜೀವನ ಸಾಗಿಸುವುದು ಸಾಧ್ಯವೇ? ಕಡುಬಡವರ ಮನೆಯಲ್ಲಿ ಹುಟ್ಟಿದ ಕರಿಯಪ್ಪನಿಂದು 'ಕೋಟಿ' ವೀರ! ಡಿಪ್ಲೊಮಾ ಸಿವಿಲ್ ಇಂಜನಿಯರಿಂಗ್ ಕಲಿಯುವಾಗಲೇ ಸಿಮೆಂಟು, ಕಲ್ಲು, ಮರಳುಗಳನ್ನು ತಿಂದು ಡೈಜೆಸ್ಟ್ ಮಾಡಿಕೊಳ್ಳುವ ತಾಕತ್ತು ರೂಢಿಸಿಕೊಂಡೇ ಬಿಟ್ಟಿದ್ದ ಕರಿಯಪ್ಪ ಜಿ.ಪಂ. ಹೊಕ್ಕಾಗಿನಿಂದ ತಿನ್ನುತ್ತಲೇ ಕೊಬ್ಬುತ್ತಿದ್ದಾನೆ. ಸಿಮೆಂಟು ನುಂಗುತ್ತಲೇ ಕೋಟಿ ವೆಚ್ಚದ ಕೋಟೆಯಂತಹ ಬಂಗಲೆ ಎಬ್ಬಿಸಿದ್ದಾನೆ.



ಅಲ್ಕೋಡ್ ಹನುಮಂತಪ್ಪ

ಯು.ಕೆ.ಪಿ. ಯೋಜನೆಯಲ್ಲಿ ಗುತ್ತಿಗೆ ಆಧಾರದ ನೌಕರನಾಗಿ ಸುತ್ತಿಗೆ ಹಿಡಿದೇ ಎಂಟ್ರಿ ಕೊಟ್ಟ ಕರಿಯಪ್ಪ ಯೋಜನೆಗಳಿಗೆ ಮೊಳೆ ಹೊಡೆಯುತ್ತ ಫಂಡ್ ನುಂಗುವ ಫಂಡೇಶ್ವರನಾಗಿ ಹೋದ. 90 ರ ಸುಮಾರಿಗೆ ಮಾನ್ವಿಯ ಜಿ.ಪಂ. ಇಂಜನಿಯರಿಂಗ್ ಉಪ ವಿಭಾಗಕ್ಕೆ J.Eಯಾಗಿ ಬಂದ. ಕಣ್ಮುಚ್ಚಿ ತೆಗೆಯುವುದರೊಳಗೆ ಸಿರವಾರದಲ್ಲಿ ಮತ್ತು ಮಾನ್ವಿಯ ಬಸ್ ಡಿಪೋ ಪಕ್ಕದಲ್ಲಿ ಲಕ್ಷಗಟ್ಟಲೆ ಬೆಲೆ ಬಾಳುವ ಬೇನಾಮಿ ವಾಣಿಜ್ಯ ಸಂಕೀರ್ಣಗಳನ್ನು ಎಬ್ಬಿಸಿಬಿಟ್ಟ ಈ ಸಿವಿಲ್ ಇಂಜನಿಯರ್ ಎಂಬ ಡೆವಿಲ್! ಇವೆರಡೂ ಕಾಂಪ್ಲೆಕ್ಸ್‌ಗಳಿಂದ ಏನೆಂದರೂ ಮಂತ್ಲಿ ಮಿನಿಮಮ್ 50 ಸಾವಿರ ಕಲೆಕ್ಷ್ ಆಗುತ್ತದೆ. ಸಿರವಾರದ ಕಾಂಪ್ಲೆಕ್ಸ್‌ನ್ನು ಹೆಣ್ಣು ಕೊಟ್ಟ ಮಾವನ ಹೆಸರಲ್ಲಿ ನಿರ್ಮಿಸಿದ್ದ ಕರಿಯಪ್ಪನಿಗೆ ಮಾವನೇ ಶಾಕ್ ಕೊಟ್ಟಿದ್ದ. ರಾತ್ರೋರಾತ್ರಿ ಕಾಂಪ್ಲೆಕ್ಸ್ ಮಾರಿಕೊಂಡ ಮಾವ ಕರಿಯಪ್ಪನಿಗೆ ಸಂಕಟ ಉಂಟು ಮಾಡಿಬಿಟ್ಟಿದ್ದ. "ಹಡಬೆ ದುಡ್ಡಿನಿಂದ ಗಳಿಸಿದ ಆಸ್ತಿಗಳು ಬೇರೆಯವರ ಪಾಲಾಗಬಾರದು" ಎಂದೇ ನಂಬಿರುವ ಕರಿಯಪ್ಪ ಮತ್ತೆ ಆ ಆಸ್ತಿ ಖರೀದಿಸಿಬಿಟ್ಟ.



ಜಿಲ್ಲಾಧಿಕಾರಿ ತುಷಾರ್ ಗಿರಿನಾಥ್

ಸುಮಾರು ಒಂದೂವರೆ ದಶಕಗಳ ಕಾಲ ಮಾನ್ವಿಯಲ್ಲೇ ಠಿಕಾಣಿ ಹೂಡಿ ಪಂಚಾಯತ್ ಇಲಾಖೆಯನ್ನು ಹೇಳ ಹೆಸರಿಲ್ಲದಂತೆ ಮಾಡಿದ ಕರಿಯಪ್ಪ, ಯಾವಾಗ ಜಿ.ಪಂ. ಫಂಡುಗಳು ಗ್ರಾ.ಪಂ.ಗಳಿಗೆ ವರ್ಗಾವಣೆ ಆಗತೊಡಗಿದವೋ ಆಗ ಫುಲ್ ಕಂಗಾಲಾಗಿ ಹೋಗಿಬಿಟ್ಟ. ಆದೇನು ಗಮ್ಮತ್ತು ಮಾಡಿದನೋ ಏನೋ, ಥಟ್ಟಂತ ರಾಯಚೂರಿನ PWDಯನ್ನು ಹೊಕ್ಕು ಕುಳಿತಿದ್ದಾನೆ. ಸುಮ್ಮನೆ ಕೂಡುವುದಂತೂ ಕರಿಯಪ್ಪನ ಕೈಲಾಗದ ಕೆಲಸ. 'ಕಾಯಕವೇ ಕೈಲಾಸ' ಎಂದು ಸರ್ಕಾರಿ ದಾಸೋಹದಲ್ಲಿ ಮೇಯುತ್ತಲೇ ಮಾನಗೇಡಿ ಬದುಕು ಸಾಗಿಸುತ್ತಿದ್ದಾನೆ.

'ಅವಿವೇಕಿ' ಬಿಸ್ವಾಸ್

ಮಾಜಿ ಗ್ರಾಮೀಣ ನೀರು ಪೂರೈಕೆ ಸಚಿವ [illegible] ಜಿ.ಪಂ. ಸಭೆಯಲ್ಲೇ ಅಂದಿನ ಸಿ.ಇ.ಒ. ಆದಿತ್ಯ ಅಮ್ಲನ್ ಬಿಸ್ವಾಸ್‌ನನ್ನು 'ಅವಿವೇ[ಕಿ]' ಎಂದಿದ್ದಾಗ, ಚಾಯಿತಕ್ಕಿ 'ಥ್ಯಾಂಕ್ಯೂ ಸರ್' ಎಂದ[ು] ಹೇಳಿದ್ದ ಬಿಸ್ವಾಸ್ ಈಗ ರಾಯಚೂರು ಜಿ.ಪ[ಂ.] ಟ್ರೆಜರಿಯನ್ನು ಎಂಪ್ಟಿ ಮಾಡಿ, ವರ್ಗ ಆಗಿ ಹೋಗಿದ್ದ[ಾನೆ]. ಬಿಸ್ವಾಸ್ ಅವಧಿಯ ತುಂಬಾ ಹಗರಣಗಳದ್ದೇ ಕ[…] ಬಾರು. ಸದಾ ಲ್ಯಾಪ್‌ಟಾಪ್ ಹಿಡಿದು ತಿರುಗುತ್ತಿ[ದ್ದ] ಬಿಸ್ವಾಸ್ ಎಂಬ ಆ ವಿಶ್ವಾಸಗೇಡಿ, ಗ್ರಾ.ಪಂ.ಗಳಿ[ಗೆ] ಕಂಪ್ಯೂಟರ್‌ಗಳನ್ನು ಪೂರೈಸುವಾಗಲೂ ಗೋಲ್‌ಮಾ[ಲ್] ಮಾಡಿದ್ದ, ಕಂಪ್ಯೂಟರ್‌ಗಳಿಗೆ ಮೂರುಪಟ್ಟು ಬಿ[ಲ್] ಹಾಕಿ ಸಹಿ ಜಡಿದು, ತನ್ನ ಪಾಲು ಎತ್ತಿಕೊಂಡು '[…] ಬೈ ರಾಯಚೂರ್' ಎಂದು ಬಿಸ್ವಾಸ್ ಓಡಿಹೋಗಿದ್ದ[ಾನೆ]. ಜಿಲ್ಲಾ ಉಸ್ತುವಾರಿ ಸಚಿವ ಅಲ್ಕೋಡ್‌ಗೂ ಬಿಸ್ವಾ[ಸ್] ಕಂಡರಾಗುತ್ತಿರಲಿಲ್ಲ, ಇನ್ನು ಜಿಲ್ಲಾಧಿಕಾರಿ ತುಷಾ[ರ್] ಗಿರಿನಾಥ್‌ಗೆ ನಿದ್ದೆಯೊಂದೇ ಕೆಲಸ!


ಅನಾಥ ಜಿ.ಪಂ. ಲಾಕ್ ಔಟ್?

ಆರ್ಥಿಕ ನಷ್ಟದೊಂದಿಗೆ ರಾಜಕೀಯ ವೈರುಧ್ಯಗಳ ಕಾಟವೂ ಸೇರಿ ಇವತ್ತು ಜಿ.ಪಂ. ಅನಾಥವಾಗಿ ಹೋಗಿದೆ. ಜಿ.ಪಂ. ಅಧ್ಯಕ್ಷ, ಉಪಾಧ್ಯಕ್ಷರು ಎಂ.ಪಿ. ನಾಯ್ಕ, ಶಾಸಕ ಬೋಸರಾಜು, ಕೇಂದ್ರದ ಮಾಜಿ ಮಂತ್ರಿ ಅನ್ವರಿಯ ಕೈಗೊಂಬೆಗಳಾಗಿ ಪಂಚಾಯತ್ ರಾಜ್‌ಗೇ ದ್ರೋಹ ಬಗೆಯುತ್ತಿದ್ದಾರೆ. ಹಲವು ತಿಂಗಳುಗಳಿಂದ ಜಿ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆ ಸೇರಿದಂತೆ ನೂರಾರು ಹುದ್ದೆಗಳು ಖಾಲಿ ಬಿದ್ದಿವೆ. ಡಿವೈಎಸ್ಪಿ ತಹಶೀಲ್ದಾರ್, ಬಿ.ಇ.ಒ.ಗಳು ಎರಡು ದಿನಕ್ಕೊಮ್ಮೆ ಬದಲಾಗುತ್ತಿದ್ದಾರೆ. ಭ್ರಷ್ಟತೆಯ ಭದ್ರಕೋಟೆಯಾಗಿರುವ ಜಿ.ಪಂ. ಇಂಜನಿಯರಿಂಗ್ ವಿಭಾಗಕ್ಕೂ ಪ್ರಭಾರಿ ಇ.ಇ.ನೇ ದೊರೆ. ಪುಢಾರಿಗಳ ಕಾಟ ತಾಳಲಾರದೇ ತನ್ನನ್ನು ಅಮಾನತ್ತು ಮಾಡಿದರೆ ಒಳ್ಳೇದು ಎಂಬ ಸ್ಥಿತಿ ತಲುಪಿದ್ದಾನೆ ಪ್ರಭಾರಿ ಇ.ಇ!

ಜಿಲ್ಲೆಯ ಮೂವರು ಜೆಡಿಎಸ್ ಶಾಸಕರಾದ ಸಚಿವ ಅಲ್ಕೋಡ್, ಮಾಜಿ ಸಚಿವ ಮುನಿಯಪ್ಪ ಮುದ[್ದಪ್ಪ] ಮತ್ತು ಇನ್ನೊಬ್ಬ ಮಾಜಿ ಸಚಿವ ಅಮರೇಗೌ[ಡ] ಬಯ್ಯಾಪುರಗಳು 'ಪ್ರಸಾದ' ಸ್ವೀಕರಿಸುತ್ತ ತಮಗೆ ಬೇಕಾ[ದ] ಅಧಿಕಾರಿಗಳನ್ನು ತಂದುಕೊಳ್ಳಲು ಪೈಪೋಟಿಗೆ ಬಿದ್ದಿ[ರು]ವುದರಿಂದ ಬಹುತೇಕ ಇಲಾಖೆಗಳು ಅಧ್ವಾನವಾಗುತ್ತಿ[ವೆ].

ಉದ್ಯೋಗ ಖಾತ್ರಿ ಯೋಜನೆಯ ಉಸ್ತುವಾರಿ ಕೆಲಸಗೇಡಿ ಅಧಿಕಾರಿಗಳ ಕೈಗೆ ಸಿಕ್ಕಿ ಎಕ್ಕಾ ಎದ್ದು ಹೋಗಿದೆ. ಇಲ್ಲಿಯ ಕೃಷಿ ಕಾರ್ಮಿಕರು ನಿತ್ಯ ಗುಳೆ ಹೋಗುತ್ತಲೇ ಇದ್ದಾರೆ. ದುಡ್ಡಿಲ್ಲದೇ ಪಾಪರ್ ಆಗಿ ಹೋಗಿರುವ ರಾಯಚೂರು ಜಿ.ಪಂ.ನ [..] ಶಟರ್ ಎಳೆದು, ಬಾಗಿಲು ಮುಚ್ಚಿ, ಬೀಗ ಜಡಿಯುವ ಎಲ್ಲ ಲಕ್ಷಣಗಳೂ ಗೋಚರಿಸತೊಡಗಿವೆ. ಏನಾದರೂ ಕೆಲಸ ಇದೆಯೋ? ಬಿ ಕ್ವಿಕ್!

–ನೀಮಕ[…]



-ಟ್ರಿವಿಲಿಯನ್

ಹಂಪಿಯನ್ನು ದಕ್ಷಿಣ ಭಾರತದ ಅಯೋಧ್ಯೆ ಮಾಡುವ ಹುನ್ನಾರ!

ಕರ್ನಾಟಕದ ಮತೀಯ ಸಾಮರಸ್ಯದ ತಾಣಗಳಲ್ಲಿ ರ್ಥನೆ ಮತ್ತ ಪೂಜೆ ಸಲ್ಲಿಸುವ ವಿಷಯಗಳನ್ನೇ ವಾದ ಮಾಡುವ ವ್ಯವಸ್ಥಿತ ಕಾರ್ಯಸೂಚಿಯನ್ನು ಘ ಪರಿವಾರ ಹೊಂದಿದೆ. ಈ ವಿವಾದಗಳಿಂದ ರಲ್ಲಿ ಮತೀಯ ಅಮಲು ತುಂಬ ಜನತೆಯನ್ನು ಸ್ಕೃತಿಕವಾಗಿ ವಿಭಜಿಸಿ. ಲಾಭ ಪಡೆಯುವ ವಿಚಾರ ಕ್ಕಿದೆ. ಗೋರಿಗಳ ಕೆದಕಿ ಜನಗಳ ಬದುಕನ್ನೇ ರಿ ಮಾಡುವುದೇ ಅವರ ಚಿಂತನಗಂಗಾ ಚಿಂತನೆ. ಗಿನ ಹಂಪಿಯ ವಿವಾದವನ್ನೇ ತೆಗೆದುಕೊಳ್ಳಿ, ಅದು ರ ಅವಸರದ ನಿರ್ಣಯವಂತೂ ಅಲ್ಲ, ಕಳೆದ ತ್ತು ವರ್ಷಗಳಿಂದ ವ್ಯವಸ್ಥಿತವಾಗಿ ಇಂಥ ವಿವಾದ ಟ್ಟಿಸುವುದಕ್ಕೆ ಶ್ರಮ ಹಾಕಿದ್ದಾರೆ ಎನ್ನುವುದಕ್ಕೆ ಹಲವು ಕ್ಷಿಗಳಿವೆ.

ಅವರ ಅಜೆಂಡಾದಲ್ಲಿ ಹಂಪಿ ಅತ್ಯಂತ ಅನುಕೂಲ ಜಾಗ. ಭಜರಂಗದಳ ಎಂಬ ವಾನರ ಸೇನೆಯನ್ನು ಕೊಂಡಿರುವ ಸಂಘ ಪರಿವಾರ ಹಂಪಿಯ ಕಿಷ್ಕಿಂದಾ ದೇಶ ವಾನರ ಮೂಲ ಜಾಗವೆಂದು ನಂಬಿಕೊಂಡಿದೆ. ರಾಣಗಳನ್ನೇ ಸಾಕ್ಷಿಪ್ರಜ್ಞೆಯಾಗಿಟ್ಟುಕೊಂಡಿದೆ. ಈ ಗೆಯಲ್ಲೇ ಭಜರಂಗದಳ ಸಂಘಟನೆಯನ್ನು ಪ್ರಬಲ ಗಿ ಬೆಳೆಸುವ ಪ್ರಯತ್ನಗಳನ್ನು ಅದು ನಡೆಸಿದೆ. ಪಿಯನ್ನು ದೀಕ್ಷಾಸ್ಥಳವನ್ನಾಗಿ ಮಾಡಿಕೊಂಡಿರುವ ಘ ಪರಿವಾರ ಕಳೆದ ದಶಕದಲ್ಲಿ ಉಮಾಭಾರತಿ, ೋಹನ ಭಾಗವತ್‌ರನ್ನು ಕರೆಯಿಸಿ ಕಾರ್ಯಕರ್ತರಿಗೆ ಪದೇಶ ಕೊಡಿಸಿದೆ. ಆರ್‌ಎಸ್‌ಎಸ್‌ನ ಬೈಠಕ್ ಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಂಘ ಪರಿವಾರದ ರುವಾಗಿರುವ ಉಡುಪಿಯ ಪೇಜಾವರರಿಗೆ ಇದು ಕಾದ ಸ್ಥಳ. ಹೀಗಾಗಿ ಈ ಸಾಮರಸ್ಯ ನೆಲೆಯನ್ನು ಮಿಸಿಕೊಳ್ಳಲೆಂದು ಅನೇಕ ವಿಧವಾಗಿ ಚಿಂತಿಸಿ ನೆಗೆ ಈ ದರ್ಗಾ ವಿವಾದವನ್ನು ಸೃಷ್ಟಿಸಿದ್ದಾರೆ. ರಂಜನೀಯ ಕಥೆಗಳನ್ನು ಕಟ್ಟಿ ಜನಗಳ ಮಾನಸಿಕ ಸ್ಥ ಕದಡುವ ಅವರಿಗೆ ಹಂಪಿಯನ್ನೇ ದಕ್ಷಿಣ ರತದ ಅಯೋಧ್ಯೆಯನ್ನಾಗಿ ಮಾಡಿಕೊಳ್ಳುವ ಚಾರವಿದೆ.


ಇತಿಹಾಸದ ಗರ್ಭದಿಂದಲೇ ಪಾಠ ಕಲಿತಿರುವ ಪಿ ಜನ ಇಂಥ ದ್ವೇಷ ಬಿತ್ತುವ ಕುಹಕತನಗಳಿಗೆ ಯಾಗಿ ಉತ್ತರಿಸುವುದಂತೂ ನಿಶ್ಚಿತ. ಸ್ನೇಹಕ್ಕಿಂತ ಷವನ್ನು ಅಸ್ತ್ರ ಮಾಡಿಕೊಂಡವರಿಗೆ ತಕ್ಕ ಪಾಠ ಸುವ ಕಾಲ ಸನ್ನಿಹಿತವಾಗಿದೆ.

ಹಂಪಿ: ಉರುಸು ತಡೆಯಲು ಹೋದ ಚೆಡ್ಡಿಗಳು ಬಾಲ ಸುಟ್ಟುಕೊಂಡದ್ದು...

ಬಾಬಾ ಬುಡನಗಿರಿಯಲ್ಲಿ ದತ್ತಮಾಲಾ ಅಭಿಯಾನ ನಡೆಸಲು ಸಾವಿರಾರು ಸಂಘಿಗಳನ್ನು ಗುಡ್ಡೆ ಹಾಕಲಾಗುತ್ತಿದೆ ಎಂದು ಭಜರಂಗದಳದ ರಾಜ್ಯ ಸಂಚಾಲಕ ಮಹೇಂದ್ರ ಕುಮಾರ್ ಹೋದಲ್ಲಿ ಬಂದಲ್ಲೆಲ್ಲಾ ಡಂಗೂರ ಸಾರಿಕೊಂಡು ಹೋಗುತ್ತಿದ್ದರೆ ಇತ್ತ ಹಂಪಿಯ ಹೊಳೆ ಹೊನ್ನೂರು ಸ್ವಾಮಿ ಉರುಸನ್ನು ತಡೆಯುವ ವಿಫಲಯತ್ನ ನಡೆಸಿದ ಭಜರಂಗಿ ಪಡೆ ಪೊಲೀಸರ ಸಕಾಲಿಕ ಮಧ್ಯಪ್ರವೇಶದಿಂದ ಬಾಲ ಸುಟ್ಟುಕೊಂಡ ವಿದ್ಯಮಾನ ನಡೆದಿದೆ.



ಹಂಪಿಯಲ್ಲಿರುವ ದರ್ಗಾ



ಈರಣ್ಣ ದೇವಾಲಯ

ಹೊನ್ನೂರವಲಿ ಉರುಸ್‌ಗೆ ಮುನ್ನವೇ ಉರುಸ್ಸನ್ನು ತಡೆಯಬೇಕೆಂದು ಹೇಳಿಕೆ ನೀಡಿದ್ದ 'ಹಂಪಿ ಉಳಿಸಿ ಆಂದೋಲನ ಸಮಿತಿ' ಕೊನೆಗೆ ತಾನೇ ನೇರವಾಗಿ ತಡೆಯುವ ಬೆದರಿಕೆಯನ್ನು ಹಾಕಿತ್ತು. ಉರುಸ್ ಸಿದ್ಧತೆಗಳು ಎಂದಿನಂತೆ ನಡೆದವು. ಪೊಲೀಸರು ಚೆಡ್ಡಿಗಳ ಹೇಳಿಕೆಯನ್ನು ಗಂಭೀರವಾಗಿಯೇ ಪರಿಗಣಿಸಿ ಸಜ್ಜಾಗಿದ್ದರು. ಅಂದು 26 ರಂದು ಸುಮಾರು 20 ಟಾಟಾ ಸುಮೋಗಳಲ್ಲಿ ಕೇಸರಿ ಶಾಲು ಭಗವಾಧ್ವಜಗಳನ್ನು ಹಿಡಿದುಕೊಂಡು ಬಂದ ಭಜರಂಗಿ ಪುಂಡರ ಪಡೆ ಒಂದೆಡೆ ಸೇರಿ 'ಈರಣ್ಣ' ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ನಾವು ಕ್ಷೀರಾಭಿಷೇಕ ಮಾಡಿ ಬರುತ್ತೇವೆ ಎಂದು ಹೊರಟಿತು.

ಈ ಭಜರಂಗಿ ಪಡೆಯನ್ನು ಅಲ್ಲಿಯೇ ತಡೆದ ಪೊಲೀಸರು ಉರುಸ್ ನಡೆಯುವ ದಿನ ಪೂಜೆಗೆ ಅವಕಾಶ ಕೊಡುವುದಿಲ್ಲ ಎಂದರು. ಏನಾದರೂ ಮಾಡಿ ನುಗ್ಗಲೇಬೇಕೆಂಬ ಉಮೇದಿಯಲ್ಲಿದ್ದ ಭಜರಂಗಿ ಪಡೆ ಕೊನೆಗೆ 50 ಜನರನ್ನು ಬಿಡಿ, ಶಾಂತಿಯುತವಾಗಿ ಕ್ಷೀರಾಭಿಷೇಕ ಮಾಡಿಬರುತ್ತೇವೆ ಎಂದು ಕೇಳಿಕೊಂಡಿತು. ಪೊಲೀಸರು ಜಪ್ಪಯ್ಯ ಅನ್ನದೇ ನಾಳೆ ಬೇಕಾದರೆ ಪೂಜೆ ಮಾಡಿ ಇವತ್ತು ಯಾವ ಕಾರಣಕ್ಕೂ ಬಿಡೋಲ್ಲ ಎಂದು ತಡೆದಿದ್ದಾರೆ. ವಿಹಿಂಪ ಜಿಲ್ಲಾ ಸಂಚಾಲಕನೆಂದು ಹೇಳಿ ಕೊಳ್ಳುವ ಅನಿಲ್ ಜೋಷಿ, ಬಿಜೆಪಿ ಕೌನ್ಸಿಲರ್ ಗುದ್ದಲಿ ಪರಶುರಾಮ, ರಾಜಾ ಅಚ್ಯುತ್ತ ದೇವರಾಯುಲು ಮುಂತಾದವರು ಪೊಲೀಸರೊಂದಿಗೆ ಮುಖಾಮುಖಿ ಮಾತಿನ ಘರ್ಷಣೆಗಿಳಿದಿದ್ದಾರೆ. ಎಸ್ಪೀ ಪಂಕಜ್‌ಕುಮಾರ್ ಠಾಕೂರ್, ಅಡಿಷನಲ್ ಎಸ್ಪೀ ರಾಜಪ್ಪ ಮತ್ತವರ ತಂಡ ಇದಾವುದಕ್ಕೂ ಸೊಪ್ಪು ಹಾಕದೆ ಭಜರಂಗಿಗಳನ್ನು ಸುತ್ತುವರಿದು ಬಂಧಿಸಿದ್ದಾರೆ. ಅಲ್ಲಲ್ಲಿ ತಪ್ಪಿಸಿಕೊಂಡು ತಿರುಗುತ್ತಿದ್ದ ಪುಂಡ ಚೆಡ್ಡಿ ಪಡೆ ತಮ್ಮ ನಾಯಕರನ್ನು ಬಿಡುಗಡೆ ಮಾಡಬೇಕೆಂದು ಕೂಗುತ್ತಾ ಅಂಗಡಿ ಮುಂಗಟ್ಟುಗಳನ್ನು ಬಲವಂತವಾಗಿ ಮುಚ್ಚಿಸಿ ಗಲಭೆ ಎಬ್ಬಿಸಿದೆ. ಪರಿಸ್ಥಿತಿ ನಿಯಂತ್ರಣ ತಪ್ಪುತ್ತಿದೆಯೆಂದರಿತ ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಉದ್ರಿಕ್ತ ಗುಂಪು ಪೊಲೀಸರತ್ತಲೂ ಕಲ್ಲು ಬೀಸಲು ಆರಂಭಿಸುತ್ತಿದ್ದಂತೆ ಪೊಲೀಸರು ಅಶ್ರುವಾಯು ಸೆಲ್‌ಗಳನ್ನು ಸಿಡಿಸಿದ್ದಾರೆ. ಗಲಭೆಗೆ ಪ್ರಚೋದನೆ ನೀಡುತ್ತಿದ್ದವರನ್ನು ಪೊಲೀಸರು ಠಾಣೆಗೆ ಎಳೆದುತಂದು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ.

ಪೊಲೀಸರು ಭಜರಂಗಿ ಪಡೆಯನ್ನು ಯಶಸ್ವಿಯಾಗಿ ನಿರ್ಬಂಧಿಸಿದ್ದರಿಂದ ಹೊನ್ನೂರವಲಿ ಉರುಸ್ ಯಾವ ಅಡೆತಡೆಯೂ ಇಲ್ಲದೇ ನಡೆದಿದೆ. ಪೊಲೀಸರು ಸಕಾಲಿಕವಾಗಿ ಮಧ್ಯ ಪ್ರವೇಶ ಮಾಡಿ ಇಡೀ ವಿದ್ಯಾಮಾನವನ್ನು ನಿರ್ವಹಿಸಿರುವುದರ ಬಗ್ಗೆ ಇಲ್ಲಿನ ಪ್ರಗತಿಪರರು ಅಭಿನಂದಿಸಿದ್ದಾರೆ. ಲಾಠಿ ಚಾರ್ಜ್ ಘಟನೆಯ ಹಿಂದೆ ಸಚಿವ ಇಕ್ಬಾಲ್ ಅನ್ಸಾರಿಯ ಕೈವಾಡವಿದೆಯೆಂದು ನಾಳೆ ಬಿಜೆಪಿ ಮುಖಂಡರು, ಶಾಸಕರು ಪತ್ರಿಕಾಗೋಷ್ಠಿ ಕರೆಯುತ್ತಾರೆಂದೂ ಅನಿಲ್ ಜೋಷಿ ಬೊಬ್ಬೆ ಹಾಕಿದನಾದರೂ ಜಿಲ್ಲಾ ಬಿಜೆಪಿ ಮುಖಂಡರಾಗಲಿ, ಶಾಸಕರುಗಳಾಗಲೀ ಇದಕ್ಕೆ ಸೊಪ್ಪು ಹಾಕಿಲ್ಲ, ತಮ್ಮ ಬಂಧನ ದೊಡ್ಡ ಸಂಚಲನ ಉಂಟು ಮಾಡಲಿದೆ ಎಂಬ ನಿರೀಕ್ಷೆಯಲ್ಲಿದ್ದ ಅನಿಲ್ ಜೋಷಿ ಮತ್ತವನ ಭಜರಂಗಿ ಪಡೆಗೆ ಬಿಜೆಪಿ ನಾಯಕರ ನಿರ್ಲಕ್ಷ್ಯ ಬೇಸರ ತರಿಸಿದೆ. ಈ ಬಾರಿ ಕಮಾಲಾಪುರದ ಹುಡುಗರು ಅನಿಲ್ ಜೋಷಿಗೆ ಮೊದಲೇ ನಮಸ್ಕಾರ ಹೊಡೆದು ದೂರವಿಟ್ಟಿದ್ದರು. ಎಲ್ಲೆಲ್ಲಿಂದಲೋ ಪಡ್ಡೆ ಹುಡುಗರನ್ನು ಕರೆಸಿ ನೀಡಿದ್ದ 'ಷೋ' ಫ್ಲಾಪ್ ಆಗಿದೆ.



ಪೊಲೀಸರೊಂದಿಗಿನ ಮಾತಿನ ಚಕಮಕಿಯಲ್ಲಿ ಚೆಡ್ಡಿಗಳು

ಕಮಲಾಪುರ-ಹಂಪಿಯಲ್ಲಿ ಭೂಸಮಸ್ಯೆಯೊಂದರ ಪರಿಹಾರಕ್ಕಾಗಿ ಹಿಂದೂ-ಮುಸ್ಲಿಂರಿಬ್ಬರೂ ಜಂಟಿಯಾಗಿ ಹೋರಾಟ ನಡೆಸುತ್ತಿದ್ದಾರೆ. ಮೊದಲಿನಿಂದಲೂ ಅನ್ಯೋನ್ಯವಾಗಿದ್ದಾರೆ. ಇಂತಹ ಕ್ಯಾತೆಗಳಿಂದ ಅವರಿಗಾಗುವ ಪ್ರಯೋಜನ ಏನೂ ಇಲ್ಲ... ಇವು ಇಲ್ಲಿನ ಪ್ರಗತಿಪರ ಗೆಳೆಯರ ಅಭಿಪ್ರಾಯಗಳು.

ಹಂಪಿ ಉಳಿಸಿ ಆಂದೋಲನ ಸಮಿತಿ ಎಂಬ ಲೆಟರ್ ಹೆಡ್ ಸಂಘಟನೆಯ ಗೌರವಾಧ್ಯಕ್ಷನ ಹೆಸರಿನಲ್ಲಿ ಚಾಲ್ತಿಯಲ್ಲಿರುವ ರಾಜ ಅಚ್ಯುತರಾಯ ತಾನು ಈಗಲೂ ರಾಜನೆಂದೂ, ಹಂಪಿ ಸುತ್ತಮುತ್ತಲ ಸಮಸ್ತ ಪ್ರಜೆಗಳೆಲ್ಲರೂ ತನ್ನನ್ನು ರಾಜನೆಂದೇ ಪರಿಗಣಿಸಬೇಕೆಂದೂ ಭಾವಿಸಿರುವಾತ. ಸಂಘ ಪರಿವಾರ ಈತನನ್ನು ವಿದೂಷಕನಂತೆ ಬಳಸಿಕೊಳ್ಳುತ್ತಿದೆ. ಇನ್ನು ವಿಹಿಂಪದ ಜಿಲ್ಲಾ ಸಂಚಾಲಕನೆಂದು ಹೇಳಿಕೊಳ್ಳುವ ಅನಿಲ್ ಜೋಷಿ ಪೌರೋಹಿತ್ಯ ಪೂಜೆ-ಪುನಸ್ಕಾರ ಮಾಡಿಕೊಂಡಿರುವಾತ. ಬೆರಳೆಣಿಕೆಯ ಶೆಟ್ಟಿಗಳು ಮಾರ್ವಾಡಿಗಳಿಗೆ ಸೀಮಿತವಾಗಿದ್ದ ಸಂಘ ಪರಿವಾರಕ್ಕೆ ಇಲ್ಲಿನ ನಾಯಕ ಜನಾಂಗದ ಮಿಲಿಟೆಂಟ್ ಹುಡುಗರನ್ನು ಸೇರಿಸಿ ಆಟವಾಡುವ ತಂತ್ರ ರೂಪಿಸಿದವನು ಬಿಜೆಪಿ ಕೌನ್ಸಿಲರ್ ಗುದ್ದಲಿ ಪರಶುರಾಮ. ಹಿಂದೆ ಒ.ಸಿ ಪರಶುರಾಮ ಎಂದೇ ಖ್ಯಾತಿ ಪಡೆದಿದ್ದವನು. ಈ ಮೂರು ಮತ್ತೊಂದು ಜನ ಹೊಸಪೇಟೆಗೆ ಭಜರಂಗದಳ ಎಂಬ ವಾನರ ಸೇನೆಯನ್ನು ಪರಿಚಯಿಸಿ, ಪ್ರಮೋದ್ ಮುತಾಲಿಕನಿಂದ ಬೆಂಕಿಯುಗುಳುವ ಭಾಷಣ ಮಾಡಿಸಿದರು. ಹೊಸಪೇಟೆಯ ಬೀದಿಗಳಲ್ಲಿ ಮೊದಲ ಬಾರಿಗೆ ಟೈರುಗಳನ್ನು ಸುಟ್ಟ ಇತಿಹಾಸವೂ ಇದೆ. ಸ್ಥಳೀಯವಾಗಿ ಇವರನ್ನು 'ಎಕ್ಸ್‌ಟ್ರಾ'ಗಳ ಪಟ್ಟಿಯಲ್ಲಿಡಲಾಗಿದೆ. ಹಾಗಾಗಿ ಇವರ ಮಾತು-ಕೃತಿಗಳಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ.

ಇಷ್ಟಾಗಿಯೂ ಈ ಬೆಳವಣಿಗೆಗಳನ್ನು ಕಡೆಗಣಿಸುವಂತಿಲ್ಲ. ಈ ಹಿಂದೆಯೇ ಚೆಡ್ಡಿ ಸಂಶೋಧಕ ಡಾ. ಚಿದಾನಂದಮೂರ್ತಿ ಹಾಗೂ ಬಿ.ಎಸ್. ಯಡಿಯೂರಪ್ಪ ಹೊನ್ನೂರವಲಿ ದರ್ಗಾಕ್ಕೆ ಭೇಟಿ ಕೊಟ್ಟು ಕೋಮು ಪ್ರೇರಿತ ಅಣಿಮುತ್ತುಗಳನ್ನು ಉದುರಿಸಿ ಹೋಗಿದ್ದಾರೆ. ಡಾ. ಚಿದಾನಂದಮೂರ್ತಿಯವರಂತೂ ಹಂಪಿಯ ಹಿಂದೂ ಸಾಮ್ರಾಜ್ಯದ ವೈಭವವನ್ನು ನೆನೆ-ನೆನೆದು ಕನವರಿಸಿ ವಾಚಕರ ವಾಣಿಗೆ ಪತ್ರಗಳನ್ನು ಬರೆದು ಹಂಪಿಯ ಗುಡಿಗುಂಡಾರಗಳು ಅನ್ಯಧರ್ಮೀಯರ (ಮುಸ್ಲಿಮರ) ಅತಿಕ್ರಮಣಕ್ಕೊಳಗಾಗುತ್ತಿವೆ ಎಂದು ಬಡಬಡಿಸುತ್ತಲೇ ಇರುತ್ತಾರೆ.

[illegible]

-[illegible]

ಡಿ.ಸಿ.ಸಿ ಬ್ಯಾಂಕ್
ದರೋಡೆಕೋರ ಮಂಜನೊಂದಿಗೆ ಯಡ್ಡಿ ಸಂಭ್ರಮ!



ಮಂಜುನಾಥ ಗೌಡ

ಶಿವಮೊಗ್ಗದ ಜಿಲ್ಲಾ ಸಹಕಾರ ಬ್ಯಾಂಕ್‌ಗೆ ಕನ್ನ ಹಾಕಿದ ಕಳ್ಳ ಮಂಜುನಾಥ ಗೌಡ, ಮೊನ್ನೆ ಸುವರ್ಣ ಸಂಭ್ರಮ ಅಂತಾ ಎಂತದೋ ಥಾಲ್ತು ಪ್ರೋಗ್ರಾಮ್ ಮಾಡಿದಾಗ ವೇದಿಕೆ ಮೇಲೆ ಸಂಭ್ರಮಪಟ್ಟಿದ್ದು ಯಡಿಯೂರಪ್ಪ ಬ ನಾಲಾಯಕ್ ಡಿ.ಸಿ.ಎಮ್!

ಕೊಡಗಳಿಗೆಯಲ್ಲಿ ಎಚ್ಚೆತ್ತ ಕುಮಾರಸ್ವಾಮಿ ಂಜನ ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿರಾಕರಿಸಿದ್ದಾರೆ. ಂದರೆ 2 ತಿಂಗಳ ಹಿಂದೆ ಮಂಜನ ಮಸಲತ್ತು ನ್ನು ತನಿಖೆ ಮಾಡಿ ಎನ್ನುವ ಆದೇಶ ಸಿ.ಎಂ. ಕಿಂದಲೇ ಹೊರಬಿದ್ದಿತ್ತು!

ಇವತ್ತು ಶಿವಮೊಗ್ಗದ ಡಿ.ಸಿ.ಸಿ. ಬ್ಯಾಂಕ್‌ನಿಂದ ರಿಗೆ ಸಾಲ ಸಿಗುವುದಿಲ್ಲ ಆದರೆ ಕಂಪ್ಯೂಟರ್, ಕೊಳ್ಳುವವರಿಗೆ ಯಥೇಚ್ಛ ಸಾಲ ಸಿಗುತ್ತದೆ. ಕಷ್ಟದ ಸರ್ಕಾರವಿದ್ದಾಗ ಡಿಕೆಶಿಯನ್ನು ಗಾಡ್ [illegible]

ತಲಾ ಮೂರುವರೆ ಕೋಟಿ ಸಾಲ ಕೊಟ್ಟಿದ್ದ. ಆದರೆ ಇದೇ ಮಂಜುನಾಥಗೌಡ ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯವರು ಸಾಲ ಕೇಳಿದರೆ "sorry" ಎಂದು ಬಿಟ್ಟಿದ್ದ. ಬೇರೆ ಕಾರ್ಖಾನೆಗಳಿಂದ ಬರುವ ಕಮಿಷನ್ ಲೋಕಲ್ ಕಾರ್ಖಾನೆಯಿಂದ ಬರುವುದಿಲ್ಲ ಎಂದು ಗೊತ್ತಿದ್ದ ಮಂಜ ತನ್ನ ಹೊಲಸು ಬುದ್ಧಿ ತೋರಿದ್ದ. ಡಿ.ಸಿ.ಸಿ. ಬ್ಯಾಂಕ್‌ಗೆ ಕಂಪ್ಯೂಟರ್ ಕೊಳ್ಳುವುದರಿಂದ ಹಿಡಿದು ಕಟ್ಟಡ ನಿರ್ಮಾಣ, ಲಿಫ್ಟ್ ಅಳವಡಿಕೆ, ಸಿಬ್ಬಂದಿ ನೇಮಕದಲ್ಲೂ ದುಡ್ಡು ಮಾಡಿದ ಮಂಜ ಪೊರಕೆ ಖರೀದಿಸುವಾಗಲೂ ಲಿಟಲ್‌ಬಿಟ್ ಗೋಲ್ ಮಾಲ್ ಮಾಡೇ ತೀರುತ್ತಾನೆ.

ಶಿವಮೊಗ್ಗ

ತೀರ್ಥಹಳ್ಳಿಯಲ್ಲಿ ಬಿಜೆಪಿ ನಾಯಕರ ಜೊತೆ ಚೆನ್ನಾಗಿರುತ್ತಾನೆ; ಹೊಸನಗರ, ಸೊರಬದಲ್ಲಿ ಸಮಾಜವಾದಿ ಪಕ್ಷದೊಂದಿಗೆ ದೋಸ್ತಿ ಎನ್ನುತ್ತಾನೆ. ಸಾಗರ, ಶಿವಮೊಗ್ಗದಲ್ಲಿ ಮಾತ್ರ ಈತ ಅಪ್ಪಟ ಕಾಂಗ್ರೆಸ್ಸಿಗ! ಸಿಕ್ಕ ಸಿಕ್ಕವರಿಗೆ ಅಂದರೆ ತನಗೆ ಕಮಿಷನ್ ಕೊಡುವವರಿಗೆಲ್ಲ ಸಾಲ ನೀಡಿ ಬ್ಯಾಂಕ್ ಹರಾಜಿಗಿಟ್ಟ ಮಂಜನಿಗೆ ಆಡಿಟ್ ರಿಪೋರ್ಟ್‌ಗಳಲ್ಲೆಲ್ಲ ಉಗಿದು ಉಪ್ಪಿನಕಾಯಿ ಹಾಕಿದ್ದಾರೆ. [illegible] ಬಂದ ತನಿಖೆಯ ಆದೇಶದ ಲೆಟರ್‌ನ್ನು ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್ ಗೋಪಾಲಕೃಷ್ಣಗೌಡ ಚೇಬಲಿಟ್ಟು ಕೊಂಡು ಅಡ್ಡಾಡಿ ಮಂಜನ ರಕ್ಷಣೆಗೆ ಮುಂದಾಗಿದ್ದ. ಆದರೆ ಇದು ಈಗ ಬಹಿರಂಗವಾಗಿ ಮಂಜನ ಮಸಲತ್ತುಗಳಿಗೆ ಕಡಿವಾಣ ಬೀಳುವ ಕಾಲ ಸಮೀಪಿಸಿದೆ.



ಬಸವಣ್ಣಪ್ಪ

ಹೊನ್ನಾಳಿಯ ಶಾಸಕ ಬಸವಣ್ಯಪ್ಪನನ್ನು ಕರೆದುಕೊಂಡು ದೇವೇಗೌಡ, ಸಿ.ಎಂ. ಬಳಿ ಹೋದ ಮಂಜ "ಡಿ.ಸಿ.ಸಿ. ಬ್ಯಾಂಕ್‌ನ ಸುವರ್ಣ ಮಹೋತ್ಸವಕ್ಕೆ ನೀವು ಬಂದರೆ ಜಿ.ಪಂ. ಮಾಜಿ ಅಧ್ಯಕ್ಷ ಮೈಲಾರಪ್ಪ, ಆರ್.ಎಂ. ಮಂಜು, ವಿ. ನಂಜುಂಡಪ್ಪ ಜೆಡಿಎಸ್‌ಗೆ ಬರುವಂತೆ ಮಾಡ್ತಿನಿ" ಎಂದು ರೀಲು ಬಿಟ್ಟಿದ್ದ. ಶಿವಮೊಗ್ಗ ಜೆಡಿಎಸ್‌ನವರಿಂದ ರಿಯಲ್ ವಿಷಯ ತಿಳಿದ ಕುಮಾರಸ್ವಾಮಿ, ಬಸವಣ್ಯಪ್ಪ, ಮಂಜರನ್ನು ಉಗಿದು ಅಟ್ಟಿದ್ದಾರೆ. (ಅ) ವ್ಯವಹಾರಗಳ ಕಾರಣಕ್ಕೆ ಚೆಡ್ಡಿಗಳ ದೋಸ್ತಿಯನ್ನು ಮಂಜ ಮಾಡಿದ್ದಾನೆ. ಅದಕ್ಕೆ ತಕ್ಕಂತೆ ಯಡ್ಡಿ ದರೋಡೆಕೋರ ಮಂಜನೊಂದಿಗೆ ಸಂಭ್ರಮಿಸಿ ಹೋಗಿದ್ದಾನೆ. ಶಿವಮೊಗ್ಗದ ರೈತ ಸಮುದಾಯ ಮಂಜುನಾಥಗೌಡ [illegible]


-ರಮೇಶ್

ಡಿ.ಟಿ. ಜಯಕುಮಾರ್-ಸುರಾನಾ ಸಹವಾಸ

ನೆಲಗಳ್ಳ ಜೆಮಿನಿ ಬಾಬು ಅಟ್ಟಹಾಸ!

ಜೆಮಿನಿ ಬಾಬು ಎಂಬ ಲ್ಯಾಂಡ್ ಮಾಫಿಯಾ ರೌಡಿಯೊಬ್ಬ ಕಾಕ್ಸ್‌ಟೌನ್‌ನ ಬಡವರ ಬದುಕಿಗೆ ಕೈ ಹಾಕಿದ್ದಾನೆ. ಇವನ ಕಾನೂನು ವಿರೋಧಿ ಘನ ಕಾರ್ಯಕ್ಕೆ ಜೆ.ಡಿ.ಎಸ್.ನ ವಸತಿ ಸಚಿವ ಡಿ.ಟಿ. ಜಯಕುಮಾರ್ ಹಾಗೂ ಬಿಜೆಪಿ ಶಾಸಕ ನಿರ್ಮಲ್‌ಕುಮಾರ್ ಸುರಾನಾ ಬೆಂಬಲಕ್ಕೆ ನಿಂತಿದ್ದಾರೆ.

ಇಂದು ಬೆಂಗಳೂರಿನ ಇಂಚಿಂಚು ಭೂಮಿಯೂ ಬಲಿ ಕೇಳುತ್ತಿದೆ. ಮನುಷ್ಯರ ರಕ್ತಕ್ಕಿಂತಾ ದುಬಾರಿಯಾಗಿ ಹೋಗಿರುವ ನೆಲದ ರೇಟು ಬೆಂಗಳೂರಿನ ಸಕಲ ಜನವರ್ಗಗಳ ಮೆದುಳುಗಳ ಒಳಗೆ ಮುಳ್ಳುಗಳನ್ನು ನೆಟ್ಟುಬಿಟ್ಟಿದೆ. ಗ್ರಾಮೀಣ ಕೃಷಿ ಉತ್ಪನ್ನಗಳ ಮಾರುಕಟ್ಟೆಯ ವಿಸ್ತರಣೆಗೆ ನಗರಗಳು ಹುಟ್ಟಿ, ನಾಜೂಕು ನಾಗರಿಕ ಬದುಕುಗಳನ್ನು ಹಡೆಯಲು ಶುರುವಿಟ್ಟಾಗ ಗ್ರಾಮೀಣ ಭಾಗದ ಭೂ ಹೀನರು, ಉದ್ಯೋಗಾಕಾಂಕ್ಷಿಗಳೂ ಮುಂತಾದ ಜನವರ್ಗಗಳು ತಮಗೆ ಸಿಕ್ಕ ಜಾಗಗಳಲ್ಲಿ ಬೀಡು ಬಿಟ್ಟು ಬದುಕುಗಳನ್ನು ಕಂಡುಕೊಂಡರು. ಹಾಗು ನಗರ ಜೀವನದ ಹೊಳಪಿಗೆ ತಮ್ಮ ಬಣ್ಣಗಳನ್ನು ತುಂಬಿದರು.


ಜಯಕುಮಾರ್


ಕ್ರಮೇಣ ನಗರ ಎಲ್ಲಾ ಮಗ್ಗಲುಗಳಿಂದ ಆಧುನಿಕಗೊಳ್ಳುತ್ತಾ, ತನ್ನನ್ನು ಹಿಗ್ಗಿಸಿಕೊಳ್ಳುತ್ತಾ ಬೆಳೆಯತೊಡಗಿದಾಗ ಎಲ್ಲರೂ ತಮ್ಮ ತಮ್ಮ ನೆಲೆಗಳನ್ನು ಭದ್ರಗೊಳಿಸಿಕೊಳ್ಳತೊಡಗಿದರು. ಇತ್ತೀಚೆಗೆ ಹಲವು ಕಾರಣಗಳಿಂದ ನಗರದ ನೆಲದ ಬೆಲೆ ಹೆಚ್ಚಾಗಿ ಜನ ತಾವಿರುವ ಜಾಗದ ಬಗ್ಗೆಯೇ ಅನುಮಾನ ಪಡುವ ಹಾಗಾಗಿದೆ. ನೆಮ್ಮದಿಯ ಬದುಕು ಕಷ್ಟವಾಗಿದೆ.

ಇಂದು ಬೆಂಗಳೂರಿನ ಮೂಲೆಮೂಲೆಯಲ್ಲೂ ನಡೆಯುತ್ತಿರುವ ರಿಯಲ್ ಎಸ್ಟೇಟ್ ದಂಧೆಗಳು ಎಂಥವರನ್ನೂ ಹಣದಾಸೆಗೆ ಕ್ರೌರ್ಯಕ್ಕೆ ಪ್ರೇರೇಪಿಸುವ ಆ ಮೂಲಕ ಮಾನವ ಸಂಬಂಧಗಳ ಬೆಲೆಯನ್ನೇ ಅಪಮೌಲ್ಯಗೊಳಿಸುವ ಪ್ರವೃತ್ತಿಯನ್ನು ಬೆಳೆಸುತ್ತಿವೆ.


ಬೆಂಗಳೂರಿನ ಕಾಕ್ಸ್‌ಟೌನ್ ಹತ್ತಿರದ ನಾಗಪ್ಪ ಗಾರ್ಡನ್‌ನಲ್ಲಿ 50 ವರ್ಷಗಳಿಂದ ವಾಸಿಸುತ್ತಿರುವ ಸ್ಲಂ ನಿವಾಸಿಗಳ ಕಥೆಯೊಂದು ಹೀಗೇ ಬಿಚ್ಚಿಕೊಳ್ಳುತ್ತದೆ. 1951ರಿಂದ ವಾಸ ಮಾಡುತ್ತಿರುವ ಇಲ್ಲಿನ 18 ಕುಟುಂಬಗಳ ನೆಮ್ಮದಿಯನ್ನು ಲ್ಯಾಂಡ್ ಮಾಫಿಯಾ ಬಲಿಹಾಕಲು ಹೊರಟಿದೆ. ಜೆಮಿನಿ ಬಾಬು ಅಲಿಯಾಸ್ ಪಿ. ಬಾಬು ಎಂಬ ಲ್ಯಾಂಡ್ ಮಾಫಿಯಾ ರೌಡಿಯೊಬ್ಬ ಈ ಬಡವರ ಬದುಕಿಗೆ ಕೈ ಹಾಕಿದ್ದಾನೆ. ಇವನ ಕಾನೂನು ವಿರೋಧಿ ಘನ ಕಾರ್ಯಕ್ಕೆ ಬಲ ತುಂಬುತ್ತಿರುವವರು ಜೆ.ಡಿ.ಎಸ್. ನ ವಸತಿ ಸಚಿವ ಡಿ.ಟಿ. ಜಯಕುಮಾರ್, ಬಜೆಪಿ ಶಾಸಕ ನಿರ್ಮಲ್‌ಕುಮಾರ್ ಸುರಾನಾ, ಹೌಸಿಂಗ್ ಡಿಪಾರ್ಟ್‌ಮೆಂಟ್ ಜನರಲ್ ಸೆಕ್ರಟರಿ ಹರಿಸಿಂಗ್ ಮತ್ತು ಸ್ಲಂ ಬೋರ್ಡ್ ಕಮಿಷನರ್ ಶಿವಶಂಕರ್ ಎಂಬ ಬಡವರ ರಕ್ತ ಹೀರುವ ಜಿಗಣೆಗಳು. ಇವರೊಂದಿಗೆ ಈಗ ಸ್ಥಳೀಯ ಪೊಲೀಸರೂ ಕೈ ಜೋಡಿಸಿದ್ದಾರೆ.

ಇದು 50 ವರ್ಷಗಳ ಹಿಂದಿನ ಕತೆ

1951ರಲ್ಲಿ ತಮಿಳುನಾಡಿನಿಂದ ಕೆಲಸ ಅರಸಿ ಬಂದ ನಾಲ್ಕು ಕುಟುಂಬಗಳಿಗೆ ಇಲ್ಲಿನ ಜಮೀನ್ದಾರ ನಾಗಪ್ಪ ಎಂಬ ಭಾರೀ ಖುಳ ನೆರವಾಗುತ್ತಾನೆ. ತನ್ನ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡಿರುವಂತೆ ಹೇಳಿ ಅವರು ವಾಸಿಸಲು ಒಂದಿಷ್ಟು ಜಾಗ ಬಿಟ್ಟು ಕೊಡುತ್ತಾನೆ. ಮುಂದೆ ಆ ನಾಲ್ಕು ಜನ ಈ ಜಮೀನನ್ನು ವ್ಯವಸಾಯಕ್ಕೆ ಬಳಸುವಂತೆಯೂ, ಬಂದ ಬೆಳೆಯಲ್ಲಿ ತನಗರ್ಧ ನೀಡುವಂತೆಯೂ ಕರಾರು ಮಾಡಿಕೊಳ್ಳುತ್ತಾನೆ. ಅಲ್ಲದೆ ಅಷ್ಟು ಭೂಮಿಗೆ ತಿಂಗಳಿಗಿಷ್ಟೆಂದು ನೆಲ ಬಾಡಿಗೆಯನ್ನೂ ತೆಗೆದುಕೊಳ್ಳುತ್ತಾನೆ. ಹಾಗು ಇದನ್ನೆಲ್ಲ 12 ಆಣೆಯ ಪತ್ರವೊಂದರಲ್ಲಿ ಬರೆಸಿ ಆ ಜನರಿಗೆ ಕೊಡುತ್ತಾನೆ. ಆತ ತೀರಿಕೊಂಡ ನಂತರ ಆತನ ಮಗ ವೆಂಕಟರಾಮನ್ ಸಹ 1972ರ ವರೆಗೂ ತಂದೆಯಂತೆಯೇ ನಡೆದುಕೊಳ್ಳುತ್ತಾನೆ. 1972ರ ನಂತರ ಕುಟುಂಬವೊಂದು 10,000 ನೀಡಿದರೆ ಆ ಜಾಗ ನಿಮ್ಮದೇ ಸ್ವಂತ ಎಂದು ಕಂತುಗಳಲ್ಲಿ ಆ ಜನರಿಂದ ಕಾಸು ಕೀಳುತ್ತಾನೆ. ಹಾಗು ಅವರು ಮಾಡುತ್ತಿದ್ದ ಪಾಲುದಾರಿಕೆ ವ್ಯವಸಾಯವನ್ನು ಕೃಷಿ ಕೂಲಿಯಾಗಿ ಪರಿವರ್ತಿಸುತ್ತಾನೆ. 1974ರ ಹೊತ್ತಿಗೆ ಒಟ್ಟು ಒಂದು ಎಕರೆ ಮೂವತ್ತಾರು ಗುಂಟೆಯ ಈ ಜಾಗವನ್ನು ಸ್ಲಂ ಬೋರ್ಡು ಕೊಳಚೆ ನಿರ್ಮೂಲನಾ ಕಾಯ್ದೆ 3ರನ್ವಯ 'ಸ್ಲಂ' ಎಂದು ಘೋಷಿಸುತ್ತದೆ. ಜೊತೆಗೆ ಅಲ್ಲಿನ ವಾಸಿಗಳಿಗೆ ಸ್ಲಂ ಗುರುತುಚೀಟಿ ನೀಡುತ್ತದೆ.


ನೆಲಗಳ್ಳ ಜೆಮಿನಿ ಬಾಬು


ಇದರ ಜೊತೆಗೆ 1975ರಲ್ಲಿ ಇಂದಿರಾ ಗಾಂಧಿಯವರ 'ಉಳುವವನೇ ಭೂಮಿಯ ಒಡೆಯ' ಕಾಯ್ದೆಯೂ ಬಂದು ಆ ಸ್ಲಂ ವಾರಸುದಾರಿಕೆಯನ್ನು ಆ ಜನರಿಗೇ ನೀಡಲು ಸಹಕಾರಿಯಾಗುತ್ತದೆ. ಆ ಜಾಗ ಸ್ಲಂ ಎಂದು ಡಿಕ್ಲೇರ್ ಆದ ನಂತರ ಜನ ವೆಂಕಟರಾಮನ್‌ಗೆ ನೀಡುತ್ತಿದ್ದ ನೆಲ ಬಾಡಿಗೆಯನ್ನೂ ನಿಲ್ಲಿಸಿದ್ದಾರೆ. ಭೂಮಿಯನ್ನು ದಕ್ಕಿಸಿಕೊಳ್ಳಲು ಒಂದಿಷ್ಟು ಓಡಾಡಿದ ವೆಂಕಟರಾಮನ್ 1990ರಲ್ಲಿ ಸಾವಿಗೀಡಾಗುತ್ತಾನೆ. ಆ ನಂತರ ಈ ಸ್ಲಂ ನಿವಾಸಿಗಳ ಬದುಕಿಗೆ ವಕ್ಕರಿಸಿಕೊಂಡವನು ಈ ವೆಂಕಟರಾಮನ್ ಮಗ ನಾಗರಾಜ. 1990ರಲ್ಲಿ ಪ್ರಾರಂಭವಾದ ನಾಗರಾಜನ ಕಿರುಕುಳ ಇಂದಿನವರೆಗೂ ಬೇರೆ ಬೇರೆ ರೂಪಗಳಲ್ಲಿ ಮುಂದುವರಿದೇ ಇದೆ. ಈ ನಾಗರಾಜ ಇದು ತನ್ನ ಪೂರ್ವಿಕರ ಜಾಗವೆಂದೂ, ಈ ಸ್ಲಂ ಜನ ಅದನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆಂದೂ ದೂರು ತೆಗೆದುಕೊಂಡು ಕೋರ್ಟ್ ಮೆಟ್ಟಿಲು ಹತ್ತುತ್ತಾನೆ. ನಾಗಪ್ಪ ಬರೆದುಕೊಟ್ಟ ಪತ್ರ, ಸ್ಲಂ ಬೋರ್ಡ್ ಡಿಕ್ಲರೇಷನ್ ಹಾಗು ಉಳುವವನೇ ಭೂಮಿಯ ಒಡೆಯ ಕಾಯ್ದೆಗಳ ಹಿನ್ನೆಲೆಯಲ್ಲಿ ಕೇಸನ್ನು ಪರಿಶೀಲಿಸಿದ ಕೋರ್ಟು ನಾಗರಾಜನಿಗೇ ಛೀಮಾರಿ ಹಾಕಿದೆ. ಕೋರ್ಟು ತಮ್ಮ ಪರ ತೀರ್ಪು ನೀಡಿದ್ದಕ್ಕೆ ಖುಷಿಗೊಂಡ ಸ್ಲಂ ಜನ ತಮ್ಮ ಮನೆಗಳನ್ನು ದುರಸ್ಥಿ ಮಾಡಿಸಲು ಸ್ಲಂ ಬೋರ್ಡಿಗೆ ಅರ್ಜಿ ಹಾಕಿಕೊಂಡು ನೆಮ್ಮದಿಯ ಬದುಕನ್ನು ಕನಸುತ್ತಿದ್ದರೆ, ಅತ್ತ ನಾಗರಾಜ ಜೆಮಿನಿ ಬಾಬು ಎಂಬ ರಿಯಲ್ ಎಸ್ಟೇಟ್ ಏಜಂಟ್ ರೌಡಿಯೊಬ್ಬನಿಗೆ ಇಡೀ ಜಮೀನನ್ನು ಮಾರಿಬಿಟ್ಟದ್ದಾನೆ. ಎಲ್ಲಾ ಗೊತ್ತಿದ್ದೂ ಭೂಮಿಯನ್ನು ಕೊಳ್ಳುವ ತಿಳಿಗೇಡಿ ಬಾಬು ತನ್ನ ಗೂಂಡಾ ಪಡೆಯಿಂದ ಬಡ ಸ್ಲಂ ಜನರನ್ನು ಮಟ್ಟಹಾಕಿ ಭೂಮಿಯನ್ನು ಕಿತ್ತುಕೊಳ್ಳುವ ಹುಂಬ ಧೈರ್ಯದಿಂದ ಕಾನೂನು ಬಾಹಿರವಾಗಿ ಅದನ್ನು ಕೊಂಡುಕೊಂಡಿದ್ದಾನೆ. ಇವನ ಈ ಕಲ್ಯಾಣ ಕಾರ್ಯಕ್ಕೆ ಬೆನ್ನೆಲುಬಾಗಿ ಇಡೀ ಸ್ಲಂ ಬೋರ್ಡ್, ಸಚಿವ ಡಿ.ಟಿ. ಜಯಕುಮಾರ್ ಹಾಗು ಬೆಂಗಳೂರಿನ ಭೂಗಳ್ಳರ ಗುರು ನಿರ್ಮಲ್‌ಕುಮಾರ್ ಸುರಾನಾ ನಿಂತಿದ್ದಾರೆ.


ವೆಂಕಟಸ್ವಾಮಿ

ಸಮತಾ ಸೈನಿಕದಳದ ವೆಂಕಟಸ್ವಾಮಿ, ಲಕ್ಷ್ಮೀನಾರಾಯಣ ನಾಗವಾರರ ಡಿ.ಎಸ್.ಎಸ್‌ನ ಅಣ್ಣಯ್ಯ ಈ ಸ್ಲಂನಿವಾಸಿಗಳ ಪರವಾಗಿ ಹೋರಾಡುತ್ತಿದ್ದಾರೆ. ಇಂದು 18 ಮನೆಗಳಿರುವ ಆ ಜಾಗದಲ್ಲಿ ಬಾಬು ಮತ್ತು ಅವನ ಗ್ಯಾಂಗಿನ ವಿರುದ್ಧ ಹೋರಾಟಕ್ಕೆ ನಿಂತಿರುವುದು ಅಲ್ಲಿಯ ಮಹಿಳೆಯರು. ಇವರು ಎಸ್.ಎಸ್.ಡಿ.ಯ ವೆಂಕಟಸ್ವಾಮಿಯವರನ್ನು ನಂಬಿದ್ದಾರೆ. ವೆಂಕಟಸ್ವಾಮಿ ಮತ್ತು ಅವರ ಕಡೆಯವರು ಇದ್ದಾಗ ಸ್ಲಂಗೆ ಕಾಲಿಡದ ಬಾ… ಗ್ಯಾಂಗ್ ಅವರು ಇಲ್ಲದಾಗ ದಾಳಿಯಿಟ್ಟು … ಹೆಣ್ಣುಮಕ್ಕಳನ್ನು ಚುಡಾಯಿಸುವುದು, ಕ… ಗೋಡೆಗಳನ್ನು ಕೆಡಹುವುದು, ಅನಾವಶ್ಯಕ … ಮಾಡುವುದು ಮಾಡುತ್ತಿದ್ದಾರೆ. ಈ ಸಂ… ಫ್ರೇಜರ್‌ಟೌನ್ ಪೊಲೀಸ್ ಸ್ಟೇಷನ್‌ಗೆ ದೂರು ನೀ… ಅಲ್ಲಿನ ಎಂಜಲು ನಾಯಿಗಳು ಇವರಿಗೇ … ಕಳಿಸುತ್ತವೆ.


ಜೆಮಿನಿ ಬಾಬು ಗ್ಯಾಂಗ್ ಜೊತೆ ಸ್ಲಂ ಜನರ ಚಕಮಕಿ

ಬಾಬು ಎಂಬ… ದೈವಭಕ್ತ!


ಸುರಾನಾ

ತನ್ನ ಅಜ್ಜನೇ ಬರೆದು… ಪತ್ರದಿಂದ ಭೂಮಿ … ಕೊಳ್ಳಲಾರದೇ ನಾಗ… ಭೂಮಿಯನ್ನು ಬಾಬು… ಮಾರಿ ಸೈಡಿಗೆ ಸರಿದಿ… ಇತ್ತ ಈ ಬಾಬು … ಬೋರ್ಡಿನ ಕಮಿಷನರ್ … ಶಂಕರ್, ವಸತಿ ಇಲಾ… ಜನರಲ್ ಸೆಕ್ರಟರಿ ಹರಿ… ಹಾಗೂ ಪೊಲೀಸರನ್ನು ಬುಟ್ಟಿಗೆ ಹಾಕಿಕೊ… ಮೆರೆಯುತ್ತಿದ್ದಾನೆ. ರಿಂಗ್ ರೋಡಿನಲ್ಲಿ ಓಂಕಾರ… ಎಂಬ ದೇವಸ್ಥಾನ ನಡೆಸುವ ಈ ತಮಿಳು ಆ… ತಮಿಳುನಾಡಿನ ವಂದವಾಸಿ ಎಂಬಲ್ಲಿನ ವನ್ನಿ… ಗೌಂಡರ್ 'ಎಂಬ ಮೇಲು ಜಾತಿಗೆ ಸೇರಿದ… ಆದರೆ ಇಲ್ಲಿ ತಾನು ಎಸ್.ಸಿ. ಎಂದು ಹೇಳಿಕೊ… ಜೊತೆಗೆ ಒಂದಷ್ಟು ಅಮಾಯಕ, ಬುದ್ದಿಗೇಡಿ … ಹುಡುಗರನ್ನು ಇಟ್ಟುಕೊಂಡು ರಿಯಲ್ ಎಸ್ಟೇ… ದಂಧೆ ನಡೆಸುತ್ತಾನೆ.

ಡಿ.ಟಿ. ಜಯಕುಮಾರ್ ಇವನ ಬೆನ್ನಿಗಿ… ಎಂಬುದೇ ಇವನ ಮಂಗಾಟಕ್ಕೆ ಬಹುದೊಡ್ಡ … ಅಪ್. ಜೊತೆಗೆ ಬಜೆಪಿ ಶಾಸಕ ನಿರ್ಮಲ್‌ಕುಮಾ… ಸುರಾನಾ ನಂಟಿರುವ ಈ ಬಾಬು ತೆಂಗಿನ … ಬಿದ್ದು ಹಾಳಾದ ಮನೆಯೊಂದರ ಜಾಗದಲ್ಲಿ … ಕಟ್ಟಿಕೊಳ್ಳಲು ಮುಂದಾಗಿದ್ದಾನೆ. ಆ ಜಾಗ… ಅಂಬೇಡ್ಕರ್ ಭಾವಚಿತ್ರವಿರುವ 'ತನಗೆ ಸೇರಿದ … ಎಂಬ ಬೋರ್ಡೊಂದನ್ನು ನಿಲ್ಲಿಸಿದ್ದಾನೆ. ಅಲ್ಲದೆ … ಮನೆ ಕಟ್ಟಿಯೇ ತೀರುತ್ತೇನೆಂದೂ, ಆ ಮನೆ… 50 ನಾಯಿಗಳನ್ನು ತಂದು ಬಿಡುತ್ತೇನೆಂದೂ ಬೆ… ಹಾಕಿಕೊಂಡು ಓಡಾಡುತ್ತಿದ್ದಾನೆ. ಇದೇ ಜೂನ್ 2… ತಾರೀಖು ಅಲ್ಲಿ ಹೊಸದಾಗಿ ಕಟ್ಟುತ್ತಿದ್ದ ಸ್ಲಂ … ಮನೆಯನ್ನು ಬೀಳಿಸಿ, ಜನರಿಗೆ ಹೊಡೆಯಲು ಹೆ… ಅಲ್ಲಿನ ಹೆಂಗಸರಿಂದಲೇ ಗೂಸಾ ತಿಂದು ಬಂದಿ…

ಇನ್ನಾದರೂ ಮಂತ್ರಿ ಜಯಕುಮಾರ್ … ಗಾಂಚಾಲಿ ಗಡವಾಗಳಿಗೆ ಬುದ್ಧಿ ಹೇಳದಿದ್ದರೆ ದ… ಸಂಘಟನೆಗಳಿಂದ ಇಕ್ಕಿಸಿಕೊಳ್ಳುವುದು ಗ್ಯಾರಂಟಿ…

-ವರದಿಗಾ…


ನಾಯಿಗಳಿಗಾಗಿ ಬಾಬು ನಿರ್ಮಿಸಿರುವ ಶೆಡ್

ಸ್ಲಂ ಬೋರ್ಡ್ ಎಂಬ ಕೊಳಚೆ ಮಂಡಳಿ!

ಕೊಳಚೆ ನಿರ್ಮೂಲನಾ ಮಂಡಳಿ ಏರಿಯಾ ಒಂದನ್ನು ಸ್ಲಂ ಎಂದು ಡಿಕ್ಲೇರ್ ಮಾಡುವಾಗ ಮೂರು ಹಂತಗಳಿರುತ್ತವೆ.

1. ಐ.ಡಿ.ಎಫ್ - ಸ್ಲಂ ಜಾಗವನ್ನು ಗುರ್ತಿಸುವ ಹಂತ. 2. 3ಜಿ- ಸ್ಲಂ ಎಂದು ಸಾಬೀತಾದ ಜಾಗವನ್ನು ಪ್ರಿಲಿಮಿನರಿಯಾಗಿ ಕಾನೂನಾತ್ಮಕವಾಗಿ ಡಿಕ್ಲೇರ್ ಮಾಡುವುದು. 3. 3ಎಫ್- ಈ ಹಂತದಲ್ಲಿ ಸ್ಲಂ ಎಂದು ಘೋಷಿಸಿದ ಜಾಗದ ಮೇಲೆ ಯಾವುದೇ ರೀತಿಯ ತಕರಾರುಗಳಿದ್ದರೂ, ಪರಿಶೀಲಿಸಲು ಅರ್ಜಿ ಕರೆಯಲಾಗುತ್ತದೆ. ಒಂದು ವೇಳೆ ಯಾರಾದರೂ ಬಂದು ಈ ಜಾಗ ನನಗೆ ಸೇರಿದ್ದು ಎಂದು ದಾಖಲೆಗಳ ಮೂಲಕ ಸಾಬೀತು ಪಡಿಸಿದರೆ, ಅಂದಿನ ಮಾರ್ಕೆಟ್ ರೇಟ್‌ನಂತೆ ಆತನಿಗೆ ಹಣ ಕೊಟ್ಟು ಸ್ಲಂ ಬೋರ್ಡೇ ಆ ಜಾಗವನ್ನು ಕೊಂಡುಕೊಳ್ಳುತ್ತದೆ.




ಆದರೆ 3-ಎಫ್ ಅವಧಿಯಲ್ಲಿ ಯಾವ ಧೀರನೂ ಇದು ನನ್ನದು ಎಂದು ಬಂದಿಲ್ಲವಾದ್ದರಿಂದ ಅದು 'ಸ್ಲಂ' ಎಂದು ಸಂಪೂರ್ಣ ಘೋಷಿಸಲ್ಪಟ್ಟಿದೆ. ಆದರೆ ಅದು ಸ್ಲಂ ಎಂದು ಡಿಕ್ಲೇರ್ ಆದ 30 ವರ್ಷಗಳಲ್ಲಿ ಅಲ್ಲಿನ ನಿವಾಸಿಗಳಿಗೆ ಮನೆ ಕಟ್ಟಲಾಗಲೀ, ದುರಸ್ಥಿ ಮಾಡಲಾಗಲೀ ಸ್ಲಂ ಬೋರ್ಡ್ ಅನುಮತಿ ನೀಡಿಲ್ಲ. ಆದರೆ ಗುರುತು ಚೀಟಿ, ಓಟ್ ಕಾರ್ಡ್, ರೇಷನ್ ಕಾರ್ಡ್ ಎಲ್ಲವನ್ನೂ ಈ ಜನರಿಗೆ ನೀಡಿದೆ. ಇಷ್ಟೆಲ್ಲಾ ಆಗಿಯೂ ಈ ಶಿವಶಂಕರ್, ಹರಿಸಿಂಗ್‌ಗಳು ಬಾಬುವಿನ ಎಂಜಲಿಗೆ ಆಸೆ ಪಟ್ಟು ಅವನ ಕಾನೂನು ಮುರಿಯುವ ಕೆಲಸಗಳಿಗೆ ಅಡ್ಡದಾರಿಗಳನ್ನು ಹುಡುಕಿಕೊಡುತ್ತಿದ್ದಾರೆ.

ಇವರು ತಿಪ್ಪರಲಾಗ ಹಾಕಿದರೂ ಸ್ಲಂ ನಿವಾಸಿಗಳ ಭೂಮಿಯ ಹಕ್ಕನ್ನು ಕಿತ್ತುಕೊಳ್ಳಲಾಗದಿದ್ದರೂ ಬಡವರನ್ನು ತುಳಿಯುವುದು ಯಾವ ಲೆಕ್ಕ ಎಂಬ ಪಾಳೇಗಾರಿ ಬುದ್ಧಿಯ ಬಲದಿಂದ ಈ ಕಾನೂನು ವಿರೋಧಿ ಕೆಲಸ ಮಾಡುತ್ತಿದ್ದಾರೆ.

ಕೋ-ಜಾ ಸರ್ಕಾರದ ಗೂಂಡಾ ರಾಜ್ಯ!

ಇತ್ತೀಚಿನವರೆಗೂ ತೆರೆಮರೆಯಲ್ಲಿ ನಡೆಯುತ್ತಿದ್ದ ರಿಯಲ್ ಎಸ್ಟೇಟ್ ದಂಧೆ ಕುಮಾರಸ್ವಾಮಿ ಸರ್ಕಾರ ಬಂದ ಮೇಲೆ ರಾಜಾರೋಷವಾಗಿ ನಡೆಯುತ್ತಿರುವುದರ ಹಿಂದಿನ ಸತ್ಯಗಳು ಎಂಥವೋ ಗೊತ್ತಿಲ್ಲ. ಆದರೆ ಈ ದಂಧೆ ಬೆಂಗಳೂರಿನಿಂದ ಶುರುವಾಗಿ ಗ್ರಾಮಾಂತರ ಪ್ರದೇಶದ ಮೂಲೆಯೊಂದರ ಬಡವರನ್ನೂ ಬಿಡದೆ ಬೀದಿಗೆ ತಳ್ಳುತ್ತಿರುವುದು ಇನ್ನೊಂದು ಮಗ್ಗುಲಿನ ಸತ್ಯ. ಜನ ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಈ ಕೋ-ಜಾ ಸರ್ಕಾರ, ರೌಡಿಗಳಿಗೆ, ರಿಯಲ್ ಎಸ್ಟೇಟ್ ದಂಧೆಕೋರರಿಗೆಲ್ಲಾ ಸರ್ಕಾರದಿಂದಲೇ ಐಡೆಂಟಿಟಿ ಕಾರ್ಡ್ ನೀಡಿಬಿಡುತ್ತದೆ. ಆ ಮೂಲಕ ಕರ್ನಾಟಕವನ್ನು ಗೂಂಡಾರಾಜ್ಯ ಮಾಡಿಬಿಡುತ್ತಾರೆ.




ಇದರ ಭಾಗವಾಗಿ ನಗರದ ಮೂಲೆಮೂಲೆಗಳಲ್ಲಿ ಸ್ಲಂ ಜನರ ಎತ್ತಂಗಡಿ ನಡೆಯುತ್ತಿದೆ. ಇದ್ದಕ್ಕಿದ್ದಂತೆ ಸ್ಲಂಗಳಿಗೆ ಬೆಂಕಿ ಬೀಳುತ್ತಿದೆ. ಉದ್ಯಾನನಗರಿಯ ಪ್ರತಿಷ್ಠಿತ ಬಿಲ್ಡಿಂಗ್‌ಗಳು, ಉದ್ಯಾನಗಳು, ರಸ್ತೆಗಳು ಎಲ್ಲದಕ್ಕೂ ಸ್ಲಂ ನಿವಾಸಿಗಳನ್ನೇ ನಂಬಿರುವ ಸರ್ಕಾರಗ… ಬಿಲ್ಡರ್-ಬಂಡವಾಳಿಗರು ಅವರ ಸೂರುಗಳ … ಯೋಚಿಸುತ್ತಿಲ್ಲ. ಇನ್ನು ಕನ್ನಡ-ಕರ್ನಾಟಕದ ರಕ್ಷಣೆಯಿ… ಇಂಗ್ಲಿಷ್ ಬೋರ್ಡುಗಳಿಗೆ ಮಸಿ ಬಳಿಯುವ… ಎ.ಸಿ. ರೂಮುಗಳಲ್ಲಿ ಕುಳಿತು ಕ… ಕಡ್ಡಾಯ ಎನ್ನುವುದು, ಪರ ಭಾಷಿಕ… ಹಿಂಸಿಸುವುದು ಎಂದೇ ನಂಬಿರುವ ಕ… ಸಂಘಟನೆಗಳು ಸ್ಲಂಗಳ ಕಡೆ ತಿರುಗಿಯ… ನೋಡುತ್ತಿಲ್ಲ. ನಗರದ ನೂರಾರು … ಜನ ಬಟ್ಟೆ-ಮೈ ತೊಳೆಯಲು ಚ… ನೀರನ್ನು ಬಳಸುತ್ತಿದ್ದರೂ ಇವರು ಕಾವ… ಕೃಷ್ಣಾ ನೀರಿನ ಬಗ್ಗೆ ಮಾತನಾಡು… ಬಡ ಜನರಿಗೆ ಗೂಂಡಾಗಳು, ಪೊಲೀಸ… ರಾಜಕಾರಣಿಗಳು, ಚಳವಳಿಗಾರರ ಮಧ್ಯೆ ವ್ಯತ್ಯಾ… ಗೊತ್ತಾಗುತ್ತಿಲ್ಲ. ಕಾಯುವ ಕೈಯಲ್ಲೂ ದೊಣ್ಣೆ, ಕೊ… ಕೈಯಲ್ಲೂ ದೊಣ್ಣೆ ಕೊಟ್ಟು ಆಟ ನೋಡುತ್ತಿವೆ ಇ… ಸರ್ಕಾರಗಳು... "ನಮ್ಮ ನೋವು ತಗುಲಿ ಹಾ… ಹೋಗ್ತೀರಾ..." ಅಂತ ಬಡವರು ಗೋಳಾಡ್ತಾನೇ ಇ…

ಈ ಚಿತ್ರ ನೋಡಬೇಕೇ?

'ತಿರುಪತಿ' – ಗೋವಿಂದ! ಗೋವಿಂದ!

"ಅರವತ್ತು ಎಂಭತ್ತು ಅರವತ್ತು ಎಂಭತ್ತು" ...ತ ಬ್ಲ್ಯಾಕ್ ಟಿಕೆಟ್‌ನವನು ಥಿಯೇಟರ್ ...ಂದೆ ...ನಗುತ್ತಿದ್ದದ್ದನ್ನು ...ದಿ. "ಈ ...ಮಾ ಟಿಕೆಟ್ ...ಕ್‌ನಲ್ಲಿ ಮಾರಾಟ ...ಗುತ್ತಿದೆಯಲ್ಲಾ, ...ವಾಗಿಲ್ಲ" ...ದುಕೊಂಡೆ.




...ರೆ 'ತಿರುಪತಿ' ಅತಿ ಘೋರವಾದ ಸಿನಿಮಾ ...ತ ಆಮೇಲೆ ಅನುಭವವಾಯ್ತು. ಈಗಲೂ ...ರು ಆ ಸಿನಿಮಾದಲ್ಲಿನ ಗಲಾಟೆ, ...ಾಲಾದಿಂದ ಚೇತರಿಸಿಕೊಂಡಿಲ್ಲ.

... ಒಬಿರಾಯನ ಕಥೆ. ಶಿವಮಣಿ ಅದು ಹೇಗೆ ...ರ್ಮಾಪಕ ಆರ್.ಎಸ್. ಗೌಡರನ್ನು ಈ ಸಿನಿಮಾ ...ಡಲು ಒಪ್ಪಿಸಿದರೋ ಗೊತ್ತಿಲ್ಲ. ಕಥೆಗಂತೂ ...ಕ್ಯವಿಲ್ಲವಾದ್ದರಿಂದ ಶಿವಮಣಿಯವರ "ಚಾರ್ಮ್" ...ಬಹುದೇನೋ?

... ಮಾರ್ಗರೆಟ್ (ಸುಧಾರಾಣಿ) ಮಹಾನಗರ ...ಲಿಕೆಯ ಸ್ಟ್ರಿಕ್ಟ್ ಕಮಿಷನರ್. ಯಾವುದೋ ಒಂದು ...ಡ್ಡ ಸೈಟನ್ನು ಗೂಂಡಾ ಮೈಕೇಲ್ ರಾಜ ...ರ್ಮ್‌ರಾಜ್) ಕಬಳಿಸಿರುತ್ತಾನೆ. ಅವಳು "ಜಾಗ ...ಲಿ ಮಾಡಿ, ಇಲ್ಲಾ ಅಂದ್ರೆ...." ಅಂತ ಬೆದರಿಸು...ಳೆ. ಆಗ ಮೈಕೇಲ್‌ನ ಮಗ ಮತ್ತು ಸ್ನೇಹಿತರು ...ದು ಅವಳನ್ನು ರೇಪ್ ಮಾಡಿ ಅವಳ ಸ್ನೇಹಿತರನ್ನು ...ಲ್ಲುತ್ತಾರೆ. ಆದರೆ ಅವರಲ್ಲಿ ಒಬ್ಬ ಮಾತ್ರ 'ಹಾಫ್ ...ರ್ಡರ್' ಆಗಿರುತ್ತಾನೆ. ಅವನು ಸಾಯುತ್ತಿರುವ ...ರ್ಗರೆಟ್‌ಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ...ಲು ಪೊಲೀಸ್ ಸ್ಟೇಷನ್ನಿಗೆ ಎತ್ತಿಕೊಂಡು ಬರುತ್ತಾನೆ. ... ಪೊಲೀಸರು ಕೇಡಿಗಳ ಕಡೆ ಇರುತ್ತಾರಲ್ಲ, ಹಾಗೆ ಒಬ್ಬ ಪೊಲೀಸ್ ಅಲ್ಲಿರುತ್ತಾನೆ. ಅವಳು ಕೊನೆ ಉಸಿರು ಬಿಡುವವರೆಗೂ ಏನೂ ಮಾಡದೆ, ಆಕೆ ಸತ್ತ ಮೇಲೆ "ನೀನೇ ಅವಳನ್ನು ರೇಪ್ ಮಾಡಿ ಸಾಯಿಸಿದ್ದು" ಅಂತ ಅವಳ ಸ್ನೇಹಿತನನ್ನೇ ಜೈಲಿಗೆ ಹಾಕುತ್ತಾನೆ.

ಈ ಕೇಸನ್ನು ಪತ್ತೆ ಮಾಡಲು 'ತಿರುಪತಿ' (ಸುದೀಪ್) ಅಲ್ಲದೆ ಇನ್ಯಾರಿಂದಲೂ ಸಾಧ್ಯವಿಲ್ಲ ಅಂತ ಅವನನ್ನು ಕಳುಹಿಸುತ್ತಾರೆ. ಅವನು ಬಂದು ಯಾವ ತನಿಖೆಯನ್ನೂ ಮಾಡದೆ ಮೈಕೇಲ್‌ನ ಮಗನನ್ನು ಜೈಲಿಗೆ ಹಾಕುತ್ತಾನೆ. ಮೈಕೇಲ್ ಬಂದು ಕಿರುಚುತ್ತಾನೆ. ಇವನೂ ಚೀರಾಡುತ್ತಾನೆ. "ನೀನು ಯಾರು ಅಂತ ನನಗೆ ಚೆನ್ನಾಗಿ ಗೊತ್ತು, ಮೈಕೇಲ್ ಅಲಿಯಾಸ್ ಧರ್ಮರಾಜ್" ಅಂತ ತಿರುಪತಿ ಅವಾಜ್ ಹಾಕುತ್ತಾನೆ. ಕ್ರಮೇಣ ಗೊತ್ತಾಗುತ್ತೆ ತಿರುಪತಿ ಇನ್ಯಾರೂ ಅಲ್ಲ, ಅದೇ ಮೈಕೇಲ್‌ನ ಮಗ ಅಂತ. ಅವನು ಚಿಕ್ಕವನಾಗಿದ್ದಾಗಲೇ ಅವನ ತಾಯಿಯನ್ನು ತನ್ನ ಬಾಸ್‌ಗೆ ಮಾರಲು ತಂದೆ ಪ್ರಯತ್ನ ಮಾಡಿರುತ್ತಾನೆ. ಅದನ್ನು ತಡೆಯಲು ಬರುವ ಮಗ ಆಕಾಶ್, ಬಾಸ್‌ನನ್ನು ಕೊಂದು ಹತ್ತು ವರ್ಷ ಜೈಲಿಗೆ ಹೋಗಿರುತ್ತಾನೆ. "ನೀನು ದುಷ್ಟರನ್ನು ನಾಶ ಮಾಡಬೇಕು" ಅಂತ ಅವನ ತಾಯಿ ಆತನ ತಲೆ ತುಂಬಿ, ಆಮೇಲೆ ತಲೆಗೆ ಬೋಳಿಸಿ, 'ತಿರುಪತಿ' ಅಂತ ಹೆಸರಿಟ್ಟು ಅವನು ಎಸಿಪಿಯಾಗುವಂತೆ ಬೆಳೆಸಿರುತ್ತಾಳೆ.

ಸಿನಿಮಾ ಹೀಗೆ ಮುಂದುವರಿಯುತ್ತೆ, ಹಲವಾರು ರೌಡಿಗಳು ಬಂದು ಹೋಗುತ್ತಾರೆ. ಇದರಲ್ಲಿ ಒಬ್ಬನ ಹೆಸರು ಒಂಟೆ ಅಂತ. ಅವನಿಗೂ ಬಹಳಷ್ಟು ಶಿಳ್ಳೆಗಳು ಕೇಳಿ ಬಂತು. "ಖಾಕಿ ಹಾಕಿದ್ರೆ ಕ್ಲಾಸ್, ಬಿಚ್ಚಿದ್ರೆ ಮಾಸ್" ಅಂತ ಹೇಳುತ್ತಾ ತಿರುಪತಿ ಎಲ್ಲರನ್ನೂ ಫಿನಿಷ್ ಮಾಡುತ್ತಾನೆ. ಕೊನೆಗೆ ಎಂದಿನಂತೆ ಮೈಕೇಲ್ ತನ್ನ ಹಳೆ ಹೆಂಡತಿ (ಅಂದ್ರೆ ತಿರುಪತಿಯ ತಾಯಿ)ಯನ್ನು ಅಪಹರಿಸಿ, ತಿರುಪತಿಯ ಕೈಯಲ್ಲೇ ಕೊಲೆ ಆಗುತ್ತಾನೆ. ಆತ ಸತ್ತ ಕೂಡಲೇ ತಿರುಪತಿಯ ತಾಯಿ ಹೆಮ್ಮೆಯಿಂದ ಹಣೆಯಿಂದ ಕುಂಕುಮವನ್ನು ಅಳಿಸಿಕೊಳ್ಳುತ್ತಾಳೆ.




ಹೇಳೋದನ್ನು ಮರೆತಿದ್ದೆ: ಇದರ ಮಧ್ಯದಲ್ಲಿ ಪೂಜಾ ಕನ್ವಲ್ ಬಂದು "ನೀನು ನನ್ನನ್ನು ಪ್ರೀತಿಸದೇ ಇದ್ರೆ ಪೆಟ್ರೋಲ್ ಹಾಕಿಕೊಂಡು ಸಾಯುತ್ತೇನೆ" ಅಂತ ತಿರುಪತಿಯನ್ನು ಬೆದರಿಸಿ ಬ್ಯಾಂಕಾಕ್‌ನಲ್ಲಿ ಹಾಡು ಹೇಳಿ ಮೂರು ಸೀನುಗಳಲ್ಲಿ ಬಂದು ಹೋಗುತ್ತಾಳೆ. ಹೀಗೆ ಬೆದರಿಸಿ ಪ್ರೀತಿ ಮಾಡುವುದು ಬರೀ ಹೀರೋಗಳಿಗೆ, ಅದರಲ್ಲೂ ಉಪೇಂದ್ರರವರಿಗೆ ಸೀಮಿತ ಅಂದುಕೊಂಡಿದ್ದೆ. ಈಗ ಹುಡುಗಿಯರೂ ಶುರು ಹಚ್ಚಿದ್ದಾರೆ. ಅವಳ ಪಾತ್ರಕ್ಕೆ ಎಷ್ಟು ಪ್ರಾಮುಖ್ಯತೆ ಇದೆ ಅಂದರೆ, ನಿರ್ದೇಶಕರು ಮೊದಲು ಅವಳನ್ನು 'ನಂದಿನಿ' ಅಂತ ಪರಿಚಯ ಮಾಡಿ ಆಮೇಲೆ ಪೂಜ ಅಂತ ಪರಿಚಯ ಮಾಡುತ್ತಾರೆ. ತಮ್ಮ ಸಿನಿಮಾದ ಪಾತ್ರಧಾರಿಣಿಯ ಹೆಸರನ್ನು ಅವರು ಮರೆತಿದ್ದರೋ ಅಥವಾ ನನ್ನ ತಲೆನೇ ಅಷ್ಟುಹೊತ್ತಿಗೆ ಕೆಟ್ಟು ಹೋಗಿತ್ತೋ ಗೊತ್ತಿಲ್ಲ.

ನಿರ್ಮಾಪಕರು ವಿದೇಶಕ್ಕೆ ಮತ್ತು ಎಫೆಕ್ಟ್ಸ್‌ಗೆ ಹಣ ಹಾಕಿದ್ದಾರೆ. ಆದರೆ ಬ್ಯಾಂಕಾಕ್‌ಗೆ ಹೋಗಿ ಪಾರ್ಕಿಂಗ್ ಲಾಟ್‌ನಲ್ಲಿ ಚಿತ್ರೀಕರಿಸುವ ಬದಲು ನಮ್ಮ ಎಂ.ಜಿ. ರಸ್ತೆ ಅಥವಾ ಬ್ರಿಗೇಡ್ ರಸ್ತೆನೇ ಚೆನ್ನಾಗಿ ಕಾಣುತ್ತಿತ್ತೋ ಏನೋ?

'ತಿರುಪತಿ' ನೋಡಲು ಧೈರ್ಯ ಮಾಡುವವರಿಗೆ ನಮ್ಮ ಶುಭ ಹಾರೈಕೆ ಇದೆ.

–ಕವಿತಾ ಲಂಕೇಶ್

ಹೆಣ್ಣಾಗುವುದು ಇಲ್ಲೇ...



...ಗೆಮನೆ ಬಾಯಿ ನೀರೂರಿಸುವ
...ವರಿ ಪರಿಮಳಗಳ ಭಂಡಾರ.

...ದೆ ನನಗೆ
...ಣೆಯ ಘಮಘಮ,
...ರ ದೇವರ ಕೋಣೆಯಿಂದ
...ಮಗಡ್ಡಿಯ ಸುಗಂಧ,
... ಕಡೆಯುವ ಬೀಸಿಗೆ
...ಕೆ ತಿಕ್ಕುವ ಕೆರೆತಕ್ಕೆ
... ಬೆಳಗ್ಗೆ
...ಗೆಮನೆ ಎಚ್ಚರಾಗುತ್ತಿತ್ತು
...ದು ಮಣ್ಣಲ್ಲಿ ಸಾರಿಸಿದ
...ೋಲಿ ಇಟ್ಟು ಅಲಂಕರಿಸಿದ
... ಇದೆಲ್ಲದರ ಮಧ್ಯದಲ್ಲಿ
... ಉರಿಯಲು ಈಗ ಸಿದ್ಧ.
...ವೆ ಡಬ್ಬಿಯಲ್ಲಿ
...ಿಟ್ಟ ಪುಡಿಗಾಸು
...ೊಮ್ಮೆ ಸಿಹಿಪಾಕಗಳೂ ಸಹ
... ಬೇಳೆ ಬೆಲ್ಲಗಳನಿಟ್ಟು
...ೆ ಮನೆ ಆಟ
...ಮ್ಮ ನೀನು ಅಪ್ಪ.
...ದ ಮನಸ್ಸಿಗೆ
...ೆಮನೆಯೆಂಬುದು ಮಾಯಾಲೋಕ.

...ೆತನಕ್ಕೆ ಬಡ್ತಿ ಸಿಕ್ಕಿದ
...ರ ಹುಡುಗಿಗೆ
...ೆಯೆಂಬುದು ಹುಡುಗಾಟವಲ್ಲ.
...ೊಬ್ಬ ಹುಡುಗಿಯೂ ಹೆಣ್ಣಾಗುವುದು
...ೋ, ಈ ಅಡಿಗೆಮನೆಯಲ್ಲಿ
...ಳ ತಾಯಿಯಂತೆ, ಅವಳ ತಾಯಿಯ
...ಯಂತೆ

...ೊಂದೂ ಅಡಿಗೆಮನೆ
... ಮನೆಯಂತೆ
...ಡೆಯ ಹೊಗೆಯಲ್ಲಿ ತೂಗಿರುವ
..., ಡಬ್ಬ, ಮೂಟೆಗಳು

... ಅಮ್ಮ
...ತ್ತಿರುವ ಪ್ರೇತದಂತೆ
...ಾಡುವ ಅಡಿಗೆಮನೆಯಂತೆ
...ಳೋ ನೀರಿನ ಕೊಳಗಳೋ
...ೋ ಚಮಚಗಳೋ,
...ಗಳೋ ಸೌಟುಗಳೋ, ಹುರಿಯುವ
...ಗಳೋ,
... ಬಿಸಿಗಳೋ.

ಕೆಲವೊಮ್ಮೆ ಅಮ್ಮ
ಹತ್ತಿ ಉರಿಯುತ್ತಿರುವ ಕುಲುಮೆಯಂತೆ
ಬೆಳಗುತ್ತಾಳೆ
ಅತ್ತಿಂದಿತ್ತ ತಿರುಗುತ್ತಾ
ಪಾತ್ರೆಗಳನ್ನು ಬಡಿಯುತ್ತಾ ಇನ್ನು ಕೆಲವೊಮ್ಮೆ
ಬೋನಲ್ಲಿ ಬಿದ್ದ ಸಿಂಹದಂತೆ.
ಹೇಳುವುದು ಸುಲಭ!
ಅಡಿಗೆ ಏನ್ ಮಹಾ?
ಸೌಟು ಮಗುಚಿದರೆ ಆಯಿತು!
ಈಗೀಗ ಅಡಿಗೆ ಮನೆಗೆ ಬರುವವರು ಕಮ್ಮಿ.
ತಿನ್ನಲು ನೆನಪಾದಾಗ ಮಾತ್ರ.

ಅಮ್ಮ ಅಡಿಗೆ ಮನೆಯ ಸಾಮ್ರಾಜ್ಞಿ
ಪಾತ್ರೆ ಪಡಗಗಳ ಮೇಲೆ ಕೆತ್ತಿಸಿದ ಹೆಸರು ಮಾತ್ರ
ಅಪ್ಪನದೇ

ನಾನು ಭಾರೀ ಅದೃಷ್ಟವಂತೆ
ನನ್ನ ಅಡಿಗೆ ಮನೆಯಲ್ಲಿ ಏನು ತಾನೇ ಇಲ್ಲ!
ಗ್ಯಾಸ್ ಒಲೆ, ಮಿಕ್ಸರ್, ಗ್ರೈಂಡರ್ ಇತ್ಯಾದಿ
ಇತ್ಯಾದಿ

ನಾನೀಗ ಮಾಡುವುದು ಕೇಕು ಬಿಸ್ಕತ್ತುಗಳನ್ನು
ನನ್ನಮ್ಮನ ಕಾಲದ ಕುರುಕು ಮುರುಕುಗಳನ್ನಲ್ಲ.
ಆದರೂ ಇಂದಿಗೂ
ಪಾತ್ರೆ ಪಡಗಗಳ ಮೇಲಿರುವುದು
ನನ್ನ ಹೆಸರೇನಲ್ಲ,
ನನ್ನ ಗಂಡನದು

ನನ್ನ ಅಡಿಗೆಮನೆ ಎಚ್ಚರಾಗುವುದು
ಪ್ರೆಶರ್ ಕುಕ್ಕರಿನ ಶಿಳ್ಳೆಗೆ
ಗರ್ರೆನ್ನುವ ಗ್ರೈಂಡರಿಗೆ
ನಾನೀಗ ಸುಸಜ್ಜಿತ ಅಡಿಗೆಮನೆ
ರೊಯ್ಯನೆ ತಿರುಗುವ ಯಂತ್ರದ ಗೊಂಬೆ
ಅಡಿಗೆಮನೆಯೊಂದು ಸದಾ
ಗಲಗಲ ಶಬ್ದ ಮಾಡುವ ಕಾರ್ಯಾಗಾರ,
ಸದಾ ಕೆಲಸದಲ್ಲಿ ಮುಳುಗಿದ
ಕಟುಕನ ಅಂಗಡಿ
ಅಡಿಗೆ ಮಾಡುತ್ತಾ, ಬಡಿಸುತ್ತಾ,
ತೊಳೆಯುತ್ತಾ, ಬಳಿಯುತ್ತಾ,
ಮತ್ತೆ ಅಡಿಗೆ ಮಾಡುತ್ತಾ...
ಕನಸಲ್ಲಿ ಬಂದು ಕಾಡುವ
ನನ್ನ ಕಲಾತ್ಮಕ ಅಡಿಗೆಮನೆಯೇ ಬೇರೆ,
ಮಲ್ಲಿಗೆಯ ಕಂಪಿನಲ್ಲೂ ಒಗ್ಗರಣೆಯ ಸೊಗಡು

ಅನಿಷ್ಟ ಅಡಿಗೆಮನೆಗಳು!
ಬೆಂಕಿ ಬೀಳಲಿ
ಸುಟ್ಟು ಕರಕಾಗುವ ತನಕ!
ದೈತ್ಯ ಹದ್ದಿನಂತೆ ನಮ್ಮ ಕಾಲವನ್ನು ಕಬಳಿಸಿ,
ಬದುಕಿನ ಸಾರವನ್ನು ಹೀರಿ
ಕನಸುಗಳ ಗೋರಿ ಕಟ್ಟುವ ಜಾಗಗಳು
ನಮ್ಮನ್ನು ಸೌಟುಗಳನ್ನಾಗಿ ತಿರುಗಿಸುವ
ಈ ಅಡಿಗೆಮನೆಗಳನ್ನು
ಹಾಳುಗೆಡವಬೇಕು.
ಪಾತ್ರೆ ಪಡಗಗಳ ಹೆಂಚು ಹರಿವಾಣಗಳ ಮೇಲಿನ
ಹೆಸರನ್ನು ಅಳಿಸಬೇಕು
ಹತ್ತಿ ಉರಿಸುವ ಒಲೆಗಳನ್ನು ಕಿತ್ತೊಗೆಯಬೇಕು
ನಮ್ಮ ಮಗಳಂದಿರು
ಒಂಟಿಯಾಗಿ ಅಡಿಗೆಮನೆಯಲ್ಲಿ ಬಂಧಿಯಾಗುವ
ಮುನ್ನ
ಈ ಒಂಟಿತನವನ್ನು ಇನ್ನಿಲ್ಲವಾಗಿಸಬೇಕು

ನಮ್ಮ ಮಕ್ಕಳಿಗೋಸ್ಕರವೇ.

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ
(ಮೂಲ: ತೆಲುಗು ಲೇಖಕಿ
ವಿಮಲ ಅವರ 'ವಂಟಿಲ್ಲು')

ವಿಮಲ ಹುಟ್ಟಿದ್ದು ಮೇ ದಿನದಂದು ಹೈದರಾಬಾದಿನಲ್ಲಿ. ತಂದೆ ತೆಲಂಗಾಣ ಜನಪರ ಹೋರಾಟದಲ್ಲಿ ಭಾಗವಹಿಸಿದ್ದ ವ್ಯಕ್ತಿ. 'ಅದು ಮಾಡಬಾರದು, ಇದು ಮಾಡಬಾರದು, ನೀನೊಬ್ಬಳು ಹುಡುಗಿ ಎಂದು ನನಗೆ ಮನೆಯಲ್ಲಿ ಯಾವತ್ತೂ ಹೇಳಿದ್ದೇ ಇಲ್ಲ. ನನ್ನಮ್ಮ ಮಾತ್ರ ಯಾವಾಗಲೂ ಅಡಿಗೆಮನೆಯಲ್ಲಿ ಇರುತ್ತಿದ್ದಳು. 'ವಂಟಿಲ್ಲು' (ಅಡಿಗೆಮನೆ) ಬರೆದಾಗ ನನ್ನ ಮನಸ್ಸಲ್ಲಿ ಇದ್ದದ್ದು ನನ್ನ ಅಮ್ಮ.' ಎಂದು ಹೇಳುವ ವಿಮಲ ಅವರ ಮನೆ ತುಂಬ ಪುಸ್ತಕಗಳು. ಓದುವ ತೀವ್ರ ಗೀಳು ಬೆಳೆಸಿಕೊಂಡ ವಿಮಲ ಸ್ಕೂಲ್ ವಿದ್ಯಾಭ್ಯಾಸ ಮುಗಿಸುವ ಹೊತ್ತಿಗೆ ತೆಲುಗು ಸಾಹಿತ್ಯದ ಹೆಚ್ಚುಕಮ್ಮಿ ಎಲ್ಲ ಮುಖ್ಯ ಕೃತಿಗಳನ್ನು ಓದಿಯಾಗಿತ್ತು. ಶ್ರೀಶ್ರೀಯವರ ಕಾವ್ಯದಿಂದ ಮತ್ತು ತೆನ್ನೇಟಿ ಸೂರಿ ಅವರ ಚಾರಿತ್ರಿಕ 'ಚಂಗೇಜ್ ಖಾನ್' ಕೃತಿಗಳಿಂದ ಅಪಾರವಾಗಿ ಪ್ರಭಾವಿತರಾಗಿದ್ದರು ವಿಮಲ.

1991 ರ ಮೊದಲ ದಿನಗಳಲ್ಲಿ ಕರೀಮ್ ನಗರದಲ್ಲಿ ನಡೆದ ಆಂಧ್ರಪ್ರದೇಶದ ಅತ್ಯಂತ ಬೃಹತ್ ಸಾರಾಯಿ ವಿರೋಧಿ ಚಳವಳಿಯಲ್ಲಿ ಹೆಂಗಸರನ್ನು ಸಂಘಟಿಸುವ ಕೆಲಸದಲ್ಲಿ ವಿಮಲ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೆಂಡದಿಂದ ಸರ್ಕಾರಕ್ಕೆ ಬರುವ ವರಮಾನದಿಂದಾಗಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ಹಳ್ಳಿಗಳಲ್ಲಿಯೂ ಹೆಂಡದಂಗಡಿಗಳು ಸರ್ಕಾರದ ಆಶೀರ್ವಾದದಿಂದಲೇ ರಾರಾಜಿಸುವುದು ಎಲ್ಲರಿಗೂ ಗೊತ್ತು. ದುಡಿದ ದುಡ್ಡನ್ನು ಹೆಂಡಕ್ಕೆ ಅಡಾವುಡಿ ಮಾಡುವುದಷ್ಟೇ ಅಲ್ಲ, ಕುಡಿದು ಬಂದು ಹೆಂಡತಿ ಮಕ್ಕಳನ್ನು ಥಳಿಸುವ ಗಂಡಸರ ಚಟಕ್ಕೆ ಹೆಂಗಸರು ಬೇಸತ್ತಿದ್ದರು. ಹೆಂಡದಂಗಡಿಗಳ ಮೇಲೆ ಪಿಕೆಟಿಂಗ್ ನಡೆಸಿ ಹೆಂಡಗುಡುಕ ಗಂಡಸರನ್ನು ಬಹಿಷ್ಕರಿಸುವ ಹೆಂಗಸರ ಉತ್ಸಾಹ ಕರೀಮ್ ನಗರದಲ್ಲಿ ನಡೆದ ಬೃಹತ್ ಸಮಾವೇಶಕ್ಕೆ ನಾಂದಿಯಾಯಿತು. ಜನವರಿ 11, 1991 ರಂದು ಸುಮಾರು ಇಪ್ಪತ್ತು ಸಾವಿರ ಹೆಂಗಸರು ಈ ಸಮಾವೇಶದಲ್ಲಿ ಜಮಾಯಿಸಿದ್ದರು. ಸರ್ಕಾರದ ಪ್ರತಿಕ್ರಿಯೆಯನ್ನು ವಿಮಲ ಬಣ್ಣಿಸಿದ್ದು ಹೀಗೆ: 'ಸುಮಾರು ಆರುನೂರು ಸಶಸ್ತ್ರ ಪೊಲೀಸರನ್ನು ಅಲ್ಲಿ ನಿಯಮಿಸಲಾಗಿತ್ತು. ಹೆಂಡದ ದೊರೆಗಳ ಹಿತಾಸಕ್ತಿಗಳನ್ನು ಕಾಯಲು ಅವರು ಸಿದ್ಧರಾಗಿ ನಿಂತಿದ್ದರು. ನನಗೆ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಭಾರೀ ಸಂಖ್ಯೆಯಲ್ಲಿ ಸಶಸ್ತ್ರ ಪೊಲೀಸರನ್ನು ನೋಡಿದಾಗ ಯಾವುದೋ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ ಯೇನೋ ಅಂತ ಅಂದುಕೊಂಡೆ!'

(ಆಕರ ಗ್ರಂಥ: ಸೂಸಿ ಥಾರು ಮತ್ತು ಲಲಿತ. ಕೆ ಅವರ ವಿಮೆನ್ ರೈಟಿಂಗ್ ಇನ್ ಇಂಡಿಯಾ, ಸಂಪುಟ ಎರಡು, 1993)

ಜಯಮಾಲಾರ ಅಯ್ಯಪ್ಪನ್ ತುತ್ತೂರಿ

ಶಬರಿಮಲೈ ಅಯ್ಯಪ್ಪನ್ ದೇವ ಸ್ಥಾನದ ಆವರಣ.

ಶುಕ್ರವಾರ. ಬೆಳಗಿನ 11 ಗಂಟೆಯ ಸಮಯ.

ಭಗವಂತನ ಇಚ್ಛೆ ತಿಳಿಯಲು ಅಷ್ಟಮಂಗಲ ದೇವಪ್ರಶ್ನಂ ನಡೆಯುವ ಸಂದರ್ಭ. ಈ ಕ್ರಿಯಾ ವಿಧಿ ನಡೆಸಲು ಜ್ಯೋತಿಷಿ ಪರಪ್ಪನಂಗಡಿ ಉನ್ನಿಕೃಷ್ಣ ಫಣಿಕ್ಕರ್ ಕೇರಳದ ವಿವಿಧ ಭಾಗಗಳಿಂದ ಬಂದಿದ್ದ ಇಪ್ಪತ್ತು ಪ್ರಸಿದ್ಧ ಜ್ಯೋತಿಷಿಗಳೊಂದಿಗೆ ಉಪಸ್ಥಿತರಿದ್ದಾರೆ. ಭಗವಂತನ ಇಚ್ಛೆಯನ್ನು ಅರಿಯಲು ಪಂಚಾಂಗ ಅಧ್ಯಯನ ಮಾಡಿದಾಗ ಆಘಾತಕಾರಿ ವಿಷಯ ತಿಳಿದು ಬಂದಿತು. ಅದು ಏನೆಂದರೆ ಅಯ್ಯಪ್ಪ ಸ್ವಾಮಿಗೆ ನೋವು, ದುಃಖ ಉಂಟಾಗಿದೆ; ಸ್ವಾಮಿ ಅಯ್ಯಪ್ಪ ಕ್ರೋಧಗೊಂಡಿದ್ದಾರೆ!

ಅಯ್ಯಪ್ಪಸ್ವಾಮಿ ಹೀಗೆ ಕೋಪೋದ್ರಿಕ್ತರಾಗಲು ಕಾರಣವೇನು?

ಸ್ವಾಮಿಗೆ ಅಪಚಾರ ಆಗಿದೆ!

ಯಾರಿಂದ ಆಗಿದೆ ಈ ಅಪಚಾರ? ಸರ್ಕಾರದಿಂದಲೇ? ತಿರುವಾಂಕೂರು ದೇವಸ್ಥಾನಂ ಮಂಡಳಿಯಿಂದಲೇ?

ಅವುಗಳಿಂದಲೂ ಆಗಿದೆ. ಅದಕ್ಕೂ ಮಿಗಿಲಾಗಿ ಶಾಸ್ತ್ರ ಕಟ್ಟು ಕಟ್ಟಲೆ, ನೀತಿ ನಿಯಮಗಳ ಉಲ್ಲಂಘನೆ ಆಗಿದೆ. ದೇವಸ್ಥಾನದ ಪಾವಿತ್ರ್ಯತೆ ಹಾಳಾಗಿದೆ.

ಯಾರು ಉದ್ಧಟತನ ಎಸಗಿದವರು?

ಒಬ್ಬ ಕಿರಿಯ ಕಲಾವಿದೆ. ಆಕೆ ಅಯ್ಯಪ್ಪನ ವಿಗ್ರಹ ಮುಟ್ಟಿ ಘೋರ ಪಾಪ ಎಸಗಿದ್ದಾಳೆ!

ಎಂತಹ ಅಪಚಾರ! ಬಾಲಬ್ರಹ್ಮಚಾರಿ ಅಯ್ಯಪ್ಪ ಸ್ವಾಮಿಯ ಪಾದವನ್ನು ಸ್ಪರ್ಶಿಸಬಹುದೇ ಒಂದು ಹೆಣ್ಣು? 10 ರಿಂದ 50 ವರ್ಷದೊಳಗಿನ ಮಹಿಳೆಯರಿಗೆ ಪ್ರವೇಶವನ್ನೇ ನಿರಾಕರಿಸುವ ದೇವಸ್ಥಾನದ ಒಳಕ್ಕೆ ಹೇಗೆ ನುಗ್ಗಿದಳು ಈ ಪೋರಿ? ತಂತ್ರಿ ಎಂಬ ಕಂತ್ರಿಯ ಸಹಾಯದಿಂದ!

ಯಾರು ಯಾರು ಈ ಕಿರಿಯ ನಟಿ ಎಂಬ ಕುತೂಹಲ ಬೇಡಿ. ಅವರೇ ನಮ್ಮ ಹಿರಿಯ ನಟಿ, ಪ್ರತಿಭಾನ್ವಿತ ಕಲಾವಿದೆ, ರಾಷ್ಟ್ರ ಪ್ರಶಸ್ತಿ ವಿಜೇತೆ ಜಯಮಾಲಾ!

ಅವರು ಹಿರಿಯ ನಟಿ: ಕಿರಿಯ ನಟಿಯಿಂದ ಅಪಚಾರ ಆಗಿದೆ ಎಂದಿದ್ದಾರಲ್ಲ?

ಈ ಅಪಚಾರ ನಡೆದದ್ದು 1987 ರಲ್ಲಂತೆ. ಹಿರಿಯ ನಟಿ ಆಗಿನ್ನೂ 28 ವರ್ಷದ ಪೋರಿಯಂತೆ.

ಇಷ್ಟು ದಿವಸ ಕಡುಬು ತಿನ್ನುತ್ತಿದ್ದಾ? ಆಗ ಸುಮ್ಮನಿದ್ದು ಈಗ ಯಾಕೆ ಕೋಪಗೊಂಡ ಅಯ್ಯಪ್ಪಸ್ವಾಮಿ?

ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಾ? ಏನೋ ಇಷ್ಟು ದಿನ ಸಹಿಸಿಕೊಂಡು ಇದ್ದ, ಈಗ ಸಿಡಿದೆದ್ದ ಅಂದರೆ ಇನ್ನೂ ಸ್ವಲ್ಪ ಸಮಯ ಸಹಿಸಿಕೊಳ್ಳಬೇಕಾಗಿತ್ತು ಅಂತ ನಗಾಡ್ತಾರೆ. ಅವನ್ನೇ ಹೋಗಿ ಕೇಳಿ ಅನ್ನದೆ ಅನ್ಯಮಾರ್ಗ ಇಲ್ಲ ಅನ್ನಿಸುತ್ತೆ.

ನಡೆದದ್ದಾದರೂ ಇಷ್ಟೆ ಅಂತೆ. ಜಯಮಾಲಾ ಅಯ್ಯಪ್ಪ ಸ್ವಾಮಿ ಭಕ್ತೆ ಇರಬೇಕು. ತಮ್ಮ ಪತಿಗೆ ಬಂದಿರುವ ಖಾಯಿಲೆ ವಾಸಿ ಮಾಡುವಂತೆ ಸ್ವಾಮಿಗೆ ಹರಕೆ ಹೊತ್ತಿದ್ದರಂತೆ. ಹರಕೆ ತೀರಿಸಲು ಶಬರಿ ಮಲೈಗೆ ಹೋದರಂತೆ. ಬೆಟ್ಟವನ್ನೂ ಹತ್ತಿದರಂತೆ. ಗರ್ಭಗುಡಿಯ ಬಳಿಗೆ ಬಂದಾಗ ಜನರ ನೂಕು ನಗ್ಗಲಿನಲ್ಲಿ ಯಾರೋ ಇವರನ್ನು ತಳ್ಳಿದರಂತೆ. ಈ ಅಮಾಯಕ ಹೆಣ್ಣುಮಗಳು ಸೀದಾ ಅಯ್ಯಪ್ಪ ಸ್ವಾಮಿ ವಿಗ್ರಹದ ಬಳಿಗೆ ಹೋಗಿ ಬಿದ್ದರಂತೆ. ಬಾಲ್ಯದಲ್ಲಿ ತಮ್ಮ ಹಳ್ಳಿಯಲ್ಲಿ ದೇವರ ಪಾದ ಮುಟ್ಟಿ ನಮಸ್ಕರಿಸುವ ಪದ್ಧತಿ ಇತ್ತಲ್ಲಾ ಹಾಗೇ ಇಲ್ಲೂನೂ ಅಂದುಕೊಂಡು ಅಯ್ಯಪ್ಪಸ್ವಾಮಿ ವಿಗ್ರಹದ ಪಾದವನ್ನು ಭಯ, ಭಕ್ತಿಯಿಂದ ಮುಟ್ಟಿ ನಮಸ್ಕರಿಸಿ ಕೃತಾರ್ಥ ಭಾವನೆಯಿದ ಹೊರಬಂದರಂತೆ.

ಯಾವ ಪಾಪ ಪ್ರಜ್ಞೆಯೂ ಅವರನ್ನು ಕಾಡಲಿಲ್ಲವಂತೆ. ಆದರೇನು ಮಾಡ್ತೀರಿ, ಅದೇನೋ ಇರಲಾರದೆ ಅದೇನೋ ಬಿಟ್ಟುಕೊಂಡರು ಅಂತಾರಲ್ಲ ಹಾಗೇನೆ ಜಯಮಾಲಾನೂ 1999 ರಲ್ಲಿ ಜ್ಯೋತಿಷ್ಯ ಕೇಳಿದರಂತೆ. ಆ ಜ್ಯೋತಿಷಿ 'ಮಹಿಳೆಯಾಗಿ ನೀವು ಅಯ್ಯಪ್ಪನ ಸನ್ನಿಧಿಗೆ ಹೋಗಿ ಅಪಚಾರ ಎಸಗಿದ್ದೀರಿ' ಎಂದು ಹೇಳಿ ಹುಳ ಬಿಟ್ಟನಂತೆ. ಎಲ್ಲೋ ನೆಮ್ಮದಿಯಾಗಿದ್ದ ಪಾಪಪ್ರಜ್ಞೆ ದಿಢೀರ್ ಎಚ್ಚರಗೊಂಡಿತಂತೆ. ಅವತ್ತಿನಿಂದ ಪಾಪಪ್ರಜ್ಞೆಯಿಂದ ನರಳುತ್ತಿದ್ದಾರಂತೆ.

ಈ ಪಾಪಪ್ರಜ್ಞೆ ಪೂರ್ಣವಾಗಿ ಕ್ರಿಯಾಶೀಲ ಆಗಿರಲಿಲ್ಲ ಅನ್ಸುತ್ತೆ. ಅದು ಆಗಾಗ ಬಂದು ತಲೆ ತಿಂದರೂ ನಮ್ಮ ನಟೀಮಣಿ ಅದನ್ನ ಹೇಗೋ ಮರೆತಿದ್ದಿರಬೇಕು. ಆದರೆ ಈ ವರ್ಷ ಪರಪ್ಪನಂಗಡಿ ಉನ್ನಿಕೃಷ್ಣ ಫಣಿಕ್ಕರ್ 'ಒಬ್ಬ ಕಿರಿಯ ಕಲಾವಿದೆಯಿಂದ ಅಪಚಾರ ಆಗಿ ಅಯ್ಯಪ್ಪ ಸ್ವಾಮಿ ಕೋಪಗೊಂಡಿದ್ದಾನೆ' ಎಂದು ಹೇಳಿದ್ದನ್ನು ತಿಳಿದ



ಮೇಲೆ ಜಯಮಾಲಾರ ಪಾಪಪ್ರಜ್ಞೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಿರಬೇಕು. ಅದಕ್ಕೇ ನಾನು ಅಮಾಯಕ ಹೆಣ್ಣುಮಗಳು, ಅರಿಯದೆ ಮಾಡಿದ ಅಪರಾಧಾನ ಹೊಟ್ಟೆಗೆ ಹಾಕಿಕೋ ದೇವ ಅನ್ನೋ ಅರ್ಥದ ಕಾಗದವನ್ನ ಬರೆದು ದೇವರಿಗೆ ಫ್ಯಾಕ್ಸ್ ಮೂಲಕ ಕಳುಹಿಸಿ ಕ್ಷಮೆ ಕೋರಿದ್ದಾರಂತೆ!

* * * * * *

ಈ ಎಲ್ಲ ವಿಷಯಗಳನ್ನು ಗೆಳೆಯನ ಸಂಗಡ ಪ್ರಸ್ತಾಪಿಸಿದಾಗ ಅವನು ಎಂದಿನಂತೆ ವಿತಂಡವಾದ ಮಂಡಿಸಿದ. ನಂಬರ್ ಒನ್ ಏನಪಾ ಅಂದರೆ ಹತ್ತರಿಂದ ಐವತ್ತು ವರ್ಷದ ಒಳಗಿನ ಮಹಿಳೆಯರು ದೇವಸ್ಥಾನಕ್ಕೆ ಬರಬಾರದು ಎಂಬುದು ಶಬರಿಮಲೈನಲ್ಲಿ ಮಾತ್ರ ಅಲ್ಲ, ಬೇರೆ ಕಡೆಯೂ ಇದೆ. ತಿರುವನಂತಪುರದ ಅನಂತ ಪದ್ಮನಾಭ ದೇವಾಲಯದಲ್ಲೂ ಈ ಪದ್ಧತಿ ಇದೆ. ಯಾಕೆ ಈ ಸಂಪ್ರದಾಯ ಇದೆ ಅಂದರೆ ಋತುಸ್ರಾವ ಆದ ಹೆಂಗಸು ಅಪವಿತ್ರಳು ಎಂಬ ಕಾರಣಕ್ಕೆ. ಋತುಸ್ರಾವಯಾಗುವುದಕ್ಕೆ ಕಾರಣ ಏನು ಎಂಬುದು ಹಿಂದಿನವರಿಗೆ ಗೊತ್ತಿರಲಿಲ್ಲ, ಈ ಸಂಪ್ರದಾಯ ಜಾರಿಗೆ ತಂದರು. ಇಪ್ಪತ್ತೊಂದನೇ ಶತಮಾನದಲ್ಲಿ ಇದಕ್ಕೆ ಕಾರಣವನ್ನು ವೈಜ್ಞಾನಿಕವಾಗಿ ತಿಳಿ ಹೇಳಿದ ಮೇಲೂ, ಈ ರೀತಿಯ ಸಂಪ್ರದಾಯ ಮಾನವ ವಿರೋಧಿ. ಇಲ್ಲಿ ಋತುಸ್ರಾವಯಾದ ಮಹಿಳೆ ಕಳಂಕಿತಳಲ್ಲ ಅಂತ ತಿಳಿದ ಮೇಲೂ ಈ ಸಂಪ್ರದಾಯ ಜಾರಿಯಲ್ಲಿದೆ ಎಂದರೆ ಭಕ್ತರಿಗೆ ಅವರ ದೇವರ ಮನೋನಿಗ್ರಹದ ಬಗ್ಗೆಯೇ ಅನುಮಾನ ಇರಬೇಕು. ಎಲ್ಲಿ ತಮ್ಮ ದೇವರು ಮಹಿಳೆಯರನ್ನು ಕಂಡ ತಕ್ಷಣ ಬ್ರಹ್ಮಚರ್ಯವನ್ನು ಮೂಲೆಗೆಸೆದು, ಬರಗೆಟ್ಟ ದೇವರಿಗೆ ಪರ ಮಾಡಿದಂಗೆ ಮುಗಿಬಿದ್ದು ಬಿಡ್ತಾನೋ ಅನ್ನುವ ಭಯ ಇರಬೇಕು. ಮಹಿಳೆಯರಿಗೆ ಇಂತಹ ಅಪಮಾನ ಮಾಡುವ ದೇವರಿಗೆ ಧಿಕ್ಕಾರ ಕೂಗಬೇಕಾಗಿತ್ತೆ ವಿನಹ ಕ್ಷಮಾ ಭಿಕ್ಷೆಯನ್ನಲ್ಲ.

ನಂಬರ್ ಟೂ ಏನಪಾ ಅಂದರೆ.... ಜಯಮಾಲಾ ಉದ್ದೇಶ ಪೂರ್ವಕವಾಗಿ ಕಟ್ಟುಕಟ್ಟಳೆ ವಿರೋಧಿಸಿಲ್ಲ. ಮುಗ್ಧ ಹೆಣ್ಣುಮಗಳು ಭಕ್ತಿಯ ಪರವಶತೆಯಲ್ಲಿ ಮಾಡಿರಬಹುದಾದ ಅಪಚಾರಕ್ಕೆ ಕೋಪೋದ್ರಿಕ್ತನಾಗಿದ್ದಾನೆ ಎಂದರೆ ಅವನೇನು ದೇವರೋ? ಅಲ್ಲ ದೆವ್ವವೊ?

ಇನ್ನು ನಂಬರ್ ತ್ರೀ ಏನಪಾ ಅಂದರೆ... ಜಯಮಾಲಾ ಜನರ ನೂಕುನುಗ್ಗಲಿನ ನಡುವೆಯೇ ಬೆಟ್ಟ ಹತ್ತಿ ಗರ್ಭಗುಡಿ ತಲುಪಿದ್ದಾರೆ. ಹದಿಹರೆಯದ ರೂಪವಂತ ಹೆಣ್ಣುಮಗಳು ಅಲ್ಲಿನ ಪುರುಷರ ಕಣ್ಣಿಗೇ ಬೀಳಲಿಲ್ಲವೇ? ಆಕೆ ಏನು ಮಾರು ವೇಷದಲ್ಲಿ ಹೋಗಿದ್ದರೆ? ಅಥವಾ ಲಂಕೇಶ್ ಅವರು 'ಜಯಮಾಲಾ ನನ್ನ ತಮ್ಮ' ಅಂದ ಹಾಗೆ ಅವರೆಲ್ಲರಿಗೂ ಆಕೆ ಪುರುಷನಂತೆಯೇ ಗೋಚರಿಸಿದರೆ? ಎಲ್ಲರ ಕಣ್ಣುತಪ್ಪಿಸಿ ಹೋಗಲು ಸಾಧ್ಯವೇ ಇಲ್ಲ.

ಇನ್ನು ಜಯಮಾಲಾ ಅವರೇ ಅಯ್ಯಪ್ಪಸ್ವಾಮಿಯ ಪಾದಸ್ಪರ್ಶ ಮಾಡಿದೆ ಎಂದು ಹೇಳಿದ್ದಾರಲ್ಲ ಎಂಬ ಪ್ರಶ್ನೆ. ಅಯ್ಯಪ್ಪಸ್ವಾಮಿ ಅಂತಿಂತಹ ದೇವರಲ್ಲ. ತಿರುಪತಿ ತಿಮ್ಮಪ್ಪನಿಗೇ ಸೆಡ್ಡು ಹೊಡೆಯುವಂತಹ ಶಕ್ತ ಇರೋ ದೇವರು. ಪ್ರಕಾಂಡ ಜ್ಯೋತಿಷಿಗಳ ಕಣ್ಣು ಇರುವುದು ಯಾವುದೇ ಶ್ರಮ ಇಲ್ಲದೆ ಲಕ್ಷಾಂತರ ರೂಪಾಯಿ ಆದಾಯ ತಿನ್ನುತ್ತಿರುವ ಪೂಜಾರಿಗಳ ಮೇಲೆ. ಐದು ವರ್ಷಗಳ ಹಿಂದೆ ನಡೆದ 'ಅಷ್ಟಮಂಗಲ ದೇವಪ್ರಶ್ನೆ' ಸಂದರ್ಭದಲ್ಲಿ ಏಳದ ಅಪಚಾರದ ಪ್ರಶ್ನೆ ಈಗ ಎದ್ದದ್ದು ಹೀಗೆ. ಜಯಮಾಲಾ ಅವರ 'ತುತ್ತೂರಿ' ಸಿನಿಮಾ ಚಲನ ಚಿತ್ರಮಂದಿರಗಳಿಂದ ... ಲೋಟದಲ್ಲಿ, ಹೊರಕ್ಕೆ ಓಡುತ್ತಿ... ಪಾಪ ಹೇಗಾದರೂ ಮಾಡಿ ಪ್ರ... ಗಿಟ್ಟಿಸಬೇಕು ಅಂತ ಅಯ್ಯಪ್ಪ... ತುತ್ತೂರಿ ಊದುತ್ತಿದ್ದಾರೆ! ಜಯ... ಮಾಲಾನೂ ಜ್ಯೋತಿಷಿ ಅಂತೆ. ... ಜ್ಯೋತಿಷಿ ಈ ಜ್ಯೋತಿಷಿ ಸೇರಿ ಏನೋ ಮಾಡ್ಕೊಳ್ಳಿ... ಮಾಡಿಕೊಂಡು ಹಾಳಾಗಿ ಹೋಗಲಿ ಬಿಡು.

* * * * * *

ಅಯ್ಯಪ್ಪನ್ ತುತ್ತೂರಿ ನೋಡಿದಿರಲ್ಲ, ... ಸ್ತ್ರೀಮಲಯಾಳದ ಶಶಿ ತರೂರು ವಿಷಯ ಇದು.

ಇವರು ಇನ್ನೇನು ಖಾಲಿಯಾಗಲಿರುವ ವಿಶ್ವಸ... ಮಹಾಕಾರ್ಯದರ್ಶಿ ಹುದ್ದೆಗೆ ಅಭ್ಯರ್ಥಿ.

ಅವರು ಜಯಗಳಿಸಲಿ, ಭಾರತಕ್ಕೆ ಕೀರ್ತಿ ತರ... ಎಂಬುದು ಎಲ್ಲರ ಆಶಯವೂ ಹೌದು. ಆದರೆ... ಅವ... ಅಭ್ಯರ್ಥಿ ಎಂದು ತಿಳಿದ ತಕ್ಷಣ ಅವರು ಹೋಗಿ... ಯಾರ ಬಳಿಗೆ? ಮತದಾರರ ಬಳಿಗಲ್ಲ, ಸತ್ಯಸಾಯಿಬಾ... ಬಳಿಗೆ, ಅವರ ಆಶೀರ್ವಾದ ಪಡೆಯಲು!

ಆಶೀರ್ವಾದದಿಂದ ಜಯ ಲಭಿಸುವುದೆ?

ಸಾಯಿಬಾಬಾ ಅವರು ಬಾಯಿ ಜಾರಿ ಮುಖ್ಯಮ... ಆಗಿದ್ದ ದೇವೇಗೌಡರನ್ನು ಉದ್ದೇಶಿಸಿ "ಪ್ರಧಾನ ಮಂತ್ರಿ... ವರೇ" ಅಂದಮೇಲೆ ಅವರು ಪ್ರಧಾನಿ ಪಟ್ಟಕ್ಕೆ ಏರಲಿಲ್ಲ...

ಅಲ್ಲ, ಚುನಾವಣೆ ಅಂತ ನಡೆಸಿ ಹಣ ವ್ಯ... ಮಾಡಿ ಜನರನ್ನ ಕೆಟ್ಟ ದಾರಿಗೆ ಎಳೆಯುವುದರ ಬದಲ... ಇಂತಹವರಿಗೇ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಯ... ಬಿಡಬಾರದು ಅಂತ!

ವಾಸ್ತು... ವಾಸ್ತು!

ಯಾಕೋ ಸಂಘ ಪರಿವಾರದ ಗ್ರಹಚಾರವೇ ... ಇಲ್ಲ. ಕೇಂದ್ರದಲ್ಲಿ ಭಾಜಪ ಸರ್ಕಾರ ಬೀಳ್ತು. ಆರೆಸ್ಸೆಸ್... ಒಳಗೆ ಕಚ್ಚಾಟ. ಪ್ರಮೋದ್ ಮಹಾಜನ್ ಮರ... ಹೊಂದಿದರು. ಭಾಜಪದೊಳಗೆ ಹೊಂದಾಣಿಕೆ ಇ... ಇದಕ್ಕೆಲ್ಲ ಕಳಶ ಇಟ್ಟಂತೆ ಆರೆಸ್ಸೆಸ್ ಮುಖ್ಯಸ್ಥ ಕೆ.ಎಸ್... ಸುದರ್ಶನ್ ಅವರಿಗೆ ಕೊಲೆ ಬೆದರಿಕೆ!

ಏನು ಇದಕ್ಕೆಲ್ಲ ಕಾರಣ?

ನಾಗಪುರದಲ್ಲಿರುವ ಸಂಘದ ಕಚೇರಿ! ಅದ... ಮುಂಭಾಗ ದಕ್ಷಿಣ ಮುಖವಾಗಿದೆ. ಅದು ಪೂರ್ವ... ಮುಖವಾಗಿರಬೇಕಿತ್ತು!

ಏನು ಇದಕ್ಕೆ ಪರಿಹಾರ?

ವಾಸ್ತು ರೀತ್ಯ ಅದನ್ನು ಬದಲಾಯಿಸಿ!

ಈ ಕಟ್ಟಡ ಹಿಂದೆ 'ಭೂತ ಬಂಗಲ' ಆಗಿತ್ತು, ... ವಿಷಯವನ್ನು ಕಟ್ಟಡದ ಮಾಲೀಕ ಬಹಿರಂಗಗೊಳಿಸಿದಾ... ಹೆಡಗೆವಾರ್ ನಕ್ಕು ಹೇಳಿದ್ದರಂತೆ–

'ಭೂತ ಇದ್ದರೇನಂತೆ. ನಮ್ಮ ಸ್ವಯಂ ಸೇವಕ... ಅವನ್ನ ಓಡಿಸುತ್ತಾರೆ!'

ಅಂತಹ ಸಂಘಟನೆ ಈಗ ವಾಸ್ತು ವ್ಯಾಮೋಹ... ಬಲಿಯಾಗಿದೆ! ಕಟ್ಟಡದ ಪುನರ್ ನಿರ್ಮಾಣ ಕಾಯ... ಭರದಿಂದ ಸಾಗಿದೆಯಂತೆ.

ನಿಮಗೆ ತಿಳಿದಿರಲಿ. ಇದೇ ಆರೆಸ್ಸೆಸ್ ಕಛೇರಿ... ಮೇಲೆ ನಾಗಪುರದಲ್ಲಿ ದಾಳಿ ನಡೆದಿತ್ತಲ್ಲ, ಯಾರ ಕೂದಲೂ... ಕೊಂಕದಂತೆ ಎಲ್ಲರೂ ಅಪಾಯದಿಂದ ಪಾರಾದರ... ಯಾಕೆ ಅಂತೀರಿ? ವಾಸ್ತು ರೀತಿ ಕಟ್ಟಡ ನಿರ್ಮಾ... ಕೈಗೊಂಡಿದ್ದಕ್ಕೆ!

ನಿಮ್ಮ ಮನೆಗೆ ಭದ್ರತೆ ಬೇಕೆ?

'ವಾಸ್ತು ರೀತಿ ನಿರ್ಮಿಸಿ!'

–ಇದು ಸಂಘ ಪರಿವಾರದ ಸೂಚನೆ!

–ಎಚ್.ಎಲ್. ಕೇಶವಮೂರ್ತಿ


ಅನಾಮಧೇಯ ನೀಲಂ!

ನಾನು ಲಂಕೇಶ್ ಅವರ ಕಾಲದಿಂದಲೂ ಪತ್ರಿಕೆಯನ್ನು ಓದುತ್ತಿದ್ದೇನೆ. ನನಗನ್ನಿಸಿದ್ದು ಇಷ್ಟು. ತಾವು ತಮ್ಮ ತಂದೆಯವರಿಗಿಂತಲೂ ಧೀರೆ, ದಿಟ್ಟವಾದ ಮಹಿಳೆ, ಇದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ.


ಈ ವಾರ ಬಿಳಿದಾಳಿ ಈಶ ಅವರು ಬರೆದ ಬೆಂಗಳೂರು ಪೊಲೀಸ್ ಆಯುಕ್ತರ ಹುದ್ದೆಗೆ ಸಂಬಂಧಿಸಿದ ವರದಿ ಸತ್ಯವಾಗಿತ್ತು, ಕನ್ನಡದ ಯಾವ ವಾರಪತ್ರಿಕೆಗಳೂ ಈ ಬಗ್ಗೆ ವರದಿ ಮಾಡಲೇ ಇಲ್ಲ.

ಸುವರ್ಣ ಕರ್ನಾಟಕದ ಸಂದರ್ಭದಲ್ಲಿ ಜೇಷ್ಠತೆ ಮತ್ತು ದಕ್ಷತೆಯಲ್ಲಿ ಇಡೀ ಭಾರತದಲ್ಲಿಯೇ ಹೆಸರು ಮಾಡಿರುವ ಕರ್ನಾಟಕದ ಪೊಲೀಸ್ ಅಧಿಕಾರಿಗಳನ್ನು ಬಿಟ್ಟು ಕಂಡೂ ಕೇಳರಿಯದ ಅನಾಮಧೆಯನೊಬ್ಬನನ್ನು ನೇಮಿಸಿರುವುದು ಇಡೀ ಕರ್ನಾಟಕಕ್ಕೆ ದೇವೇಗೌಡ ಮತ್ತು ಮಕ್ಕಳು ಮಾಡಿದ ಮಹಾ ದ್ರೋಹ. ಈಶ ಅವರಿಗೆ ಸಹಸ್ರ ನಮಸ್ಕಾರಗಳು

-ಎಂ. ವಿವೇಕ್, ಮೈಸೂರು



ಜುಲೈ 5 ರ 'ಲಂಕೇಶ್' ಸಂಚಿಕೆಯ ಹಿಂಪುಟದಲ್ಲಿ ಪ್ರಕಟವಾದ "ಮಂಡ್ಯದ ಹುಡುಗ-ಬೆಂಗ್ಳೂರ್ ಬೆಡಗಿ ಡುಂಡುಂ!" ಈ ಶೀರ್ಷಿಕೆಯಡಿಯಲ್ಲಿನ ಶೆಣೈ, ಮಲ್ಲಿಯವರ ಲೇಖನ ಓದಿದೆ. ಸಂದರ್ಶನದಲ್ಲಿ ರಕ್ಷಿತಾ ಮತ್ತು ಪ್ರೇಮ್ ಬಹಳ ಚುರುಕಾಗಿ ಉತ್ತರಿಸಿದ್ದಾರೆ. ಈ ಹಿಂದೆ ಚಿತ್ರರಂಗದ ಈ ಇಬ್ಬರು ವಿಭಿನ್ನ ಪ್ರತಿಭೆಗಳ ಸಂಗಮವಾಗುತ್ತದೆ ಎಂಬ ಸುದ್ದಿಯು ಪ್ರಕಟವಾಗಿತ್ತು, ಇದು ನಿಜವೇ ಸುಳ್ಳೇ ಎಂಬ ಜಿಜ್ಞಾಸೆಯಲ್ಲಿ ಗಾಂಧಿನಗರದೊಟ್ಟಿಗೆ ಅಭಿಮಾನಿಗಳೂ ಮುಳುಗಿದ್ದರು. ಆದರೆ ಇತ್ತೀಚೆಗೆ



ಬಹಿರಂಗ ಹೇಳಿಕೆಗಳಿಂದ ನಿಜಾಂಶ ಗೊತ್ತಾಯ್ತು. ಅಂತೆಯೇ ನಮ್ಮ 'ಲಂಕೇಶ್' ಕೂಡಾ ಇವರಿಬ್ಬರ ಸಂದರ್ಶನಗಳನ್ನು ಒಟ್ಟಿಗೆ ಚಿಕ್ಕದಾಗಿ ಚೊಕ್ಕದಾಗಿ ಪ್ರಕಟಿಸುವುದರ ಮೂಲಕ ಮತ್ತಷ್ಟು ನಿಜಾಂಶ ಬಯಲು ಮಾಡಿದೆ. ಅಷ್ಟೊಂದು ರೋಮ್ಯಾಂಟಿಕ್ ಅಲ್ಲದ ಸಿಟಿ ಬೆಡಗಿಗೆ ಪ್ರೇಮ ಬಿಕ್ಷೆ ಬೇಡಿರುವ ಹಳ್ಳಿ ಪ್ರತಿಭೆಯ ಮದುವೆಯು ಹಿರಿಯರ ನಿಶ್ಚಯದಂತೆ ಯಾವುದೇ ಗಾಸಿಪ್ ಇಲ್ಲದೆ ತೀರ್ಮಾನವಾಗಿದೆ. ಇವರಿಬ್ಬರ ವೈವಾಹಿಕ ಜೀವನ ಸುಖಕರವಾಗಿರಲಿ ಎಂದು ಅಡ್ವಾನ್ಸ್ ಆಗಿ ಶುಭ ಹಾರೈಕೆಗಳು.

-ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

ಜನರು ಮತ್ತು ಸರ್ಕಾರ ಇತಿಹಾಸದಿಂದ ಏನನ್ನೂ ಅರಿಯದಿರುವುದು ವಿಷಾದನೀಯ -ಎಂ. ಹೆಗೆಲ್

ಪಣಿಕರ್ ಸರ್‌ಗೆ ನನ್ನ ನಮನ

ನನ್ನ ಕಣ್ಣು ಕಿವಿಯನ್ನು ನಾನು ನಂಬಲು ಆಗಲೇ ಲ್ಲ.

"ಪುಟ್ಟಸ್ವಾಮಿ ಅದ್ಭುತವಾಗಿ ಕ್ರಿಕೆಟ್ ಆದಿ ನಮ್ಮ ಾಲೆಗೆ ಕೀರ್ತಿಯನ್ನು ತಂದಿದ್ದಾನೆ. ನಮ್ಮ ಶಾಲೆಯ ಿಷ್ಠೆ ಗೌರವವನ್ನು ಹೆಚ್ಚಿಸಿದ್ದಾನೆ. ನಮ್ಮ ಶಾಲೆ ಮ್ಯಾಚ್ ಗೆದ್ದಿದ್ದಕ್ಕೆ ಒಂದು ದಿನದ ರಜೆಯನ್ನು ಘೋಷಿಸಿದ್ದೇವೆ" ಂದೆಲ್ಲಾ ಶಾಲೆಯ ಆಸೆಂಬ್ಲಿ ಹಾಲಲ್ಲಿ ಸಮಸ್ತ ವಿದ್ಯಾರ್ಥಿ ಳ ಎದುರು ನನ್ನನ್ನು ಪ್ರಾಂಶುಪಾಲರಾದ ಪಣಿಕರ್ ೊಗಳಿದ್ದರು.

ಆದರೆ ಅದೇ ಸಂಜೆ ಅದೇ ಅಸೆಂಬ್ಲಿ ಹಾಲಿನಲ್ಲಿ ಲ್ಲರೆದುರು ನನ್ನ ಕೈಗೆ ಪಣಿಕರ್ ಚೆನ್ನಾಗಿ ಹೊಡೆದಿದ್ದರು.

ಅಂದು ಬೆಳಿಗ್ಗೆ ಸಿಕ್ಕಿದ ಅಭಿನಂದನೆ, ಅದೇ ಸಂಜೆ ಿಕ್ಕಿದ ಅವಮಾನ ಕಂಡು ನಾನು ದಂಗಾಗಿ ಹೋದೆ. ಬ್ಬ ವ್ಯಕ್ತಿ ಬೆಳಿಗ್ಗೆ ಒಂದು ತರಹ, ಸಾಯಂಕಾಲ ನ್ನೊಂದು ತರಹ ಇರಲು ಸಾಧ್ಯವೇ? ಎಂದು ನಾನು ಂತಿಸುವಂತಾಯಿತು. ಆದರೆ ಅವತ್ತು ಹಾಗೆ ಾಗಿದ್ದರಿಂದ ವಿದ್ಯಾಭ್ಯಾಸದ ಪ್ರಾಮುಖ್ಯತೆಯ ಬಗ್ಗೆ ನನಗೆ ಅರಿವಾಗಿತ್ತು. ಮನುಷ್ಯ ಯಾವುದೇ ಕ್ಷೇತ್ರದಲ್ಲಿ ಷ್ಟೇ ದೊಡ್ಡ ಸಾಧನೆ ಮಾಡಿದರೂ ಆತ ವಿದ್ಯಾಭ್ಯಾಸ ನ್ನು ನಿರ್ಲಕ್ಷಿಸಬಾರದು ಎಂಬ ಸತ್ಯಾವನ್ನು ಪಣಿಕರ್ ವರು ಅಂದು ನನಗೆ ತೋರಿಸಿಕೊಟ್ಟಿದ್ದರು.

ಅಂದು ಸಂಜೆ ಆವರು ನನಗೆ ಯಾಕೆ ಹೊಡೆದ ಂದರೆ ನಾನು ಕ್ರಿಕೆಟ್ ಆಟವಾಡಲು ಹೋಗಿದ್ದರಿಂದ ಹೋಂ ವರ್ಕ್ ಮಾಡಿರಲಿಲ್ಲ. ಅದು ಅವರ ಸಿಟ್ಟು ತ್ತಿಗೇರುವಂತೆ ಮಾಡಿತ್ತು. ಅದಕ್ಕೇ ಅವರು ನನಗೆ ಷ್ಟು ಜನರ ಎದುರು ಹೊಡೆದಿದ್ದರು. ಅವರು ೇಳಿದ್ದು ಇಷ್ಟೇ.... ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳು ಮ್ಮ ಶಿಕ್ಷಣವನ್ನು ನಿರ್ಲಕ್ಷಿಸಬಾರದು ಎಂದು.

ಅವತ್ತು ಅವರು ಎಲ್ಲ ವಿದ್ಯಾರ್ಥಿಗಳ ಎದುರು ಹೊಡೆದದ್ದಕ್ಕೆ ನನಗೆ ಒಂದಿಷ್ಟೂ ಸಿಟ್ಟು ಬರಲಿಲ್ಲ. ದಲಾಗಿ ನನ್ನ ಬಗ್ಗೆ ನನಗೇ ಒಂಥರಾ ಬೇಸರ ಮೂಡಿತು. ಕ್ರಿಕೆಟ್‌ನಲ್ಲಿ ನಾನು ಸಾಧನೆ ಮಾಡಿದ್ದಕ್ಕೆ ನ್ನನ್ನು ಅಭಿನಂದಿಸಿದ್ದಾರೆ; ಹಾಗೆಯೇ ನಾನು ಶಿಕ್ಷಣದಲ್ಲಿ ೆನ್ನಾಗಿ ಹೆಸರು ಮಾಡಿದ್ದರೆ ಅದನ್ನೂ ಅಭಿನಂದಿಸು ತ್ತಿದ್ದರಲ್ಲವೇ? ಎಂದು ನನಗೆ ನೇ ಸಮಾಧಾನ ಮಾಡಿ ೊಂಡಿದ್ದೆ.


ನಿರೂಪಣೆ: ಸದಾಶಿವ ಶೆಣೈ 10



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಪಣಿಕರ್ ಸರ್‌ಅವರು ಂಬ ಶಿಸ್ತಿನ ಮನುಷ್ಯ. ಾನು ಹೋಂ ವರ್ಕ್ ಮಾಡದಿದ್ದಾಗ, ಕೆಲವು ಾರಿ ಅರ್ಜೆಂಟಾಗಿ ಬರೆದು ರವಣಿಗೆ ಚೊಕ್ಕವಾಗಿರ ದ್ದಾಗ ನನಗೆ ಅನೇಕ ಬಾರಿ ವರು ಹೊಡೆದಿದ್ದರು. ದರೆ ಅವರು ಹೊಡೆಯುತ್ತಿರುವುದು, ಬಯ್ಯುತ್ತಿರು ದು ನಮ್ಮ ಒಳ್ಳೆಯದಕ್ಕೇ ಎಂದೇ ನಂಬಿದ್ದೆ. ಇಲ್ಲೇ ರ್ಗ, ಇಲ್ಲೇ ನರಕ ಅಂತಾರಲ್ಲ, ಹಾಗೆ ಶಾಲೆ ನನಗೆ ರಡೂ ಆಗಿತ್ತು!

ಆದರೆ ಪಣಿಕರ್ ಸರ್ ವಿದ್ಯಾಭ್ಯಾಸ ಮುಖ್ಯ ಎಂದು ಷ್ಟೇ ಹೇಳಿದರೂ ನನಗೆ ಮಾತ್ರ ಕ್ರಿಕೆಟ್ ಬಿಟ್ಟು ದ್ಯಾಭ್ಯಾಸದ ಕಡೆಗೆ ಮನಸ್ಸು ಹೊರಳುತ್ತಿರಲಿಲ್ಲ. ನಾನು ನಮ್ಮ ಮನೆಯಲ್ಲೇ ನಡೆಯುತ್ತಿದ್ದ ಟ್ಯೂಶನ್ ಕ್ಲಾಸಿಗೆ ಚಕ್ಕರ್ ಹೊಡೆದು ಕ್ರಿಕೆಟ್ ಆಡಲು ಹೋಗುತ್ತಿದ್ದೆ. ಎಷ್ಟೋ ಬಾರಿ ಸ್ಕೂಲಿನಲ್ಲೂ ಕ್ಲಾಸ್‌ನಿಂದ ತಪ್ಪಿಸಿಕೊಂಡು ಕ್ರಿಕೆಟ್ ಆಡುತ್ತಿದ್ದೆ. ಆ ತುಂಟಾಟ, ಆ ಹುಡುಗಾಟವನ್ನು ಚೈಲ್ಡ್‌ಹುಡ್ ಅಂತಾರೆ. ಆದರೆ ನಾನೊಬ್ಬ ಗಂಭೀರ ವಿದ್ಯಾರ್ಥಿ ಆಗದಿದ್ದರ ಬಗ್ಗೆ ನನಗೆ ಯಾವ ಪಶ್ಚಾತ್ತಾಪವೂ ಇಲ್ಲ. ಯಾಕೆಂದರೆ ಆ ವಯಸ್ಸಿನಲ್ಲಿ ಎಲ್ಲ ಹುಡುಗರಂತೆ ನಾನು ಕೂಡ ಆಟವಾಡುತ್ತಾ ಕಾಲ ಕಳೆದೆ.



ಪಣಿಕರ್ ಸರ್ ನಮಗೆ ಹೊಡೆದಾಗ ಹಲವೊಮ್ಮೆ ಸಿಟ್ಟು ಬರುತ್ತಿತ್ತು. ಇದರ ಬಗ್ಗೆ ಮನೆಯಲ್ಲಿ ಹೇಳಿದ್ದೆ. ಆಗ ನನ್ನ ಅಮ್ಮ ನನಗೆ ಬುದ್ಧಿ ಹೇಳುತ್ತಿದ್ದರು. 'ನೋಡು ನಿನ್ನ ಮಿಸ್ಟೇಕ್ ಏನೆಂದು ತಿಳಿದುಕೋ. ಅದನ್ನು ಮತ್ತೆ ರಿಪೀಟ್ ಮಾಡಬೇಡ. ಆಗಲೇ ನೀನು ಜೀವನದಲ್ಲಿ ಮುಂದೆ ಬರಲು ಸಾಧ್ಯ' ಎಂದು ಅಮ್ಮ ಪ್ರೀತಿಯಿಂದ ಹೇಳಿ ಶಾಲೆಗೆ ಕಳುಹಿಸುತ್ತಿದ್ದರು. ಹೀಗೆ ಅಮ್ಮ ಪ್ರೀತಿಯಿಂದ ಹೇಳಿದ ನಂತರ ಪಣಿಕರ್ ಮೇಷ್ಟ್ರು ಹೊಡೆದದ್ದನ್ನು ಮರೆತುಬಿಡುತ್ತಿದ್ದೆ. Fine, chalo.... it is part of life ಎಂದು ಸುಮ್ಮನಾಗಿಬಿಡುತ್ತಿದ್ದೆ.

ನಾನು ಒಂಭತ್ತನೇ ತರಗತಿಯಲ್ಲಿದ್ದಾಗ ನನ್ನ ಅಪ್ಪಾಜಿ 'ಶಂಕರ್ ಗುರು' ಚಿತ್ರದಲ್ಲಿ ನಟಿಸುತ್ತಿದ್ದರು. ಆ ಸಂದರ್ಭದಲ್ಲಿ ಹಾಡಿನ ಚಿತ್ರೀಕರಣಕ್ಕಾಗಿ ಇಡೀ ಚಿತ್ರ ತಂಡ ಕಾಶ್ಮೀರಕ್ಕೆ ಹೊರಟು ನಿಂತಿತ್ತು. ಆಗ ನಾನು ಕೂಡ ಅವರ ಜೊತೆ ಕಾಶ್ಮೀರಕ್ಕೆ ಹೊರಟೆ. ಹೀಗೆ ರಜೆ ಪಡೆದು ಕಾಶ್ಮೀರಕ್ಕೆ ಹೋಗಲು ಪಣಿಕರ್ ಸರ್‌ಗೆ ಹೇಳಿ ಅನುಮತಿ ಪಡೆದಿದ್ದೆ.

ಆದರೆ ನಾವು ಕಾಶ್ಮೀರಕ್ಕೆ ಹೊಗುವ ಮುನ್ನ ಪಣಿಕರ್ ಸರ್ ದಿಢೀರನೆ ತೀರಿಕೊಂಡರು. ನಮ್ಮನ್ನು ಅಷ್ಟೊಂದು ಬಯ್ಯುತ್ತಿದ್ದ, ಹೊಡೆಯುತ್ತಿದ್ದ ಅವರು ಸತ್ತಾಗ ನಮಗೆ ಸಂತೋಷವಾಗುವ ಬದಲು ದುಃಖವಾಯಿತು. ಅವರ ಪಾರ್ಥಿವ ಶರೀರವನ್ನು ನೋಡಿದಾಗ ನನ್ನ ಕಣ್ಣಲ್ಲಿ ನೀರು ಹನಿಯತೊಡಗಿತು. ನನ್ನ ಜೀವನದಲ್ಲಿ ಮೊದಲ ಬಾರಿ ನಮ್ಮ ಕುಟಂಬದ ಸದಸ್ಯರೊಬ್ಬರನ್ನು ಕಳೆದುಕೊಂಡಷ್ಟು ಬೇಸರವಾಯಿತು. ಈ ಹಿಂದೆ ನಮ್ಮ ಕುಟುಂಬದ ಸದಸ್ಯರೇ ತೀರಿಕೊಂಡಾಗ ನಾನು ಅಷ್ಟೊಂದು ಖಿನ್ನನಾಗಿರಲಿಲ್ಲ. ಆದರೆ ಪಣಿಕ್ಕರ್ ಅವರು ತೀರಿಹೋದಾಗ ನಾನು ತುಂಬಾ ಡಲ್ ಆಗಿಹೋದೆ.

ಆಗ ಶಾಲೆಗೆ ನಾಲ್ಕು ದಿನಗಳ ರಜೆ ಘೋಷಿಸಿದರು. ಸಾಧಾರಣವಾಗಿ ಆ ವಯಸ್ಸಲ್ಲಿ ಯಾರಾದರೂ ಸತ್ತಾಗ ರಜೆ ನೀಡಿದರೆ ನಾವೆಲ್ಲಾ ಕ್ರಿಕೆಟ್ ಆಡುವುದು ಮಾಮೂಲಿಯಾಗಿತ್ತು. ಆದರೆ ಆ ನಾಲ್ಕೂ ದಿನ ನಾವು ಕ್ರಿಕೆಟ್ ಕೂಡ ಆಡಲು ಹೋಗಲಿಲ್ಲ. ಯಾಕೆಂದರೆ ನಮ್ಮ ಮನಸ್ಸು ಕ್ರಿಕೆಟ್ ಆಡುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ನಮಗೆ ಅವರು ಎಷ್ಟೇ ಹೊಡೆದಿದ್ದರೂ ನಮಗೆ ಅವರ ಮೇಲೆ ಅಪಾರವಾದ ಪ್ರೀತಿಯಿತ್ತು. ಅದೇ ರೀತಿ ಅವರಿಗೂ ಅಷ್ಟೇ. ನಮಗೆ ಶಿಕ್ಷೆ ನೀಡುವಾಗ ಅವರು ನಿರ್ದಯಿಯಾಗಿ ಕಂಡರೂ ಉಳಿದ ಸಮಯದಲ್ಲಿ ನಮ್ಮನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಪ್ರೀತಿ ಮತ್ತು ಶಿಸ್ತನ್ನು ನನಗೆ ಕಲಿಸಿಕೊಟ್ಟವರೇ ಆ ಗುರುಗಳು. ಒಂಭತ್ತನೇ ಕ್ಲಾಸಿನಲ್ಲೇ ಜೀವನದಲ್ಲಿ ಮುಖ್ಯವಾದ ಈ ಮೌಲ್ಯಗಳನ್ನು ಕಲಿಸಿಕೊಟ್ಟು ನನ್ನ ಭವಿಷ್ಯಕ್ಕೆ ಭದ್ರವಾದ ಅಡಿಪಾಯ ಹಾಕಿಕೊಟ್ಟ ಅವರನ್ನು ನಾನು ಹೇಗೆ ಮರೆಯಲಿ? ಪಣಿಕರ್ ಸಾರ್, ಇಗೋ ನಿಮಗೆ ನನ್ನ ನಮನಗಳು.

> ನಮಗೆ ಶಿಕ್ಷೆ ನೀಡುವಾಗ ಅವರು ನಿರ್ದಯಿಯಾಗಿ ಕಂಡರೂ ಉಳಿದ ಸಮಯದಲ್ಲಿ ನಮ್ಮನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಪ್ರೀತಿ ಮತ್ತು ಶಿಸ್ತನ್ನು ನನಗೆ ಕಲಿಸಿಕೊಟ್ಟವರೇ ಆ ಗುರುಗಳು. ಒಂಭತ್ತನೇ ಕ್ಲಾಸಿನಲ್ಲೇ ಜೀವನದಲ್ಲಿ ಮುಖ್ಯವಾದ ಈ ಮೌಲ್ಯಗಳನ್ನು ಕಲಿಸಿಕೊಟ್ಟು ನನ್ನ ಭವಿಷ್ಯಕ್ಕೆ ಭದ್ರವಾದ ಅಡಿಪಾಯ ಹಾಕಿಕೊಟ್ಟ ಅವರನ್ನು ನಾನು ಹೇಗೆ ಮರೆಯಲಿ? ಪಣಿಕರ್ ಸರ್, ಇಗೋ ನಿಮಗೆ ನನ್ನ ನಮನಗಳು.

ಅದಾದ ಹಲವು ದಿನಗಳ ನಂತರ ನಾವು ಕಾಶ್ಮೀರಕ್ಕೆ ಹೋಗಿ ಬಂದೆವು. ಮೊದಲ ಬಾರಿಗೆ ಕಾಶ್ಮೀರವನ್ನು ನೋಡಿದ್ದು, ಶೂಟಿಂಗ್ ಸಮಯದಲ್ಲಿ ಕಂಡಿದ್ದರ ಬಗ್ಗೆ ಆಮೇಲೆ ಹೇಳುತ್ತೇನೆ.

ಪಣಿಕರ್ ಸರ್ ಅವರ ನಿಧನದ ನಂತರ ನಾರಾಯಣ್ ಎಂಬುವರು ನಮ್ಮ ಸ್ಕೂಲ್‌ನ ಹೆಡ್ ಮಾಸ್ಟರ್ ಆದರು. **He was very rude.** ನಾನು ಕಾಶ್ಮೀರಕ್ಕೆ ಹೋಗಿ ಬಂದ ನಂತರ ತಿಂಗಳ ಪರೀಕ್ಷೆಯಲ್ಲಿ ಫೇಲಾದೆ. ಅದು ಒಂದು ರೀತಿಯಲ್ಲಿ ಅರ್ಧ ವಾರ್ಷಿಕ ಪರೀಕ್ಷೆಯಾಗಿತ್ತು. ಆಗ ಅವರು ನನಗೆ ಏನೇನೋ ಕೆಟ್ಟದಾಗಿ ಬೈದರು. ನನಗೆ ಕೋಪ ಬಂತು. ಮರು ದಿನ ನಾರಾಯಣ ಮೇಷ್ಟ್ರ ಬಳಿ ಹೋಗಿ ನಾನು ಮಾತನಾಡಬೇಕೆಂದು ನಿರ್ಧರಿಸಿದಾಗ ನಮ್ಮ ಇಂಗ್ಲಿಷ್ ಮೇಷ್ಟ್ರು ಸ್ಟೀಫನ್ ನನಗೆ ತಾಳ್ಮೆ 'ಹೇಳಿದರು. ಅವರಿಗೆ ನನ್ನ ಮೇಲೆ ಅಪಾರವಾದ ಪ್ರೀತಿ. "ಹಾಗೆಲ್ಲ ಮಾಡಬೇಡ. ಇದೆಲ್ಲಾ ಜೀವನದಲ್ಲಿ ಸಹಜ. ನನಗೆ ನಿನ್ನ ಮೇಲೆ ತುಂಬಾ ವಿಶ್ವಾಸವಿದೆ. ನೀನು ಸತ್ಯ ಹೇಳಿ ಕಾಶ್ಮೀರಕ್ಕೆ ಚಿತ್ರೀಕರಣ ನೋಡಲು ಹೋಗಿದ್ದು ನನಗೆ ಇಷ್ಟವಾಯಿತು. ನೀನು ಬೇರೆ ಹುಡುಗರ ಥರ ಸುಳ್ಳು ಹೇಳಲಿಲ್ಲ" ಎಂದು ಬುದ್ಧಿವಾದವನ್ನು ಹೇಳಿದರು.

ಆದರೂ ನನಗೆ ನಾರಾಯಣ ಮೇಷ್ಟ್ರ ವರ್ತನೆ ಬಗ್ಗೆ ಬೇಸರ ಹುಟ್ಟಿತ್ತು. ಅದನ್ನು ಮರೆಯಲು ನಾನು ಆಟದಲ್ಲಿ ಹೆಚ್ಚು ಇನ್ವಾಲ್ವ್ ಆಗುತ್ತಿದ್ದೆ. ನಮ್ಮ ಶಾಲೆಯಲ್ಲಿ ಗ್ರೀನ್ ಹೌಸ್, ರೆಡ್ ಹೌಸ್, ಬ್ಲೂ ಹೌಸ್ ಮತ್ತು ಎಲ್ಲೋ ಹೌಸ್ ಎಂಬ ನಾಲ್ಕು ತಂಡಗಳಿದ್ದವು. ನಾನು ಮತು ನಮ್ಮ ಕ್ರಿಕೆಟ್ ಕ್ಯಾಪ್ಟನ್ ಗ್ರೀನ್ ಹೌಸ್ ತಂಡದಲ್ಲಿದ್ದೆವು. ಹೀಗೆ ನಾನು ಎಲ್ಲ ಬೇಸರಗಳನ್ನು ಮರೆತು ನನ್ನ ಗೆಳೆಯರೊಂದಿಗೆ ಆಟದಲ್ಲಿ ಮಗ್ನನಾಗಿದ್ದೆ. ಆಗ ಬಂತು ನೋಡಿ ಫೈನಲ್ ಪರೀಕ್ಷೆ. ಫೈನಲ್ ಪರೀಕ್ಷೆಯಲ್ಲಿ ಮತ್ತೆ ನಾರಾಯಣ್ ಮೇಷ್ಟ್ರು ಅದೇ ತರಹ ರಾಜಕೀಯ ಮಾಡಿದರು. ಅದನ್ನು ಹೇಳುತ್ತೇನೆ ಕೇಳಿ....

(ಮುಂದಿನ ವಾರಕ್ಕೆ....)

ಮರೆಯಲಾಗದ ಸುಧೀಂದ್ರರಿಗೆ ಶ್ರದ್ಧಾಂಜಲಿ


ಡಿ.ವಿ. ಸುಧೀಂದ್ರ ನಿಧನ ಹೊಂದಿದ್ದಾರೆ.

ಹೀಗೆಂದರೆ ಖಂಡಿತ ಅವರಿಗೆ ನಾವು ಸರಿಯಾದ ಶ್ರದ್ಧಾಂಜಲಿ ಅರ್ಪಿಸಿದಂತೆ ಆಗುವುದಿಲ್ಲ. ಸುಧೀಂದ್ರ ಅವರ ನಿಧನದಿಂದ ಕನ್ನಡ ಚಿತ್ರರಂಗದ ಇತಿಹಾಸಕ್ಕೆ ಮಂಕು ಬಡಿದಂತೆ, ಮುಸುಕಾದಂತೆ ಕಾಣಿಸುತ್ತಿದೆ. ಯಾಕೆಂದರೆ ಸುಧೀಂದ್ರ ಅವರ ನಿಧನದ ಜೊತೆಗೆ ಈ ಚಿತ್ರರಂಗದ ಅನೇಕ ಕತೆಗಳು, ದಂತ ಕತೆಗಳು, ನಿಗೂಢ ಕತೆಗಳು, ಯಾರಿಗೂ ತಿಳಿಯದ ಅನೇಕ ವಿಷಯಗಳು ಕೂಡ ಮಾಯವಾಗಿವೆ.

ಯಾಕೆಂದರೆ 947 ಚಿತ್ರಗಳಿಗೆ ಪ್ರಚಾರಕರ್ತರಾಗಿ ದುಡಿದ ಸುಧೀಂದ್ರ ಬರೀ ಪ್ರಚಾರಕರ್ತರಾಗಿ ಮಾತ್ರವಲ್ಲ, ಚಿತ್ರರಂಗದ ಜ್ಞಾನ ಭಂಡಾರವಾಗಿದ್ದರು. ಚಿತ್ರರಂಗದಲ್ಲಿ ಯಾರೇ ನಿಧನ ಹೊಂದಿದರೆ ಪತ್ರಕರ್ತರು ಸುಧೀಂದ್ರ ಅವರಿಗೇ ಫೋನು ಮಾಡಿ ಆ ವ್ಯಕ್ತಿಯ ಬಗ್ಗೆ ವಿಷಯ ತಿಳಿದುಕೊಳ್ಳುತ್ತಿದ್ದರು. ಯಾರಿಗೆ ಪ್ರಶಸ್ತಿ ದೊರೆತರೂ ಅವರ ಜಾತಕವನ್ನು ಸುಧೀಂದ್ರರಿಂದಲೇ ಪಡೆಯ ಬೇಕಾಗಿತ್ತು. ಹೀಗಾಗಿ ಅವರು ಚಿತ್ರರಂಗದ ನಡೆದಾಡುವ ಭಂಡಾರ ಎಂದೇ ಭಾವಿಸಬಹುದಾಗಿತ್ತು.

53 ವರ್ಷದ, ದಢೂತಿ ದೇಹದ ಸುಧೀಂದ್ರ ಮೇಲ್ನೋಟಕ್ಕೆ ಗಂಭೀರ ವ್ಯಕ್ತಿಯಂತೆ ಕಂಡರೂ ಅವರಲ್ಲಿ ಅಪಾರವಾದ ಹಾಸ್ಯ ಪ್ರಜ್ಞೆ ಇತ್ತು. ದೂರದ ಊರಿಗೆ ಚಿತ್ರೀಕರಣಕ್ಕೆ ನಾವು ಹೋದಾಗಲೆಲ್ಲ ಅವರ ಜೊತೆ ಕುಳಿತುಕೊಂಡರೆ ಹೊಟ್ಟೆ ಹುಣ್ಣಾಗುವಷ್ಟು ನಕ್ಕು ನಲಿಯುತ್ತಿದ್ದೆವು. ಯಾರಿಗೂ ನೋವಾಗದಂತೆ ಈ ಥಳುಕು ಬಳುಕು ಲೋಕದ ಹಲವಾರು ಅಂತರಂಗಗಳನ್ನು ಅವರು ತೆರೆದಿಡುತ್ತಿದ್ದರು. ದೊಡ್ಡ ದೊಡ್ಡ ನಟ ನಟಿಯರ ತುಂಟಾಟಗಳು, ಅನೇಕ ಪತ್ರಕರ್ತರ ಸಣ್ಣತನಗಳು, ಚಿತ್ರೋದ್ಯಮದಲ್ಲಿ ಬಹಿರಂಗವಾಗದ ಅನೇಕ ಅಪ್ರಿಯ ಸತ್ಯಗಳನ್ನು ಅತ್ಯಂತ ವರ್ಣರಂಜಿತವಾಗಿ ಹೇಳುವುದರಲ್ಲಿ ಇವರದು ಎತ್ತಿದ ಕೈ. ಹೀಗಾಗಿ ಪ್ರವಾಸ ಹೋದಾಗ ಇವರ ಜೊತೆ ಕುಳಿತುಕೊಳ್ಳುವುದೆಂದರೆ ನಮಗೊಂದು ರೀತಿಯಲ್ಲಿ ಚಿತ್ರರಂಗದ ಇತಿಹಾಸದೊಳಗೆ ಒಂದು ಸುತ್ತು ಹೊಡೆದು ಬಂದಂತಾಗುತ್ತಿತ್ತು.

ಇವರು ಯಾವತ್ತೂ ಯಾರ ಮೇಲೂ ಸಿಟ್ಟು ಗೊಂಡವರೇ ಅಲ್ಲ. ಪತ್ರಕರ್ತರ ಮತ್ತು ಉದ್ಯಮದ ನಡುವೆ ವಿವಾದ ಹುಟ್ಟಿದಾಗ ಸದಾ ಪತ್ರಕರ್ತರ ಬೆಂಬಲಕ್ಕೆ ನಿಲ್ಲುತ್ತಿದ್ದರು. ಉಳಿದ ಸಮಯದಲ್ಲೆಲ್ಲಾ ತಮಗೆ ಅನ್ನ



ನೀಡುತ್ತಿದ್ದ ನಿರ್ಮಾಪಕರನ್ನು ಬೆಂಬಲಿಸಿ ಅವರಿಗೆ ಪ್ರಚಾರ ನೀಡುತ್ತಿದ್ದರು. ಈ ಕಾರಣದಿಂದಲೇ ಅವರು 947 ಚಿತ್ರಗಳಿಗೆ ಪ್ರಚಾರ ನೀಡಿ ಒಂದು ರೀತಿಯಲ್ಲಿ ಗಿನ್ನಿಸ್ ದಾಖಲೆಗೆ ಅರ್ಹರಾಗಿದ್ದರು.

ಸಿನಿಮಾ ಲೋಕದಲ್ಲಿದ್ದರೂ ಇವರು ಮಹಾನ್ ದೈವಭಕ್ತ, ಶುದ್ಧ ಶಾಖಾಹಾರಿ. ಯಾವತ್ತೂ ಗುಂಡು ಮುಟ್ಟದವರೇ ಅಲ್ಲ, ಪತ್ರಕರ್ತರಿಗೆ ಮತ್ತು ಉದ್ಯಮದವರಿಗೆ ಏನಾದರೂ ನೆಪ ಮಾಡಿ ಬಾಳೆ ಎಲೆ ಊಟ ಹಾಕಿಸುವುದೆಂದರೆ ಇವರಿಗೆ ಎಲ್ಲಿಲ್ಲದ ಸಂತೋಷ. ಅಷ್ಟೇ ಅಲ್ಲ, 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಕಳೆದ ಆರು ವರ್ಷಗಳಿಂದ ಉದ್ಯಮದವರಿಗೆ ಮತ್ತು ಪತ್ರಕರ್ತರಿಗೆ ತಮ್ಮ ಸಂಸ್ಥೆಯಿಂದ ಪ್ರಶಸ್ತಿ ನೀಡುವ ಪರಿಪಾಠ ಆರಂಭಿಸಿದ್ದರು.

'ಸೊಸೆ ತಂದ ಸೌಭಾಗ್ಯ' ಚಿತ್ರದಿಂದ ಪ್ರಚಾರಕರ್ತರಾಗಿ ವೃತ್ತಿ ಜೀವನ ಆರಂಭಿಸಿದ ಸುಧೀಂದ್ರರವರ ಕೊನೆಯ ಚಿತ್ರ 'ಗುಡ್ ಲಕ್'. ಇವರು ಭಾಗವಹಿಸಿದ ಕೊನೆಯ ಸಮಾರಂಭ 'ಐಶ್ವರ್ಯ' ಚಿತ್ರದ್ದು. ಎರಡೂ ಪತ್ರಕರ್ತರ ಸಮಾರಂಭ ಎಂಬುದೇ ಇಲ್ಲಿ ಆಶ್ಚರ್ಯ.

ಸುಧೀಂದ್ರ ಅವರ ನಿಧನದಿಂದ ನಿಜಕ್ಕೂ ಚಿತ್ರೋದ್ಯಮ ಮುಂಬರುವ ದಿನಗಳಲ್ಲಿ ಕಷ್ಟ ಅನುಭವಿಸಲಿದೆ. ಯಾಕೆಂದರೆ ಚಿತ್ರರಂಗ ಮತ್ತು ನಟ-ನಟಿಯರ ಬಗ್ಗೆ ಸುಧೀಂದ್ರರಷ್ಟು ಬೇರಾರಿಗೂ ಗೊತ್ತಿರಲಿಲ್ಲ. ಚಿತ್ರರಂಗದ ಇತಿಹಾಸಕ್ಕೆ ಸಂಬಂಧಪಟ್ಟ ಪುಸ್ತಕವಿಲ್ಲದ ಕಾರಣ ಬಹುಶಃ ಮುಂಬರುವ ದಿನಗಳಲ್ಲಿ ಇವರ ಪ್ರಾಮುಖ್ಯತೆ ಎಲ್ಲರಿಗೂ ಅರಿವಾಗಬಹುದು.

53 ವರ್ಷ ವಯಸ್ಸಿನಲ್ಲೇ ನಗುಮುಖದ ಸುಧೀಂದ್ರ ನಮ್ಮನ್ನೆಲ್ಲಾ ಬಿಟ್ಟುಹೋಗುತ್ತಾರೆಂದು ಯಾರೂ ಊಹಿಸಿರಲಿಲ್ಲ.

ಸುಧೀಂದ್ರರ ನಿಧನದಿಂದ ಚಿತ್ರರಂಗ ಮತ್ತು ಪತ್ರಕರ್ತರ ನಡುವಿನ ಒಂದು ಅಪರೂಪದ ಕೊಂಡಿ ಕಳಚಿಹೋದಂತಾಗಿದೆ.

ಪ್ರೀತಿಯ ಸುಧೀಂದ್ರರಿಗೆ ಪತ್ರಿಕೆಯ ಮತ್ತು ಓದುಗರ ಪರವಾಗಿ ನಮ್ಮ ಶ್ರದ್ಧಾಂಜಲಿ...

-ಶೆಣೈ

R.B.P. LANKESH, Kannada Weekly Price Rs. 10/- 12-7-2006 RNI No. KARKAN2005/14648 Regd.No.KA/BG(S)/2036/2005

ಶಿವ-ವಿಷ್ಣು-ರಮೇಶ್ ನಮೋ ನಮಃ!



ಇದು ಗಾಳಿಸುದ್ದಿಯಲ್ಲವಾದ್ದರಿಂದ ತೀರಾ ನಿರ್ಲಕ್ಷಿಸುವಂತಿಲ್ಲ.

ಈ ವರ್ಷದ ಕೊನೆಯೊಳಗೆ ಸಾಹಸಸಿಂಹ ವಿಷ್ಣುವರ್ಧನ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಒಂದೇ ಚಿತ್ರದಲ್ಲಿ ಒಟ್ಟಿಗೆ ನಟಿಸುವುದು ಬಹುತೇಕ ಖಚಿತವಾಗಿದೆ. ಇವರಿಬ್ಬರನ್ನು ಒಟ್ಟಿಗೆ ಸೇರಿಸುವಲ್ಲಿ ಕೊನೆಗೂ ಯಶಸ್ವಿಯಾದವರು ಯಾರು ಗೊತ್ತೇ....? ನಾಯಕ ನಟ ರಮೇಶ್.

ಆದರೆ ನಟ ರಮೇಶ್ ನಿರ್ದೇಶಕರಾಗಿ ಇವರಿಬ್ಬರನ್ನು ಒಂದೇ ಚಿತ್ರದಲ್ಲಿ ಸೇರಿಸಿದ್ದಾರೆ. ಎಲ್ಲವೂ ನಿರೀಕ್ಷೆಯಂತೆ ನಡೆದರೆ, ರಮೇಶ್ ನಿರ್ದೇಶನದಲ್ಲಿ ವಿಷ್ಣು-ಶಿವಣ್ಣ ಜೋಡಿಯ ಹೊಸ ಚಿತ್ರ ಈ ವರ್ಷವೇ ಸೆಟ್ಟೇರಲಿದೆ.

ಈ ಚಿತ್ರ ಸೆಟ್ಟೇರುವುದರೊಂದಿಗೆ ಕನ್ನಡ ಚಿತ್ರರಂಗದಲ್ಲಿ ದ್ವೇಷದ ಅಧ್ಯಾಯವೊಂದು ಮುಕ್ತಾಯಗೊಂಡು, ಸ್ನೇಹದ ಹೊಸ ಅಧ್ಯಾಯ, ಆರಂಭವಾಗಲಿದೆ. ಇದೊಂದು ನಿಜಕ್ಕೂ ಹರ್ಷದಾಯಕ ಮತ್ತು ಆಶಾದಾಯಕ ಸುದ್ದಿ. ಇದರೊಂದಿಗೆ ಒಳಜಗಳದಿಂದ ಬಳಲುತ್ತಿರುವ ಉದ್ಯಮ ಚೇತರಿಸಿದಂತಾಗುತ್ತದೆ.



'ತನನಂ ತನನಂ' ಚಿತ್ರದಲ್ಲಿ ರಮ್ಯಾ

ಶಿವು ಜೊತೆ 'ಸಂತ'ಸದಲ್ಲಿ ರಮ್ಯ!

'ಹ್ಯಾಟ್ರಿಕ್ ಹೀರೋಯಿನ್' ಎಂಬ ಖ್ಯಾತಿಗೆ ಒಳಗಾಗಿದ್ದ ನಾಯಕಿ ರಮ್ಯಳ ದೆಸೆ ಇನ್ನಷ್ಟು ಗಟ್ಟಿಯಾಗಿದೆ. ಗಾಂಧಿನಗರದಲ್ಲಿ ರೀಮೇಕ್ ಚಿತ್ರಗಳಲ್ಲಿ ನಟಿಸದ ಏಕೈಕ ನಟ ಶಿವರಾಜ್‌ಕುಮಾರ್‌ರವರ ಮುಂದಿನ ಚಿತ್ರಕ್ಕೆ ರಮ್ಯ ನಾಯಕಿಯಾಗಿ ಆಯ್ಕೆಯಾಗಿದ್ದಾಳೆ.

'ಜೋಗಿ', 'ಅಣ್ಣ-ತಂಗಿ' ಚಿತ್ರಗಳ ಯಶಸ್ಸು, 'ಕುಮಾರರಾಮ'ದ ನಿರ್ಮಾಣದ ನಂತರ ಶಿವರಾಜ್‌ಕುಮಾರ್ ತಾರಾಮೌಲ್ಯ ಏಕ್‌ದಂ ಏರಿರುವುದರಿಂದ ರಮ್ಯಾಳ ಪಾಲಿಗೆ ಕೂಡಾ ಈ ಹೊಸ ಚಿತ್ರ ವಿಶೇಷವೆನಿಸಿದೆ.

ಈ ಚಿತ್ರವನ್ನು ಕನಕಪುರ ಶ್ರೀನಿವಾಸ್ ಮತ್ತು ಶ್ರೀಕಾಂತ್ ನಿರ್ಮಿಸಲಿದ್ದಾರೆ. ಉಪೇಂದ್ರ ನಾಯಕನಾಗಿ ನಟಿಸಿದ 'ನಾಗರಹಾವು' ಚಿತ್ರವನ್ನು ನಿರ್ದೇಶಿಸಿದ ನಂತರ ಅಜ್ಞಾತವಾಗಿದ್ದ ಮುರಳಿಮೋಹನ್ ಈ ಚಿತ್ರದ ಮುಖಾಂತರ ಮತ್ತೆ ನಿರ್ದೇಶಕರಾಗಿ ಲೈಮ್‌ಲೈಟಿಗೆ ಬರಲಿದ್ದಾರೆ.

'ಸಂತ'ದ ನಾಯಕ ಶಿವರಾಜ್‌ಕುಮಾರ್ ತನ್ನ ಪಾತ್ರಕ್ಕಾಗಿ ಕಾಸ್ಟ್ಯೂಮ್ಸ್‌ಗಳನ್ನು ಆಯ್ಕೆ ಮಾಡಲು ಸಿಂಗಾಪೂರ್‌ಗೆ ಹೋಗಿ ದ್ದಾರೆ.

ಆದರೆ 'ಸಂತ' ರೌಡಿಸಂ ಕಥೆನೋ, ಸೆಂಟಿಮೆಂಟಲ್, ಕಥೇನೋ ಎಂಬುದರ ಬಗ್ಗೆ ಮಾತ್ರ ಯಾರೂ ಇನ್ನೂ ಬಾಯಿಬಿಟ್ಟಿಲ್ಲ.

'ಭೂತ'ಕಾಲದಲ್ಲಿ 'ಮೋಹಿನಿ'!



'ಮೋಹಿನಿ' ಚಿತ್ರ ತಂಡದ ಪಬ್ಲಿಸಿಟಿ ಶೈಲಿ ನೋಡಿ.


ಈ ತಂತ್ರಜ್ಞಾನದ ಯುಗದಲ್ಲಿ ಎಲ್ಲರೂ ಟಿವಿ, ಮೊಬೈಲ್, ಈ-ಮೈ... ಶರಣಾಗಿ ತಮ್ಮ ಚಿತ್ರದ ಪಬ್ಲಿಸಿಟಿ ಮಾಡಿದರೆ, 'ಮೋಹಿನಿ' ಚಿತ್ರತ... ಬೇರೆಯೇ ದಾರಿ ಹಿಡಿದಿದೆ.

ಮೊನ್ನೆ ಮೋಹಿನಿಯ ನಿರ್ದೇಶಕ ರಾಜೇಂದ್ರಸಿಂಗ್ ಬಾಬು, ನಾಯ... ಆದಿತ್ಯ, ಸಂಗೀತ ನಿರ್ದೇಕ ಹಂಸಲೇಖಾ ಮತ್ತು ನಿರ್ಮಾಪಕ ಮೋಹ... ತೆರೆದ ಜೀಪ್‌ನಲ್ಲಿ ಮೂರು ದಿನಗಳ ಕಾಲ ಕರ್ನಾಟಕ ಪ್ರವಾಸ ಮಾ... ದರು. ಎಲ್ಲೆಲ್ಲಿ ಜನ ಇದ್ದಾರೋ, ಅಲ್ಲಿ ಜೀಪ್ ನಿಲ್ಲಿಸಿ, ಭಾಷಣ ಬಿಗಿ... ಕ್ಯಾಸೆಟ್ ಬಿಡುಗಡೆ ಮಾಡಿದ ಈ ತಂಡ ಈಗಾಗಲೇ ದಾವಣಗ... ಚಿತ್ರದುರ್ಗ, ಹಾಸನ ಸೇರಿದಂತೆ ಐದಾರು ಜಿಲ್ಲೆಗಳನ್ನು ಸುತ್ತಾಡಿ... ಎರಡನೇ ಸುತ್ತಿನ ಪ್ರವಾಸದಲ್ಲಿ ಇನ್ನಷ್ಟು ಜಿಲ್ಲಾ ಕೇಂದ್ರಗಳಿಗೆ ಹೋಗಲಿದ್ದಾರೆ.

ಅದು ಏನೇ ಇರಲಿ, ಸಿನಿಮಾ ನಟ-ನಟಿಯರು ಜನರಿಂದ ದೂರವಾ... ಈಗ ಬಂಗಲೆಯೊಳಗೆ ಕುಳಿತಿರುವಾಗ ಬಾಬು ತಂಡ ಜನರ ಬ... ಹೋಗುತ್ತಿದೆ. ಹಳೆಯ ಕಾಲದ 'ಮೋಹಿನಿ' ಚಿತ್ರಕ್ಕೆ ಹೊಸ ತಂತ್ರಜ್ಞಾನ... ಲೇಪ ನೀಡಿದ ಬಾಬು ಅದರ ಪ್ರಚಾರಕ್ಕೆ ಮಾತ್ರ ಹಳೇಕಾಲದ ಶೈಲಿ... ಶರಣಾಗಿರುವುದು ವಿಚಿತ್ರವಾಗಿ ಕಾಣಿಸುತ್ತಿದೆ.

'ಬ್ರಾಹ್ಮಣ'ನ ತಮಿಳು 'ಸ್ನೇಹ'

ಮೂರ್‍ನಾಲ್ಕು ಚಿತ್ರಗಳಲ್ಲಿ ಒಮ್ಮೆಗೆ ನಟಿಸುತ್ತಿರುವ ರವಿಚಂದ್ರನ್‌ಗೆ ಈಗ ನಾಯಕಿಯರ ಕೊರತೆಯಾಗಿದೆ.




'ನೀಲಕಂಠ' ಚಿತ್ರಕ್ಕೆ ಇನ್ನೂ ನಾಯಕಿ ಫಿಕ್ಸ್ ಆಗದಿದ್ದರೂ, ಮೊನ್ನೆ-ಮೊನ್ನೆ ಆರಂಭವಾದ 'ಬ್ರಾಹ್ಮಣ' ಚಿತ್ರಕ್ಕೆ ತಮಿಳಿನ ಸ್ನೇಹ ಎಂಬ ನಾಯಕಿಯನ್ನು ಆಯ್ಕೆ ಮಾಡಿದ್ದಾರೆ. ಸ್ನೇಹ ಈಗಾಗಲೇ ತಮಿಳನಾಡಿನಲ್ಲಿ ದೊಡ್ಡ ಹೆಸರು ಮಾಡಿರುವುದರಿಂದ ಆಕೆಯ ಆಗಮನದಿಂದಾಗಿ 'ಬ್ರಾಹ್ಮಣ' ಚಿತ್ರ ಪ್ರೇಕ್ಷಕರಲ್ಲಿ ಈಗಲೇ ಕುತೂಹಲ ಸೃಷ್ಟಿಸಿದೆ.

ಮತ್ತೇರಿಸುವ ಮುತ್ತೇ....

ಹಾಲಿವುಡ್ ನಟ ಕ್ರಿಸ್‌ಪೈನ್ ಪ್ರಕಾರ ಲಿಂಡ್ಸೆ ಲೋಹನ್‌ಳಂತಹ ಕಿಸ್ಸರ್ ಈ ಜಗತ್ತಿನಲ್ಲೇ ಇಲ್ವಂತೆ! ಅಂಥಾದ್ದೇನು ಕಿಸ್ಸು ಕೊಡುತ್ತೆ ಈ ಲಿಂಡ್ಸೆ ಎಂಬ ಹುಡುಗಿ?

ಲಿಂಡ್ಸೆಯ ದೊಡ್ಡದಾದ ನುಣುಪಾದ ತುಟಿಗಳೊಂದಿಗೆ ಲಿಪ್‌ಲಾಕ್ ಎಂಜಾಯ್ ಮಾಡಿದ ಕ್ರಿಸ್ ಪೈನ್ ಥಟ್ಟನೆ ಹೇಳಿದನಂತೆ: Just my luck! ಮತ್ತೆ ಮರುಕ್ಷಣವೇ ತುಟಿ-ತುಟಿ, ನಾಲಿಗೆ-ನಾಲಿಗೆಗಳ ಸಂಘರ್ಷ!



ಈ ಕ್ರಿಸ್‌ಪೈನ್ ಚಿಕ್ಕವನಿದ್ದಾಗಲೇ ಕಿಸ್ ಕಲೆ ಕಲಿತನಂತೆ.

ಅದೆಲ್ಲ ಇರಲಿ, ಈ 'ಕಿಸ್‌ಬಾಯಿ'ದಾಸನ ಮಾತು ಬಿಟ್ಹಾಕಿ... ನಮಗೆ ಈ ಲಿಂಡ್ಸೆಯ ತುಟಿಗಳೇ ಕಣ್ಣೆದುರು ಕಾಣುತ್ತಿವೆ!

ಯಾವುದಕ್ಕೂ 'ಕಿಸ್ಮತ್' ಇರಬೇಕಲ್ಲವೇ?

ಮಾತಾಡಲಿದೆ 'ಮಲ್ಲಿಗೆ'

'ಮಾತಾಡ್ ಮಾತಾಡ್ ಮಲ್ಲಿಗೆ'ಗೆ ಇದ್ದ ಕಂಟಕಗಳೆಲ್ಲಾ ದೂರ... ವಾಗಿವೆ. ಮುಂದಿನ ವಾರ ಈ ಚಿತ್ರ ಸೆಟ್ಟೇರುವುದು ಬಹುತೇಕ ಪಕ್ಕಾ ಆಗಿದೆ.

ಈ ಹಿಂದೆ ಅನೌನ್ಸ್ ಮಾಡಿದಂತೆ ವಿಷ್ಣು ಮತ್ತು ಸುಹಾಸಿನಿಯೇ...



ಈ ಚಿತ್ರದ ಜೋಡಿ. ನಾಗ್ತಿಹಳ್ಳಿ ಚಂದ್ರಶೇಖರ್ ಅವರೇ ನಿರ್ದೇಶಕರು. ಕೊಬ್ಬರಿ ಮಂಜು ಇದರ ನಿರ್ಮಾಪಕರು.

ಎಷ್ಟೋ ವರ್ಷಗಳ ನಂತ... ವಿಷ್ಣು ಒಂದು ಸ್ವಮೇಕ್ ಚಿತ್ರದಲ್ಲಿ ನಟಿಸುತ್ತಿರುವುದು, ಮತ್ತು ತನ್ನ ಹಳೆಯ ಜಮಾನದ ನಾಯಕಿ ಸುಹಾಸಿ... ಜೊತೆಗೆ ನಟಿಸುತ್ತಿರುವುದು ಈ ಚಿತ್ರದ ವೈಶಿಷ್ಟ್ಯಗಳಾಗಿವೆ.

PRINTER, PUBLISHER, PROPHIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44